ಮೊರಬದ ಶ್ರೀ ವೀರಭದ್ರೇಶ್ವರಸ್ವಾಮಿ - ಸಾಂಸ್ಕೃತಿಕ ಅಧ್ಯಯನ

ಜಾನಪದದಲ್ಲಿ ಮಾಸ್ಟರ್ ಆಫ್ ಫಿಲಾಸಫಿ (ಎಂ.ಫಿಲ್.) ಪದವಿಯ ಆಂಶಿಕ
ಅವಶ್ಯಕತೆಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಕಿರು ಪ್ರಬಂಧ

ಸಂಶೋಧಕ
ಆರ್. ವಿಜಯಕುಮಾರ್

ಮಾರ್ಗದರ್ಶಕರು
ಡಾ. ಮಂಜುನಾಥ ಬೇವಿನಕಟ್ಟಿ

ಜಾನಪದ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೦೨ - ೨೦೦೩

ಮೊರಬದ ಶ್ರೀ ವೀರಭದ್ರೇಶ್ವರ ಸ್ವಾಮಿ - ಸಾಂಸ್ಕೃತಿಕ ಅಧ್ಯಯನ

ಜಾನಪದದಲ್ಲಿ ಮಾಸ್ಟರ್ ಆಫ್ ಫಿಲಾಸಫಿ (ಎಂ.ಫಿಲ್.) ಪದವಿಯ ಆಂಶಿಕ ಅವಶ್ಯಕತೆಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಕಿರು ಪ್ರಬಂಧ

ಸಂಶೋಧಕ

ಆರ್. ವಿಜಯಕುಮಾರ

ಮಾರ್ಗದರ್ಶಕರು

ಡಾ. ಮಂಜುನಾಥ ಬೇವಿನಕಟ್ಟಿ

ಜಾನಪದ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬.

೨೦೦೨ - ೨೦೦೩

ಮಾರ್ಗದರ್ಶಕರ ಪ್ರಮಾಣ ಪತ್ರ

ಶ್ರೀ ಆರ್. ವಿಜಯಕುಮಾರ ಇವರು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ **''ಮೊರಬದ ಶ್ರೀ ವೀರಭದ್ರೇಶ್ವರ ಸ್ವಾಮಿ - ಸಾಂಸ್ಕೃತಿಕ ಅಧ್ಯಯನ''** ಎಂಬ ಕಿರು ಪ್ರಬಂಧವನ್ನು ಸಿದ್ಧಪಡಿಸಿದ್ದಾರೆ. ೨೦೦೨-೦೩ನೇ ಶೈಕ್ಷಣಿಕ ಸಾಲಿನ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದಾರೆ. ಈ ಕಿರು ಪ್ರಬಂಧವನ್ನು ಭಾಗಶಃವಾಗಲಿ, ಪೂರ್ಣವಾಗಿ ಆಗಲಿ ಬೇರಾವುದೇ ಉದ್ದೇಶ ಅಥವಾ ಯಾವುದೇ ಪದವಿಗಾಗಿ ಈ ಹಿಂದೆ ಸಲ್ಲಿಸಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ : ೨೧-೦೪-೨೦೦೩

ಸ್ಥಳ : ವಿದ್ಯಾರಣ್ಯ.

ಮಾರ್ಗದರ್ಶಕರು

(ಮಂಜುನಾಥ ಬೇವಿನಕಟ್ಟಿ)

ಮುಖ್ಯಸ್ಥರು

ಜಾನಪದ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬.

ಸಂಶೋಧಕರ ಪ್ರಮಾಣ ಪತ್ರ

ಕನ್ನಡ ವಿಶ್ವವಿದ್ಯಾಲಯದ ಜಾನಪದ ವಿಭಾಗದ ಮುಖ್ಯಸ್ಥರಾದ ಡಾ. ಮಂಜುನಾಥ ಬೇವಿನಕಟ್ಟಿ ಅವರ ಮಾರ್ಗದರ್ಶನದ **''ಮೊರಬದ ಶ್ರೀ ವೀರಭದ್ರೇಶ್ವರ ಸ್ವಾಮಿ - ಸಾಂಸ್ಕೃತಿಕ ಅಧ್ಯಯನ''** ಎಂಬ ವಿಷಯವನ್ನು ಕುರಿತು ಸಂಶೋಧನೆ ಮಾಡಿದುದರ ಫಲ ಈ ಕಿರು ಪ್ರಬಂಧ. ೨೦೦೨-೦೩ನೇ ಶೈಕ್ಷಣಿಕ ಸಾಲಿನ ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗಾಗಿ ಸಿದ್ಧಪಡಿಸಲಾಗಿದೆ. ಈ ಮೊದಲು, ಈ ಕಿರು ಪ್ರಬಂಧವನ್ನು ವಿಶ್ವವಿದ್ಯಾನಿಲಯದ ಯಾವುದೇ ಪದವಿಗಾಗಿ ಸಲ್ಲಿಸಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

vijaykumar

ದಿನಾಂಕ : ೨೧-೦೪-೨೦೦೩
ಸ್ಥಳ : ವಿದ್ಯಾರಣ್ಯ

(ಆರ್. ವಿಜಯಕುಮಾರ)
ಸಂಶೋಧನಾ ವಿದ್ಯಾರ್ಥಿ
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ.
ವಿದ್ಯಾರಣ್ಯ - ೫೮೩ ೨೭೬.

ಕೃತಜ್ಞತೆಗಳು

- ಕನ್ನಡ ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್. ಅಧ್ಯಯನ ಮಾಡಲು ಅವಕಾಶ ಕಲ್ಪಿಸಿಕೊಟ್ಟ ಮಾನ್ಯ ಕುಲಪತಿಗಳಾದ ಡಾ. ಹೆಚ್.ಜೆ. ಲಕ್ಕಪ್ಪಗೌಡ ಅವರಿಗೆ, ಕುಲಸಚಿವರಾದ ಡಾ. ಕೆ.ವಿ.ನಾರಾಯಣ ಅವರಿಗೆ, ಅಧ್ಯಯನಾಂಗದ ನಿರ್ದೇಶಕರಾದ ಕರೀಗೌಡ ಬೀಚನಹಳ್ಳಿ ಅವರಿಗೆ ಕೃತಜ್ಞತೆಗಳು.

- ಈ ಪ್ರಬಂಧದ ಸಿದ್ಧತೆಗೆ ಸಲಹೆ ಮತ್ತು ಮಾರ್ಗದರ್ಶನ ನೀಡಿದ ಜಾನಪದ ವಿಭಾಗದ ಮುಖ್ಯಸ್ಥರಾದ ಡಾ. ಮಂಜುನಾಥ ಬೇವಿನಕಟ್ಟಿ ಅವರಿಗೆ ಕೃತಜ್ಞತೆಗಳು.

- ಅತ್ಯಂತ ಕಾಳಜಿ ವಹಿಸಿ ಎಂ.ಫಿಲ್. ಅಧ್ಯಯನದ ಪಠ್ಯಕ್ರಮವನ್ನು ಬೋಧಿಸಿದ ಜಾನಪದ ವಿಭಾಗದ ಅಧ್ಯಾಪಕ ವೃಂದದವರಾದ ಡಾ. ಸ.ಚಿ. ರಮೇಶ್, ಡಾ. ಮೊಗಳ್ಳಿ ಗಣೇಶ್, ಡಾ. ಹೆಚ್.ಕೆ. ನಾಗೇಶ್, ಸಿ.ಟಿ.ಗುರುಪ್ರಸಾದ್, ಹರಿಶ್ಚಂದ್ರ ಸಾಯಿಬಣ್ಣ ದಿಕ್ಸಂಗೀಕರ್, ಮತ್ತು ಬೋಧಕೇತರ ಸಿಬ್ಬಂದಿಯವರಾದ ವೀರೇಶಪ್ಪ, ಹನುಮಂತಪ್ಪ ಅವರಿಗೆ ಕೃತಜ್ಞತೆಗಳು.

- ಈ ಪ್ರಬಂಧದ ಸಿದ್ಧತೆಗೆ ಗ್ರಂಥಗಳನ್ನು ಒದಗಿಸಿದ ಗ್ರಂಥಾಲಯದ ಸಿಬ್ಬಂದಿಗೆ, ಅಧ್ಯಯನ ಬೆಳವಣಿಗೆಗೆ ಕಾರಣಕರ್ತರಾದ ತಂದೆ ಶ್ರೀ ಆರ್. ಮಹಾದೇವಪ್ಪ, ತಾಯಿ ಶ್ರೀಮತಿ ಗೌರಮ್ಮ ಇವರಿಗೆ ನನ್ನ ಅನಂತ ವಂದನೆಗಳು.

- ಕ್ಷೇತ್ರ ಕಾರ್ಯದ ಸಮಯದಲ್ಲಿ ಮಾಹಿತಿ ನೀಡಿ ಸಹಕರಿಸಿದ ಮೊರಬ ಗ್ರಾಮದ ಜನಪದ ವಕ್ತೃ ಬಂಧುಗಳಿಗೆ, ಜೊತೆಗಿದ್ದು ಸಹಕರಿಸಿದ ಎಂ. ಎಂ. ಮರುಳುಸಿದ್ಧಯ್ಯ, ಆರ್.ಕೆ. ಶಂಕರಾಚಾರಿ, ಬಿ.ಮಂಜುನಾಥ, ಜಿ.ವಿ. ಕುಮಾರಸ್ವಾಮಿ ಹಾಗೂ ತಿಪ್ಪೇಸ್ವಾಮಿ ಅವರಿಗೆ ಕೃತಜ್ಞತೆಗಳು.

- ಈ ಪ್ರಬಂಧದ ಸಿದ್ಧತೆಗೆ ಸಲಹೆ ಮತ್ತು ಸಹಕಾರ ನೀಡಿದ ಸಂಶೋಧನಾ ವಿದ್ಯಾರ್ಥಿ ಮಿತ್ರರಾದ ಸಣ್ಣ ಪಾಪಯ್ಯ, ಜಾಜಿ ದೇವೇಂದ್ರಪ್ಪ, ನನ್ನ ಸ್ನೇಹಿತಳಾದ ಜ್ಯೋತಿ ಮತ್ತು ಎಲ್ಲಾ ಸ್ನೇಹಿತರಿಗೆ ನನ್ನ ಅನಂತ ಕೃತಜ್ಞತೆಗಳು.

- ಈ ಪ್ರಬಂಧದಲ್ಲಿನ ದೋಷಗಳನ್ನು ತಿದ್ದುವುದರ ಮೂಲಕ, ಸಕಾಲಕ್ಕೆ ಗಣಕಯಂತ್ರದಲ್ಲಿ ಅಕ್ಷರ ಸಂಯೋಜನೆ ಮಾಡಿಕೊಟ್ಟ ಹೊಸಪೇಟೆಯ 'ಶಶಿ ಕಂಪ್ಯೂಟರ್'ನ ಮಾಲಕರಾದ ಜಂಬುನಾಥ ಹೆಚ್.ಎಂ. ಅವರಿಗೆ ನನ್ನ ಅನಂತ ವಂದನೆಗಳು.

ಆರ್. ವಿಜಯಕುಮಾರ

ಪರಿವಿಡಿ

★ ★ ★ ★ ★

ಅಧ್ಯಾಯ - ಒಂದು

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ - ಒಂದು

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಜಾನಪದ ಅಧ್ಯಯನವು ಮೊದಲು ಸಂಗ್ರಹ ರೂಪದಲ್ಲಿ ಮಾತ್ರ ತನ್ನ ವ್ಯಾಪ್ತಿಯನ್ನು ಹೊಂದಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ವೈಜ್ಞಾನಿಕವಾಗಿ, ಶಾಸ್ತ್ರೀಯ ಶಿಸ್ತುಬದ್ಧ ಕ್ರಮದಿಂದಾಗಿ ಗ್ರಾಮ, ಜಾತ್ರೆ, ಜನಾಂಗ, ಹಬ್ಬ, ಬುಡಕಟ್ಟು ಸಂಪ್ರದಾಯಗಳ ಅಧ್ಯಯನಗಳು ನಡೆಯುತ್ತಿವೆ. ಕೇವಲ ಕಥೆ, ಗಾದೆ, ಒಗಟು, ಗೀತೆಗಳ ಮೂಲಕ ಸಂಸ್ಕೃತಿಯನ್ನು ಕಟ್ಟಿಕೊಡುವ ಪ್ರಯತ್ನಗಳನ್ನು ಮಾಡುತಿದ್ದರು. ಇತ್ತೀಚಿನ ದಿನಗಳಲ್ಲಿ ಜಾನಪದದ ಪ್ರತಿಯೊಂದು ಅಂಶಗಳನ್ನಿಟ್ಟುಕೊಂಡು ಅಧ್ಯಯನ ಮಾಡುತ್ತಿದ್ದಾರೆ. ಜಾನಪದವನ್ನು ಅನ್ಯಜ್ಞಾನ ಶಿಸ್ತುಗಳ ಮುಖೇನ ಅಧ್ಯಯನಕ್ಕೆ ಒಳಪಡಿಸುತ್ತಿದ್ದಾರೆ. ಅಲಕ್ಷಿತ ವಿಷಯಗಳನ್ನು ಮುನ್ನೆಲೆಗೆ ತರುತ್ತಿದ್ದಾರೆ.

ಗ್ರಾಮೀಣ ಪ್ರದೇಶಗಳಲ್ಲಿ ಕಂಡುಬರುವ ಆಕರಗಳನ್ನು ಸಾಂಸ್ಕೃತಿಕ ಚರಿತ್ರೆಯ ಹಿನ್ನೆಲೆಯಲ್ಲಿ ಪುನರ್‌ರಚಿಸುವುದು ಇಂದು ಅನಿವಾರ್ಯವಾಗಿದೆ. ಇಂದಿನ ಜಗತ್ತಿನ ಎಲ್ಲಾ ವಿಧಿ ವಿಧಾನಗಳು, ಆಧುನೀಕರಣದ ಪ್ರಭಾವಕ್ಕೊಳಗಾಗಿ ವಿವಿಧ ರೀತಿಯ ಪ್ರಕ್ರಿಯೆಗಳಿಂದ ಹಾಗೂ ವಿಜ್ಞಾನದ ಹೊಸ ಹೊಸ ಆವಿಷ್ಕಾರಗಳಿಂದ ತನ್ನದೇ ಆದ ಬದಲಾವಣೆಗೊಳಗಾಗಿ ಹೊಸ ರೂಪ ಪಡೆಯುತ್ತಿವೆ. ಪ್ರತಿಯೊಂದು ಸಮುದಾಯವು ತನ್ನ ಸ್ವಂತಿಕೆಯನ್ನು ಮರು ರೂಪಿಸಲು ಪರಂಪರಾನುಗತವಾಗಿ ಬಂದಂತಹ ಕೆಲವು ಸಾಂಸ್ಕೃತಿಕ ಮಹತ್ವಗಳ ಬಗ್ಗೆ ಅಧ್ಯಯನ ಮಾಡಬೇಕಾದುದು ಅವಶ್ಯಕವಾಗಿದೆ.

ಗ್ರಾಮದ ದೈವಗಳಿಗೆ ಸಂಬಂಧಿಸಿದ ಹಾಗೂ ಅಲ್ಲಿನ ಜನಪದರಲ್ಲಿ ಬಹಳ ಹಿಂದಿನಿಂದ ನಡೆದುಕೊಂಡು ಬಂದ ಆಚರಣೆಗಳು ತುಂಬ ಮಹತ್ವ ಪಡೆದುಕೊಂಡಿರುತ್ತವೆ. ಇಂದಿನ ಗ್ರಾಮ ಸಂಸ್ಕೃತಿಗಳು ಆಧುನಿಕ ನಾಗರೀಕತೆಯ ಪ್ರಭಾವಕ್ಕೊಳಗಾಗಿ ಸಂಸ್ಕೃತಿಯಲ್ಲಿ ಬದಲಾವಣೆಗಳಾಗುತ್ತಿವೆ. ಇಂತಹ ಸಂಕ್ರಮಣಾವಸ್ಥೆಯ ಸಂದರ್ಭದಲ್ಲಿ ಮೂಲೆ ಗುಂಪಾಗುತ್ತಿರುವ ಗ್ರಾಮ ಪರಿಸರದ ಹಾಗೂ ಆಯಾ ದೈವಗಳಿಗೆ ಸಂಬಂಧಿಸಿದ ಆಚರಣೆಗಳ ಕುರಿತಾಗಿ ಅಧ್ಯಯನ ಮಾಡುವ ಕೆಲಸ ತುಂಬ ಮಹತ್ವ ಪೂರ್ಣವಾಗಿದೆ.

ಗ್ರಾಮದ ದೈವಗಳ ಪರಿಚಯ, ಅಲ್ಲಿನ ಪರಿಸರದೊಂದಿಗೆ ಇರುವ ಮನುಷ್ಯ ಸಂಬಂಧ ಹಾಗೂ ಸಾಂಸ್ಕೃತಿಕವಾಗಿ ಬದಲಾಗುತ್ತಿರುವ ಅನೇಕ ಅಂಶಗಳನ್ನು ಅಧ್ಯಯನದ ಮೂಲಕ ಬೆಳಕಿಗೆ ತರುವುದು ಇಂದು ಅಗತ್ಯವಾಗಿದೆ. ಇದುವರೆಗೆ ಗ್ರಾಮೀಣ ದೈವಗಳ ಆಚರಣೆ, ನಂಬಿಕೆ, ಹರಕೆ, ಐತಿಹ್ಯ, ಕಥೆ, ಹಾಡುಗಳನ್ನು ಕೇಂದ್ರವಾಗಿಟ್ಟುಕೊಂಡು ಅಧ್ಯಯನ ನಡೆಸಿರುವ ಪ್ರಯತ್ನಗಳು ಕಡಿಮೆ ಎಂದು ಹೇಳಬಹುದು. ಆ ಪ್ರಯತ್ನವನ್ನು ಪ್ರಸ್ತುತ ಪ್ರಬಂಧದಲ್ಲಿ ಕೈಗೊಳ್ಳಲಾಗಿದೆ.

ಇಂಡಿಯಾದ ಈ ನೆಲ ತನ್ನ ಸಾವಿರಾರು ವರ್ಷಗಳ ಚರಿತ್ರೆಗಳಲ್ಲಿ ಹಲವು ಜನಾಂಗಗಳ ಸಂಸ್ಕೃತಿಗಳ ಧರ್ಮ ಪಂಥಗಳ ಉದಯಕ್ಕೆ ಕಾರಣವಾಗಿದೆ. ಹಾಗೆಯೇ ಸಂಘರ್ಷ ಮತ್ತು ಪಥನಗಳ ಪ್ರಕ್ರಿಯೆಯಲ್ಲಿ ಉದಯಿಸಿದ ಹೊಸ ಮಾರ್ಗವೊಂದನ್ನು ಒಪ್ಪಿಕೊಳ್ಳುತ್ತಾ ಬಂದಿದೆ. ಒಪ್ಪಿಕೊಂಡ ಮಾರ್ಗ ಹಲವು ಮಾರ್ಗಗಳನ್ನು ಪೋಷಿಸುತ್ತಾ ಬಂದಿದೆ. ಆ ಮೂಲಕ ಇಡೀ ಇಂಡಿಯಾ ಅತ್ಯಂತ ಸಂಕೀರ್ಣವಾದ ಸಾಂಸ್ಕೃತಿಕ ನಾಡಾಗುವಂತೆ ಹಲವು ಪ್ರಕ್ರಿಯೆಗಳಿಗೆ ಒಳಗಾಗಿದೆ.

ಇಂತಹ ಸಾಂಸ್ಕೃತಿಕ ಸಂದರ್ಭಗಳನ್ನು ಅಧ್ಯಯನ ಮಾಡುವಾಗ ವೀರಭದ್ರನ ಸಂಪ್ರದಾಯ ಬಹು ಮುಖ್ಯವಾದ ಸಂಗತಿಯಾಗಿರುತ್ತದೆ. ವೀರಶೈವ ಸಮುದಾಯದ ಮನದಲ್ಲಿ ನೆಲೆನಿಂತು, ಪೂಜೆಗೊಳ್ಳುತ್ತಿರುವ ವೀರಭದ್ರನ ಮತ್ತು ಆ ಸಮುದಾಯದವರ ಸಂಬಂಧ ಗಾಢವಾದುದು. ಇಂತಹ ಒಂದು ಸಂಸ್ಕೃತಿಯ ವಿಷಯಕ್ಕೆ ಸಂಬಂಧಿಸಿದಂತೆ ಲಭಿಸುವ ಎಲ್ಲಾ ಮಾಹಿತಿಗಳನ್ನು ಕಲೆಹಾಕಿ, ಅಧ್ಯಯನಕ್ಕೆ ಒಳಪಡಿಸಲಾಗಿದೆ.

ವೀರಶೈವರಿಗೆ ವೀರಭದ್ರ, ಕನ್ನಡಿಗ ವೀರಭದ್ರ ಎನ್ನುವ ಈತನ ದೇವಾಲಯವು ಕರ್ನಾಟದಲ್ಲಿ ಹೆಚ್ಚಾಗಿವೆ. ಮತ್ತು ಹಳ್ಳಿಗಳಲ್ಲಿಯೂ ಕೂಡ ಈತನ ದೇವಾಲಯಗಳನ್ನು ಕಾಣಬಹುದು. ಕರ್ನಾಟಕದಲ್ಲಿ ವೀರಭದ್ರ ದೇವರಿಗೆ ವಿಶಿಷ್ಟವಾದ ಸ್ಥಾನವಿದೆ. ಆತ ಇಲ್ಲಿನ ಜನಪ್ರಿಯವಾದ ದೇವರುಗಳಲ್ಲಿ ಒಬ್ಬ. ಜಾತಿ ಜನಾಂಗಗಳಿಲ್ಲದೆ, ಎಲ್ಲರಿಗೂ ಬೇಕಾದ ದೇವರು ಸಹ ಆಗಿದ್ದಾನೆ. ಇಂತಹ ಜನಪ್ರಿಯತೆಯನ್ನು ಹೊಂದಿರುವ ವೀರಭದ್ರನ ದೇವಸ್ಥಾನಗಳು ಮೊರಬ ಗ್ರಾಮದಲ್ಲಿ ಭವ್ಯವಾಗಿ ತಲೆ ಎತ್ತಿ ನಿಂತಿವೆ. ಮೊರಬದಲ್ಲಿ ಶ್ರೀ ವೀರಭದ್ರೇಶ್ವರನ ದೇವಾಲಯಗಳು ಎರಡಿವೆ. ಸಣ್ಣ ವೀರಭದ್ರೇಶ್ವರ ಹಾಗೂ ದೊಡ್ಡವೀರಭದ್ರೇಶ್ವರ. ಇಲ್ಲಿ ಶ್ರೀ ಸ್ವಾಮಿಯು ನೆಲೆ ಗೊಳ್ಳಲು ತನ್ನದೇ ಆದ ಐತಿಹ್ಯವನ್ನು ಪಡೆದುಕೊಂಡಿರುತ್ತಾನೆ. ಈತ ಕನ್ನಡಿಗ ವೀರಭದ್ರನಾದ್ದರಿಂದ ಈತನ ಭಕ್ತರು ಇಂದಿಗೂ ಅನೇಕ ಊರುಗಳಲ್ಲಿದ್ದಾರೆ. ಮುಖ್ಯವಾಗಿ ವೀರಶೈವ ಜನಾಂಗದ ಕುಟುಂಬಗಳಿಗೆ ಈ ವೀರಭದ್ರನೇ ಮನೆ ದೇವರಾಗಿದ್ದಾನೆ. ತಮ್ಮ ಮಕ್ಕಳಿಗೆ ವೀರಭದ್ರ, ಈರಣ್ಣ, ವೀರೇಶ, ವೀರಣ್ಣ, ವೀರೇಶ್ವರ ಎಂಬಿತ್ಯಾದಿ ಹೆಸರಿಡುವ ಪದ್ಧತಿ ಸಹ ಇಂದಿಗೂ ಇದೆ. ಸುತ್ತಮುತ್ತಲಿನ ಅನೇಕ ಗ್ರಾಮದ ದೇವತೆಗಳಿಗೆಲ್ಲಾ ಈ ವೀರಭದ್ರೇಶ್ವರನೇ ನಾಯಕನ ಸ್ಥಾನದಲ್ಲಿದ್ದಾನೆ.

ವೀರಭದ್ರನಿಗೆ ಸಂಬಂಧಿಸಿದ ಜೀವನಾವರ್ತನ ಮತ್ತು ವಾರ್ಷಿಕಾವರ್ತನ ಆಚರಣೆಗಳು ಇಂದಿಗೂ ನಡೆಯುತ್ತಿವೆ. ಅವುಗಳಲ್ಲಿ ಜಾತ್ರೆಯ ಸಂದರ್ಭದಲ್ಲಿ ಜರುಗುವ ಕೆಲವು ಪವಾಡಗಳನ್ನು ಕಾಣಬಹುದು. ಈ ಪವಾಡಗಳನ್ನು ವೀಕ್ಷಿಸಲು ಅಪಾರ ಭಕ್ತ ಸಮೂಹವೇ ಸೇರಿರುತ್ತದೆ.

ಪ್ರಸ್ತುತ ಸಂದರ್ಭದಲ್ಲಿ ಇಂತಹ ವೈಶಿಷ್ಟ್ಯತೆಯನ್ನು ಹೊಂದಿ ಅಪಾರ ಭಕ್ತ ಸಮೂಹವನ್ನು ಹೊಂದಿರುವ ಮೊರಬದ ಶ್ರೀ ವೀರಭದ್ರೇಶ್ವರಸ್ವಾಮಿಯ ವಿವರವಾದ ಮಾಹಿತಿಯನ್ನು ಸಂಗ್ರಹಿಸುವುದು ಈ ಅಧ್ಯಯನದ ಉದ್ದೇಶವಾಗಿದೆ.

ಸಂಗ್ರಹಿಸಲಾದ ಮಾಹಿತಿಗಳನ್ನು ವರ್ಗೀಕರಿಸಿಕೊಂಡು ವಿಷಯ ಮಂಡನೆ ಮಾಡುವಾಗ ವಿವರಣಾತ್ಮಕವಾದ ಕ್ರಮವನ್ನು ಅನುಸರಿಸಲಾಗಿದೆ. ವಿವರಗಳನ್ನು ಹೆಚ್ಚು ವ್ಯಾಖ್ಯಾನಗಳಿಗೆ ಒಳಪಡಿಸಿಲ್ಲ. ಏಕೆಂದರೆ; ಮೊರಬದ ವೀರಣ್ಣ ದೈವಗಳ ಬಗೆಗೆ ಸಮರ್ಪಕವಾದ ವಿವರ ನೀಡುವ ಕೃತಿಗಳು ಇನ್ನೂ ಪ್ರಕಟವಾಗಿಲ್ಲ. ಹೀಗಿರುವಾಗ ಸಮಗ್ರ ವಿವರ ನೀಡುವುದೇ ಮುಖ್ಯ ಕೆಲಸವಾಗಿಬಿಡುತ್ತದೆ. ಈ ಅರಿವಿನಲ್ಲಿ ಪ್ರಬಂಧದಲ್ಲಿ ವಿವರಣಾತ್ಮಕವಾದ ವಿಧಾನವನ್ನು ಅನುಸರಿಸಲಾಗಿದೆ.

ಅಧ್ಯಯನದ ಆಕರಗಳು :

ಪ್ರಸ್ತುತ ಅಧ್ಯಯನಕ್ಕೆ ಎರಡು ರೀತಿಯ ಆಕರಗಳನ್ನು ಪ್ರಮುಖವಾಗಿ ಬಳಸಿಕೊಳ್ಳಲಾಗಿದೆ.

೧) ಕ್ಷೇತ್ರ ಕಾರ್ಯ ಮಾಹಿತಿಗಳು.
೨) ಲಿಖಿತ ಆಕರಗಳು.

೧) ಕ್ಷೇತ್ರ ಕಾರ್ಯ ಮಾಹಿತಿಗಳು :

ಈ ಪ್ರಬಂಧಕ್ಕೆ ಬೇಕಾದ ಪ್ರಾಥಮಿಕ ಮಾಹಿತಿಗಳನ್ನು ವ್ಯಾಪಕವಾದ ಕ್ಷೇತ್ರ ಕಾರ್ಯದಿಂದ ಸಂಗ್ರಹಿಸಿಕೊಳ್ಳಲಾಗಿದೆ. ಪ್ರಬಂಧದ ವ್ಯಾಪ್ತಿಯನ್ನು ಮೊರಬ ಗ್ರಾಮಕ್ಕೆ ಸೀಮಿತಗೊಳಿಸಲಾಗಿದೆ. ಮಾಹಿತಿಗಳನ್ನು ಸಂಗ್ರಹಿಸುವಾಗ ಆದಷ್ಟು ವಿವರವಾಗಿ ಕ್ಷೇತ್ರಕಾರ್ಯದ ಎಲ್ಲ ವಿಧಿವಿಧಾನಗಳನ್ನು ಅನುಸರಿಸಿ ಸಂಗ್ರಹಿಸಲಾಗಿದೆ. ಮುಖ್ಯವಾಗಿ ಪ್ರಶ್ನಾವಳಿ, ಸಂದರ್ಶನ ಮತ್ತು ಅವಲೋಕನ ವಿಧಾನಗಳನ್ನು ಬಳಸಿ, ಕ್ಷೇತ್ರ ಕಾರ್ಯವನ್ನು ಮಾಡಲಾಗಿದೆ.

ಇತ್ತೀಚಿಗೆ ನಡೆದ ಜಾತ್ರೆಗೆ ಭೇಟಿಕೊಟ್ಟು, ವಿವರಗಳನ್ನು ದಾಖಲಿಸಲಾಗಿದೆ. ಜಾತ್ರೆಯ ಆಚರಣೆಯಲ್ಲಿ ಪಾಲ್ಗೊಂಡ ಹಿರಿಯ ವ್ಯಕ್ತಿಗಳನ್ನು ಸಂದರ್ಶಿಸಿ, ಅವರಿಂದ ಮಾಹಿತಿಗಳನ್ನು ಪಡೆಯಲಾಗಿದೆ. ಸಾಮಾನ್ಯವಾಗಿ ಸಂದರ್ಶನಕ್ಕೆ ಹಿರಿಯ ವ್ಯಕ್ತಿಗಳನ್ನೇ ಆಯ್ದುಕೊಳ್ಳಲಾಗಿದೆ. ಆದರೂ ಅಗತ್ಯವಿದ್ದಾಗ ಹೊಸ ತಲೆಮಾರಿನ ಜನಪದರನ್ನು ಸಹ ಸಂದರ್ಶಿಸಲಾಗಿದೆ. ಈ ನಿರೂಪಕರು ವಿವಿಧ ಜಾತಿಗಳಿಗೆ ಸೇರಿರುವಂತೆ ಎಚ್ಚರವಹಿಸಲಾಗಿದೆ. ಈ ನಿಟ್ಟಿನಲ್ಲಿ ಕ್ಷೇತ್ರ ಕಾರ್ಯವು ಸಮಗ್ರವೂ, ಸಮರ್ಪಕವೂ ಆಗಿರುವಂತೆ ನೋಡಿಕೊಳ್ಳಲಾಗಿದೆ.

ಯಾವುದೇ ಅಧ್ಯಯನ ಕೈಗೊಂಡರೂ ಅದಕ್ಕೊಂದು ನಿರ್ಧಿಷ್ಟವಾದ ಚೌಕಟ್ಟು ಇದ್ದೇ ಇರುತ್ತದೆ. ಅದರಂತೆಯೇ ಮೊರಬದ ಶ್ರೀ ವೀರಭದ್ರಸ್ವಾಮಿಯ ಕುರಿತು ಅಧ್ಯಯನ ಮಾಡುವಾಗ ಕೆಲವು ಪ್ರಮುಖ ಭಾಗಗಳನ್ನು ಮಾಡಿಕೊಳ್ಳಲಾಗಿದೆ. ಅವುಗಳಲ್ಲಿ ಮೊರಬ ಗ್ರಾಮ, ಶ್ರೀ ವೀರಭದ್ರೇಶ್ವರ ಸ್ವಾಮಿ ಆಚರಣೆಗಳು, ವೀರಭದ್ರೇಶ್ವರ ಸ್ವಾಮಿ ಮತ್ತು ಇತರೆ ದೈವದ ಸಂಬಂಧ ಶ್ರೀ ವೀರಭದ್ರೇಶ್ವರಸ್ವಾಮಿ ಕುರಿತು ನಂಬಿಕೆ ಮತ್ತು ಹರಕೆಗಳು. ಇವುಗಳ ವಿವರವಾದ ಮಾಹಿತಿ ಸಂಗ್ರಹಿಸುವ ಪ್ರಯತ್ನವನ್ನು ಈ ಪ್ರಬಂಧದಲ್ಲಿ ಕೈಗೊಳ್ಳಲಾಗಿದೆ. ಅಧ್ಯಯನಕ್ಕೆ ಪೂರಕವಾಗಿ ಅನೇಕ ಗ್ರಂಥಗಳ ಬಳಕೆಯನ್ನು ಮಾಡಿಕೊಂಡು ಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

ಅಧ್ಯಾಯ : ಎರಡು

ಮೊರಬ ಗ್ರಾಮ

೨.೧. : ಪದ ನಿಷ್ಪತ್ತಿ

೨.೨. : ಜಾತಿ

೨.೩. : ವೃತ್ತಿ

೨.೪. : ಭೌಗೋಳಿಕತೆ

೨.೫. : ಚಾರಿತ್ರಿಕ ಹಿನ್ನೆಲೆ

ಅಧ್ಯಾಯ - ಎರಡು

ಮೊರಬ ಗ್ರಾಮ

ಮೊರಬ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿಗೆ ಸೇರಿದ ಒಂದು ಚಿಕ್ಕ ಮತ್ತು ಚೊಕ್ಕ ಗ್ರಾಮ. ಈ ಹಳ್ಳಿ ಜರಿಮಲೆಯ ಪಾಳೆಯ ಪಟ್ಟಿಗೆ ಸೇರಿದ್ದೆಂದು ಹೇಳಲು ಇಲ್ಲಿಯ ವೀರನ ದುರ್ಗವೇ ಸಾಕ್ಷಿ. ಹೈದರ್ ಅಲಿ (ಶ್ರೀರಂಗ ಪಟ್ಟಣ) ಜರಿಮಲೆ ವೀರರಿಂದಲೇ ಚಿತ್ರದುರ್ಗವನ್ನು ವಶಪಡಿಸಿ ಕೊಂಡನೆಂಬುದೊಂದು ಚರಿತ್ರೆಯ ವಿಷಯ. ಅದರ ಸವಿ ನೆನಪಿಗಾಗಿ ಜರಿಮಲೆ ನಾಲ್ಕು ಮಂದಿ ಭೂಪರಿಗೆ ಮೈಸೂರು ಸಂಸ್ಥಾನದ ೧೩೩ ಹಳ್ಳಿಗಳನ್ನು ಜಹಗೀರಾಗಿ ಹಂಚಿದನಂತೆ. ಅವುಗಳಲ್ಲಿ ಮುಖ್ಯ ಪಾಳೆ ಪಟ್ಟುಗಳೇ ಸಂಡೂರು, ಗುಡೇಕೋಟೆ, ವೀರನದುರ್ಗ, ಭೈರಿದೇವರಗುಡ್ಡ, ಮೊರಬ. ಮೊರಬ ಗ್ರಾಮವು ರಾಷ್ಟ್ರೀಯ ಹೆದ್ದಾರಿ ಹದಿಮೂರರ ಪಕ್ಕದಲ್ಲಿ ಕೂಡ್ಲಿಗಿಯ ಸಮೀಪ ಅಂದರೆ, ಕೂಡ್ಲಿಗಿಯಿಂದ ನಾಲ್ಕು ಕಿಲೋಮೀಟರ್ ದೂರದಲ್ಲಿ ಹಾಗೂ ಕೂಡ್ಲಿಗಿ ಬೆಂಗಳೂರು ಹೆದ್ದಾರಿಯ ಎರಡು ಕತ್ತರಿ ಮಾರ್ಗಗಳಲ್ಲಿ ಬಲಭಾಗಕ್ಕೆ ಎರಡು ಕಿಲೋಮೀಟರ್ ದೂರದಲ್ಲಿದೆ.

ಮೊರಬ ಗ್ರಾಮವು ಶ್ರೀ ವೀರಭದ್ರೇಶ್ವರ ದೇವರ (ವೀರಣ್ಣ) ಭಕ್ತರ ಮನೆಯ ಮಾತಾಗಿದೆ. ಇದು ಶ್ರೀ ವೀರಭದ್ರೇಶ್ವರ ಸ್ವಾಮಿಯ ದೇವಸ್ಥಾನ ಹಾಗೂ ಜಾತ್ರಾ ಮಹೋತ್ಸವಕ್ಕಾಗಿ ಪ್ರಸಿದ್ಧಿಯನ್ನು ಪಡೆದಿದೆ.

೨.೧. ಪದ ನಿಷ್ಪತ್ತಿ :

ಈ ಮೊರಬ ಗ್ರಾಮಕ್ಕೆ ಐತಿಹಾಸಿಕ ಪರಂಪರೆ ಇದ್ದಂತೆ, ಪೂರಕವಾಗಿ ಶಾಸನ, ಸಾಹಿತ್ಯ ಹಾಗೂ ಹಳೆಯ ತಾಡೋಲೆ ಕಡತಗಳಿಂದಲೂ ದಾಖಲೆಗಳು ಹಾಗೂ ಗ್ರಾಮೀಣ ಭಾಷೆಯಲಿ ಹಾಸು ಹೊಕ್ಕಾಗಿರುವ ಜನಪದ ಅಂಶಗಳ ಹಿನ್ನೆಲೆಗಳೇ ಸರ್ವೇ ಸಾಮಾನ್ಯ ಆಧಾರಗಳಾಗಿವೆ.

ಈ ಊರಿಗೆ ಮೊರಬ ಎಂದು ಹೆಸರು ಬರಲು ಇಲ್ಲಿನ ಶಿವಯೋಗಿಸಿದ್ದರೇ ಕಾರಣ. ಅನೇಕ ಸಿದ್ಧಿ ಪುರುಷರಲ್ಲಿ ಯೋಗ ಸಿದ್ಧಿ ಪಡೆದ ಗುರುಗಳು ಊರ ಮುಂಭಾಗದ ಅರಳಿಕಟ್ಟೆಯ ಮೇಲೆ ಕುಳಿತು ಯೋಗಾರೂಢರಾಗಿರುತ್ತಾನೆ. ಆಗ ಒಬ್ಬ ಅತೀ ಬಡತನದಿಂದ, ಬಳಲಿದ ಕರ್ಮಕ್ಕೀಡಾದ ಒಪ್ಪತ್ತಿನ ಆಸರೆವೂ ಸಿಗದಂತಿದ್ದ ಕುರೂಪಿಯೊಬ್ಬ ಗುರುಗಳ ಸಾನಿಧ್ಯಕ್ಕೆ

ಬರುತ್ತಾನೆ. ತನ್ನ ಜೀವನದ ಜಿಗುಪ್ಸೆಯ ಆಳಲನ್ನು ಹೇಳಿ, ಗುರುವೇ ನನ್ನನ್ನು ರಕ್ಷಿಸಿ ಉದ್ಧರಿಸಿ, ಆಶೀರ್ವದಿಸು ಎಂದು ಕೇಳಿದ. ಶ್ರೀ ಗುರುಗಳ ಕರ್ಣ ಪಟಲದ ಮೇಲೆ ಕೇಳಿದಾಗ ಯೋಗ ರೂಢರಾಗಿದ್ದ ಶಿವಯೋಗಿಗಳ ದೃಷ್ಟಿ ಈತನ ಮೇಲೆ ಬಿತ್ತು. ಆಗ ಶಿಷ್ಯನಿಗೆ ಇಂದಿನಿಂದ ನೀನು ಪುನೀತನಾದೆ. ನೀನು ನಿನ್ನ ನಿಜ ಊರಿಗೆ ತೆರಳಿ ಮರೆಯದೆ ಮತ್ತೊಮ್ಮೆ ಬಂದು ದರ್ಶನಾಶೀರ್ವಾದ ಪಡೆದುಕೊಂಡು ಹೋಗೆಂದರು.

ಇದರಂತೆ ಆತನು ನಿತ್ಯ ನಿಯಮದಂತೆ ನಾಮಸ್ಮರಣೆಯನ್ನು ಮಾಡುತ್ತ, ತನಗೆ ಬಂದ ಕಷ್ಟ-ನಿಷ್ಠುರ ಗ್ರಹಪೀಡೆ ತೊಲಗಿ ಸುಖದಿಂದ ಬಾಳುತ್ತಿದ್ದನು. ಈತನ ಬದಲಾವಣೆಯನ್ನು ಕಂಡ ಈತನ ಊರಿನವರು, ನೀನು ಈ ರೀತಿ ಬದಲಾಗಲು ಕಾರಣವೇನೆಂದು ಕೇಳಿದಾಗ ಮರೆಯದೆ ಬಾ ಎಂದು ಆಶೀರ್ವಾದದ ನುಡಿಗಳನ್ನು ಹೇಳುತ್ತಾ, ಹೇಳುತ್ತಾ ತನ್ನ ಬಾಯಿಯಿಂದ ಹಾಡುಗರ ವಾಡಿಕೆ ಯಲ್ಲಿ ''ಮರೆಯದೆ ಬಾ'' ಎಂದು ಕೇಳಿದ್ದು 'ಮೊರಬ', 'ಮೊರಬ' ಎಂದು ರೂಢಿಯೊಳಗಾಯಿತು.

ಮೊರಬ ಎಂದು ಹೆಸರು ಬರಲು ಇನ್ನೊಂದು ರೂಢಿಯ ಮಾತು:

ಈ ಗ್ರಾಮವು ಕೋಟೆ, ಪೇಟೆ, ಊರು, ಕೇರಿ ಎಂದು ಕರೆಯಲ್ಪಡುತ್ತಿತ್ತು. ಈ ಗ್ರಾಮಕ್ಕೆ ಸೇರಿದ ಕೇರಿಯೊಂದು ಅಂದರೆ, ಅಮ್ಮನ ಕೇರಿ. ಇಲ್ಲಿ ಊರಮ್ಮನ ಜಾತ್ರೆ ವೈಭವದಿಂದ ನಡೆಯುತ್ತಿತ್ತು. ಕುರಿ ಕೋಣಗಳ ಬಲಿ ಕೊಡುತ್ತಿದ್ದರು. ಈ ಬಲಿ ಕೊಡುವ ಸಂದರ್ಭದಲ್ಲಿ ಚರ್ಮದ ವ್ಯಾಪಾರಕ್ಕಾಗಿ ಮುಸ್ಲಿಂ ವರ್ತಕನೊಬ್ಬ ತನ್ನ ಸವಾರಿ ಮಾಡುವ ಕುದುರೆಯ ಮೇಲೆ ಕುಳಿತು ಊರ ಮುಂಭಾಗದ ಶ್ರೀ ವೀರಭದ್ರೇಶ್ವರ ದೇವಸ್ಥಾನದಿಂದ ಹಾಯ್ದು ಅಮ್ಮನ ಕೇರಿಗೆ ಹೋಗಬೇಕಾಗಿತ್ತು. ದೇವಸ್ಥಾನದ ಮುಂಭಾಗದಿಂದ ಸವಾರಿ ಮಾಡುವಂತಿರಲಿಲ್ಲ. ಆದರೆ ಈ ವ್ಯಾಪಾರಿ ಕುದುರೆಯನ್ನೇರಿ ಸವಾರಿ ಮಾಡುವ ಸಂದರ್ಭಕ್ಕೆ ಸವಾರಿ ಮಾಡುವ ವ್ಯಾಪಾರಿಯು ಬಳಲಿ ಬವಳಿಸಿ ಕುದುರೆಯ ಕಣ್ಣು ಕಾಣದಂತಾಗಿ ಕುದುರೆ ಕೆನೆದು ಮುಗ್ಗರಿಸಿತು. ಸವಾರನು ಚೀರಿ, ಹೌಹಾರಿ ತನ್ನ ಮುಸ್ಲಿಂ ಭಾಷೆಯಲ್ಲಿ 'ಮರೇಬಾ','ಮರೇಬಾ' ಎಂದು ಕೆಳಗೆ ಬಿದ್ದನಂತೆ. ಈತನು ಆಡಿದ ಮರೇಬಾ ಎಂಬ ಪದವು ನಾ ಸತ್ತೆ ಎಂದು ಅರ್ಥ. ಇವನು ಮೊರೆಬಾ, ಮೊರೆಬಾ ಎಂದು ಕೂಗಾಡಿದ ಪದವು ಜನರ ಬಾಯಿಂದ ಬಾಯಿಗೆ ಹರಿದು 'ಮೊರಬ' ಎಂತಾಯಿತು. ಅಂದಿನಿಂದ ಈ ಗ್ರಾಮಕ್ಕೆ ಈ ಹೆಸರು ಬಂದಿದೆ ಎಂದು ಊಹಿಸಲಾಗುತ್ತಿದೆ.

ಈ ಊರಿನ ಕೇರಿಯಾಗಿರುವ ಅಮ್ಮನ ಕೇರಿಯಲ್ಲಿ ಹೆಣ್ಣು ದೇವತೆ, ಹಳ್ಳದಲ್ಲಿ ಎಂಟು ಅಡಿ ಎತ್ತರದ ಕಲ್ಲು ಕಂಬದ ಮೇಲೆ ಇದ್ದು, ಇದರ ಪವಾಡವು ನಡೆಯುತ್ತಿದ್ದು, ಅಂದಿನಿಂದ ಇಂದಿನವರೆಗೂ ಬಲಿ ಕೊಡುವ ಪದ್ಧತಿಯೂ ಇದ್ದೇ ಇದೆ. ಆದುದರಿಂದ ಈಗಲೂ ಇದು ನಿಜವೆಂದು ಭಾವಿಸಬಹುದು.

೨.೨. ಜಾತಿ :

ಇಲ್ಲಿನ ಜನವಾಸಿಗಳ ನೆಲೆಯ ಮೇಲೆ, ವಿಚಾರದ ಆಧಾರದಲ್ಲಿ ಜನರು ಜಾತಿ, ಮತ, ಪಂಥ, ಸಂಬಂಧ ಇವೆಲ್ಲಾ ಕಾರಣವಾಗಿ ಕಂಡರೂ, ಗ್ರಾಮಾಂತರ ದಲ್ಲಿ ಸರ್ವರೂ ಸಂಬಂಧಿಗಳಾಗಿಯೂ ಬಾಳುವುದುಂಟು. ಈ ಅಂಶವನ್ನು ಭಾರತೀಯರಾದ ನಾವು ಕೇಳಿ ಕಾಣುವ ರೀತಿಯುಂಟು. ಹಲ ಕೆಲವು ಅಂಶಗಳು ನಿಯಂತ್ರಿಸುವ ನಿರ್ಮಿಸುವ ವಿಶೇಷ ಆಚರಣೆಯ ರೀತಿಗಳಾಗಿವೆ. ಇಷ್ಟಲ್ಲದೇ ಆಯಾ ಜಾತಿಯ ಜನರ ನಂಬಿಕೆ, ದೇವರು, ಪುರಾಣ, ಮುಂತಾದವು ಜಾತಿಯ ಮುಖ್ಯ ಅಂಗವೇ ಆಗಿರುತ್ತದೆ.

ಮೊರಬ ಗ್ರಾಮದಲ್ಲಿ ಹಲವಾರು ಜಾತಿಯ, ಹಲವಾರು ನಂಬಿಕೆಯ ಜನರು ಇದ್ದಾರೆ. ಆದಿಯಲ್ಲಿ ಗೌಡರು, ಪೂಜಾರರು, ವೀರಶೈವರು, ಬ್ರಾಹ್ಮಣರು ಇದ್ದರು. ಆದರೆ ಆ ಜಾತಿಯ ಜನರು ಈಗಿಲ್ಲ. ಈ ಗ್ರಾಮದಲ್ಲಿ ಹೆಚ್ಚಾಗಿ ವೀರಶೈವರು, ಮುಸ್ಲಿಂರು, ಹರಿಜನರು, ಚಲುವಾದಿ, ಬಡಿಗ (ವಿಶ್ವಕರ್ಮ), ಕಮ್ಮಾರ, ಬಾರಿಕರು, ಕ್ಷೌರಿಕರು, ಸಿಂಪಿಗರು, ಶೆಟ್ಟರು, ಅಕ್ಕಸಾಲಿಗರು, ಭೋವಿ ಜನಾಂಗದವರು ಇದ್ದಾರೆ.

ಈ ಗ್ರಾಮದಲ್ಲಿ ನಾನಾ ಜಾತಿಯ ಜನರಿದ್ದರೂ ಯಾವುದೇ ದೇವತಾ ಕಾರ್ಯ, ಮದುವೆ, ಊರ ದೇವರ ಕಾರ್ಯ, ಸಾಮೂಹಿಕ ಹಬ್ಬ ಹರಿದಿನಗಳು, ಶವ ಸಂಸ್ಕಾರ ಇನ್ನು ಅನೇಕ ಪ್ರಮುಖ ಕಾರ್ಯಗಳಲ್ಲಿ ಜಾತಿಯ ನೀತಿ ನಿಯಮಗಳನ್ನು ತೊರೆದು ಒಗ್ಗಟ್ಟಿನಿಂದ ಒಂದೇ ಸಂಬಂಧಿಗಳೆಂದು ಭಾಗವಹಿಸುತ್ತಾರೆ. ಈ ಗ್ರಾಮದ ಅಧಿದೇವರಾಗಿರುವ ಶ್ರೀ ವೀರಭದ್ರೇಶ್ವರ ದೇವರ ದೈವದ ಆಚರಣೆಗಳೇ ನಿದರ್ಶನ. ಇಲ್ಲಿ ಜಾತಿ-ಮತ-ಪಂಥವೆಂಬ ಬೇಧವಿಲ್ಲದೆ, ಎಲ್ಲರೂ ಏಕೀಭಾವದಿಂದ, ಯಾವುದೇ ಬೇಧಬಾವವಿಲ್ಲದೆ ಒಂದಾಗಿ,ಒಟ್ಟಾಗಿ ಹೊಂದಿಕೊಂಡು ನಡೆಯುವ ಮನೋಭಾವ ಉಳ್ಳವರಾಗಿದ್ದಾರೆ.

೨.೩. ವೃತ್ತಿ :

ಮೊರಬ ಗ್ರಾಮದಲ್ಲಿ ಅನೇಕ ಜಾತಿಯ ಜನರಿದ್ದು, ಅವರವರ ಕುಲಕಸಬಿಗನುಸರಿಸಿ, ತಮ್ಮ ವೃತ್ತಿಯಲ್ಲಿ ಮುಂದುವರಿಯುತ್ತಾರೆ. ಪ್ರಮುಖವಾಗಿ ಕೃಷಿಯನ್ನಾಧರಿಸಿ ಜೀವನ ನಡೆಸುವ ಎಲ್ಲಾ ಗ್ರಾಮಸ್ಥರು ಕೃಷಿ ಹಾಗೂ ಆದರ ಅವಲಂಬಿತ ವೃತ್ತಿಗಳಲ್ಲಿ ತಮ್ಮ ಜೀವನವನ್ನು ಕಂಡು ಕೊಂಡಿದ್ದಾರೆ. ಇಲ್ಲಿ ತರಿ, ಕುಷ್ಕಿ ಜಮೀನಿದ್ದು, ಅಂತರ್ ಜಲ (ಬೋರ್‌ವೆಲ್) ಪದ್ಧತಿಯಿಂದ ತೋಟಗಾರಿಕೆ ಬೆಳೆಗಳನ್ನು ಬೆಳೆಯುತ್ತಾರೆ. ಅಂದರೆ, ಎಲೆಬಳ್ಳಿ, ಸೇಂಗಾ, ರೇಷ್ಮೆ ಮುಂತಾದವುಗಳನ್ನು ಬೆಳೆಯುತ್ತಾರೆ. ಮಳೆಯ ಆಶ್ರಯದಿಂದ ಬೆಳೆಯುವ ಪ್ರಮುಖ ಬೆಳಗಳಲ್ಲಿ ಮುಖ್ಯವಾಗಿ ಸೇಂಗಾ, ಹತ್ತಿ, ಜೋಳ, ಸೂರ್ಯಕಾಂತಿ, ದ್ವಿದಳ ಧಾನ್ಯ ಮುಂತಾದವುಗಳನ್ನು ಬೆಳೆಯಲಾಗುತ್ತದೆ. ಇಲ್ಲಿ ಮಳೆಗಾಲ ಕಡಿಮೆ. ಆದ್ದರಿಂದ ಇಲ್ಲಿ ಹೆಚ್ಚಾಗಿ ಇಟ್ಟಿಗೆ ಭಟ್ಟಿ, ಗಾರೆ ಕೆಲಸ ಮಾಡುತ್ತಾರೆ.

ಇಲ್ಲಿ ಹರಿಜನರು ತಮ್ಮ ಕುಲ ಕಸುಬಾದ ಚರ್ಮಗಾರಿಕೆಯನ್ನು ಹೆಚ್ಚಾಗಿ ಅವಲಂಬಿಸಿದ್ದಾರೆ. ಈ ಗ್ರಾಮಕ್ಕೆ ಕೂಡ್ಲಿಗಿ ಹತ್ತಿರವಾಗುವುದರಿಂದ ದುಡಿಮೆಗಾಗಿ, ಕೂಲಿಗಾಗಿ ಅಲ್ಲಿಗೆ ಹೋಗಿ ಬರುವ ವಾಡಿಕೆ ಇದೆ. ಇಲ್ಲಿನ ಚಲುವಾದಿಗಳು ಶಹನಾಯಿ ಊದುವುದರಲ್ಲಿ ತಾಲೂಕಿಗೆ ಹೆಸರುವಾಸಿಯಾಗಿರುವುದರಿಂದ, ಅವರು ಅನೇಕ ಕಾರ್ಯಗಳಿಗಾಗಿ ಬೇರೆ ಬೇರೆ ಊರುಗಳಿಗೆ ಹೋಗಿಬರುವುದುಂಟು.

೨.೪. ಭೌಗೋಳಿಕತೆ :

ಅಧ್ಯಯನಕ್ಕೆ ಒಳಪಡಿಸಲಿರುವ ಗ್ರಾಮದ ಭೌಗೋಳಿಕ ಪರಿಸರದ ವಿವರಣೆ ಬಹುಮುಖ್ಯವಾದುದು. ಬಹಳಷ್ಟು ಸಲ ಭೌಗೋಳಿಕ ಪರಿಸರವೇ ಗ್ರಾಮೀಣ ಜೀವನ ಸ್ವರೂಪವನ್ನು ನಿರ್ಧರಿಸುತ್ತದೆ ಹಾಗೂ ನಿಯಂತ್ರಿಸುತ್ತದೆ. ಒಂದು ಹಳ್ಳಿಯ ಊಟ, ಉಡುಗೆ, ಉದ್ಯೋಗ ಕ್ರಮಗಳು ಆ ಭಾಗದ ಭೂಮಿಗುಣ, ಮಳೆಯ ಪ್ರಮಾಣ, ಬೆಳೆಯ ರೀತಿಯನ್ನು ಅವಲಂಬಿಸಿರುತ್ತದೆ. ಊರಿನ ಮೇರೆಗಳು, ದಾರಿಗಳು, ಉದ್ಯೋಗ, ವ್ಯವಸಾಯವನ್ನು ರೂಪಿಸುತ್ತವೆ. ಊರ ಸುತ್ತಲಿನ ಬಯಲು ಭೂಮಿ, ನದಿ, ಬೆಟ್ಟ, ಸಮುದ್ರಗಳನ್ನು ಬದಿಗಿರಿಸಿ, ಗ್ರಾಮ ಜೀವನವನ್ನು ನೋಡಲಾಗುವುದಿಲ್ಲ. ಹೀಗೆ ಭೌಗೋಳಿಕ ವಿವರಣೆ ಬಹುಮುಖ್ಯವಾದುದೆನಿಸುತ್ತದೆ.

ಈ ಗ್ರಾಮಕ್ಕೆ ಪೂರ್ವದ ಕಡೆಗೆ ಒಂದು ಚಿಕ್ಕದಾದ ಕೆರೆ ಇದ್ದು, ೬೦ ಎಕರೆಯಷ್ಟು ಅಂಗಳವನ್ನು ಹೊಂದಿದೆ. ಹಾಗೂ ಈ ಕೆರೆ ಹಿಂಬದಿಯಲ್ಲಿ ತರಿ ಜಮೀನು ೧೧೦ ಎಕರೆ ಇದೆ. ಹಲವು ದಶಕಗಳ ಹಿಂದೆ ಕೆರೆ ತುಂಬಿದರೆ ಒಂದು ಬೆಳೆಯಾಗುತ್ತಿತ್ತು ಎಂದು ಊರ ಹಿರಿಯರು ಹೇಳುತ್ತಾರೆ. ಆದರೆ ಈಗ ಮಳೆಗಾಲ ಕಡಿಮೆಯಾಗಿದ್ದರಿಂದಾಗಿ ಕೆರೆಯು ನೀರಿಲ್ಲದೆ ಬತ್ತಿ ಹೋಗುವ ಪ್ರಮೇಯ ಬಂದೊದಗಿದೆ. ತರಿ ಜಮೀನು ಸಂಪೂರ್ಣ ಒಣಗಿ ಬರಡು ಭೂಮಿಯಾಗಿ ಪರಿವರ್ತಿತಗೊಂಡಿವೆ. ಹೀಗೆ ಮೆಳೆ ಹೆಚ್ಚಾಗಿ ಬಂದರೆ ಊರ ಪಶ್ಚಿಮಕ್ಕೆ ಇರುವ ಗುಡ್ಡದ ಝರಿಯಿಂದ ಹರಿದು ಬರುವ ಹಳ್ಳ ತುಂಬಿ, ದಂಡೆಯಲ್ಲಿರುವ ಹೊಲಗಳ ಬೆಳೆ ಸೊಗಸಾಗಿ ಬೆಳೆಯುತ್ತವೆ. ಹಾಗೆಯೇ ಕೆರೆಯ ನೀರು ಸಹ ಅನೇಕ ಭೂಮಿಗೆ ಆಧಾರವಾಗಿದೆ. ಅಷ್ಟೇ ಅಲ್ಲದೆ ಅಂತರ್‌ಜಲ ಹೆಚ್ಚಾಗಿ ತೋಟಗಾರಿಕೆಯ ಬೆಳೆಗಳನ್ನು ಇಲ್ಲಿನ ರೈತರು ಉತ್ತಮ ರೀತಿಯಲ್ಲಿ ಬೆಳೆಯಬಹುದಾಗಿದೆ. ಊರಿನ ಮೂರು-ನಾಲ್ಕು ಕಡೆ ಸಣ್ಣಪುಟ್ಟ ಕಟ್ಟೆಗಳಿವೆ. ಇವುಗಳಲ್ಲಿ ನಿಂತ ನೀರು ದನಕರುಗಳಿಗೆ ಅನುಕೂಲವಾಗುತ್ತದೆ. ಈ ಕಟ್ಟೆಗಳನ್ನು ಚಿಕ್ಕಕಟ್ಟೆ, ಬಡಿಗೇರು ಕಟ್ಟೆ, ಗೌಡನ ಕಟ್ಟೆ, ಚಿಗಾಪುರ ಕಟ್ಟೆ ಎಂದು ಕರೆಯಲಾಗುತ್ತದೆ. ಒಟ್ಟಿನಲ್ಲಿ ಈ ಊರು ಹೆಚ್ಚಾಗಿ ಮಳೆಯನ್ನೇ ಅವಲಂಬಿಸಿದೆ. ಯಾವುದೇ ಆಣೆಕಟ್ಟಿನ ನೀರು ಇಲ್ಲಿನ ಪ್ರದೇಶಗಳಿಗೆ ಬಳಕೆಯಾಗುತ್ತಿಲ್ಲ.

ಇಲ್ಲಿನ ಭೂಮಿ ಕೆಂಪು ಮಿಶ್ರಿತ ಮರುಳು ಹಾಗೂ ಕಪ್ಪು ಮಿಶ್ರಿತ ಮಡಿಕಟ್ಟು. ಉತ್ತಮ ಫಲವತ್ತಾದ ನೆಲ. ಉತ್ತಮ ಮಳೆಯಾದರೆ ಸಮೃದ್ಧಿಯಾದ ಬೆಳೆ ಬೆಳೆದು ಚಿತ್ರದುರ್ಗ, ಕೊಟ್ಟೂರು, ಹಗರಿಬೊಮ್ಮನಹಳ್ಳಿ ಕೃಷಿ ಉತ್ಪನ್ನ ಮಾರುಕಟ್ಟೆ(ಎ.ಪಿ.ಎಂ.ಸಿ.)ಗಳಿಗೆ ವಹಿವಾಟು ನಡೆಸಲಾಗುತ್ತದೆ. ಈ ಪ್ರದೇಶದಲ್ಲಿನ ಸೇಂಗಾ ಬೆಳೆಯು ಸುತ್ತಮುತ್ತಲೂ ಹೆಸರುವಾಸಿಯಾಗಿರುವುದರಿಂದ, ಬೆಳೆದ ಬೆಳೆಯ ಬೀಜಗಳನ್ನು ಬೇರೆ ಊರಿನವರು ತಮ್ಮ ತಮ್ಮ ಊರುಗಳಿಗೆ ಕೊಂಡು ಹೋಗುವ ರೂಢಿ ಇದೆ. ಆದರೆ ಇತ್ತೀಚಿನ ದಿನಗಳಲ್ಲಿ ಅಂದರೆ ಸುಮಾರು ಎರಡು-ಮೂರು ವರ್ಷಗಳಿಂದ ಈ ಬೆಳೆಗೆ ರೋಗದ ಬಾಧೆ ಹಾಗೂ ಕಳೆದ ವರ್ಷ ಮಳೆಯ ಅಭಾವದಿಂದ ಇಲ್ಲಿನ ಬೆಳೆ ಸಾಕಷ್ಟು ಕುಂಠಿತಗೊಂಡಿದೆ.

೨.೫. ಚಾರಿತ್ರಿಕ ಹಿನ್ನೆಲೆ :

ಮೊರಬ ಗ್ರಾಮದಲ್ಲಿ ಶಾಲಾ ಕೊಠಡಿಯ ಜಾಗದಲ್ಲಿ ಈಶ್ವರನ ದೇವಸ್ಥಾನ ಇತ್ತೆಂದು ಹೇಳುತ್ತಾರೆ. ಅಲ್ಲದೆ ಇಲ್ಲಿನ ಸುಮಾರು ४೦ ಅಡಿ ಅಂತರದಲ್ಲಿ ಈಶಾನ್ಯ ದಿಕ್ಕಿಗೆ ಒಂದು ಗಚ್ಚಿನ ಬಾವಿ ಇತ್ತಂತೆ, ಈ ಬಾವಿಯಿಂದ ಈಶ್ವರನಿಗೆ ಅಭಿಷೇಕ, ಗಂಗಾ ಪೂಜೆ ನಡೆಯುತ್ತಿತ್ತೆಂದು ಹೇಳುತ್ತಾರೆ. ಅಲ್ಲದೆ ಈ ಬಾವಿಯಲ್ಲಿ ಕಂಚಿನ ತೇರು, ಕಂಚಿನ ಉತ್ಸವ ಮೂರ್ತಿ ಊಳಲ್ಪಟ್ಟಿವೆ ಎಂದು ಸಹ ತಿಳಿದು ಬಂದಿದೆ. ಈ ಬಾವಿಯ ಸಮೀಪದಲ್ಲಿ ಒಂದು ಕಲ್ಲಿನ ನಿಲುಗಂಬವಿದೆ. ಇದರ ಮೇಲ್ಭಾಗದಲ್ಲಿ ಸೂರ್ಯ-ಚಂದ್ರ, ಈಶ್ವರ ಬಸವಣ್ಣನ ಮೂರ್ತಿ ಕೆತ್ತಲಾಗಿದೆ. ಅಲ್ಲದೆ ಇದರ ಹಿಂದೆ ಕಪ್ಪಾದ ೮ ರಿಂದ ೧೦ ಇಂಚು ದಪ್ಪವುಳ್ಳ ೧೦ ಅಡಿ ಎತ್ತರದ ಕಪ್ಪು ಶಿಲೆಯ ಒಂದು ಶಾಸನವಿದೆ. ಇದರಲ್ಲಿ ೧४೫೦ನೆಯ ಸರ್ವಧಾರಿ ಶ್ರಾವಣ ಶುದ್ಧ ೧೫ಕ್ಕೆ ಸರಿಯಾಗಿ ಕ್ರಿ.ಶ. ೩.೧.೦೭.೧೫೨೮ ಶುಕ್ರವಾರ ದಂದು ಅಂದರೆ ಕೃಷ್ಣದೇವರಾಯನು ಆಳುತ್ತಿದ್ದಾಗ ಎಲಬರಿಗೆಯ ಮಲ್ಲಪ್ಪಣ್ಣನು ಮೊರಬದಲ್ಲಿ ತನ್ನ ತಾಯಿ ವೀರಮ್ಮನಿಗೆ ಪುಣ್ಯವಾಗಬೇಕೆಂದು ಮಲ್ಲಾಪುರದಲ್ಲಿ ಅರವಟ್ಟಿಗೆಯನ್ನು ಕಟ್ಟಿಸಿ, ಸಂತೆಯ ವಸಿಗೆಯನ್ನು ಸ್ವಲ್ಪ ಭೂಮಿಯನ್ನು ಸೂರ್ಯ ನಾರಾಯಣನಿಗೆ ಬಿಡುತ್ತಾನೆ. ಅಲ್ಲದೆ ಊರ ಮಧ್ಯ ಅಂದರೆ, ಶ್ರೀ ದೊಡ್ಡ ವೀರಭದ್ರೇಶ್ವರ ದೇವಸ್ಥಾನದ ಬಲಭಾಗಕ್ಕೆ ಎರಡು ನಿಲುಗಂಬಗಳಿದ್ದು ಅದು ಈ ನಿಲುಗಂಬಕ್ಕೂ ಇಲ್ಲಿಂದ ಮುಂದೆ ಸುಮಾರು ಒಂದು ಕಿ.ಮೀ. ದೂರದಲ್ಲಿರುವ ಎರಡು ನಿಲುಗಂಬಕ್ಕೂ ಏನೋ ಸಂಬಂಧವಿದೆ ಎಂದು ಹೇಳುವ ವಾಡಿಕೆಯುಂಟು.

ಚಾರಿತ್ರಿಕವಾಗಿ ಹರಪನಹಳ್ಳಿಯ ಸೋಮಶೇಖರ ರಾಜನ ಆಳ್ವಿಕೆಯಲ್ಲಿ ಮಠದವರು ಸರ್ವಾಧಿಕಾರಿಗಳಾಗಿ ಕೆಲಸ ಮಾಡುತ್ತಿದ್ದರು. ಆಗ ಆಸ್ಥಾನದಲ್ಲಿ ಬ್ರಾಹ್ಮಣ ಪಂಡಿತರು ಇರುತ್ತಿದ್ದರು. ಎಲ್ಲಾ ಕಾರ್ಯ ಕಲಾಪಗಳನ್ನು ನಿರ್ವಹಿಸುತ್ತಿದ್ದ ರಾಜನ ಮೆಚ್ಚುಗೆಗೆ, ಪ್ರೀತಿಗೆ ಪಾತ್ರ ರಾಗಿದ್ದರು. ಹೆಚ್ಚಿನ ಜವಾಬ್ದಾರಿಯು ಇವರದಾಗಿತ್ತು. ಹೊರಗಿನ, ಒಳಗಿನ ಕೊಡುಕೊಳ್ಳುವ ವಿಚಾರ ಇವರದಾಗಿತ್ತು (ಬ್ರಾಹ್ಮಣರದು). ಆಗ ಮೊರಬದ ಶ್ರೀ ವೀರಭದ್ರೇಶ್ವರನ ನವರತ್ನ ಬಂಗಾರ, ಬೆಳ್ಳಿ ಇತರೇ ಸಾಮಾನುಗಳು ಇಲ್ಲಿ ಅಡಕವಾಗಿವೆ ಎಂಬ ವದಂತಿಯಿತ್ತು.

ಈಗ ಸುಮಾರು ಎರಡು ನೂರು ವರ್ಷಗಳ ಹಿಂದಿನ ಕರ್ನಾಟಕದಲ್ಲಿಯ ಬಳ್ಳಾರಿ ಜಿಲ್ಲೆಯ ರಾಜಕೀಯ ವ್ಯವಸ್ಥೆಯಲ್ಲಿ ಈ ಮೊರಬ ಗ್ರಾಮವು ಹರಪನಹಳ್ಳಿಯ ಪಾಳೇಗಾರರಾಗಿದ್ದ ನಾಯಕರ ವಶದಲ್ಲಿತ್ತು. ಅಂದರೆ ಹರಪನಹಳ್ಳಿಯ ಪಾಳೇಪಟ್ಟಿಗೆ ಸೇರಿದ ಜರಿ ಮಲೆಯ ಸಿದ್ಧಪ್ಪ ನಾಯಕನ ಪಾಳೇಪಟ್ಟಿಗೆ ಸೇರಿತ್ತು. ಆಗ ಹರಪನಹಳ್ಳಿಯ ಪ್ರಸಿದ್ಧನಾದ ಸೋಮಶೇಖರ ರಾಜನು ತನ್ನ ರಾಜಧಾನಿಯ ಅಧೀನದ ಜರಿಮಲೆಯ ಪಾಳೇಪಟ್ಟಿನ ವೀರನಗುಡ್ಡ ಈಗಿನ (ಬೀರಲಗುಡ್ಡ) ನಾಯಕರ ಅಡಿಯಲ್ಲಿ ಆಳ್ವಿಕೆಗೊಳಪಟ್ಟಿತ್ತು. ಆಗ ನಾಯಕರು ತಮ್ಮ ಆಡಳಿತವು ಸುವ್ಯವಸ್ಥೆಯಲ್ಲಿ ನಡೆಯಲು ನೋಡಿಕೊಳ್ಳುವುದಕ್ಕಾಗಿ ೧೩೩ ಹಳ್ಳಿಗಳ ಜಹಗೀರಿಯನ್ನು ಬೇರೆಯವರಿಗೆ ವಹಿಸಿದ್ದರು. ಜರಿಮಲೆಯ ಗುಡೇಕೋಟೆ, ಪಾಲಯನ ಕೋಟೆ, ಮಾಕನಡುಕ, ಬಸವನಕೋಟೆ, ಇನ್ನು ಅನೇಕ ಕೋಟೆಗಳ ಉಸ್ತುವಾರಿಕೆಯನ್ನು ನೋಡುತ್ತಿದ್ದು, ಅವರ ಯೋಗಕ್ಷೇಮ, ಪ್ರಜಾ ರಕ್ಷಣೆ ಪರಿಪಾಲನೆಗಾಗಿ ಮಂತ್ರಿಗಳನ್ನು ನಿಯಮಿಸಿ, ಆಡಳಿತ ಕಾರುಬಾರು ಮಾಡುತ್ತಿದ್ದನು. ಈ ಸೋಮಶೇಖರ ರಾಜನ ಕಾಲದಲ್ಲಿ ಪೂಜಾರಿಯು ಹರಪನಹಳ್ಳಿಯಿಂದ ಬರುತ್ತಿದ್ದನೆಂದು ತಿಳಿದು ಈತನ ಪೂರ ಚಹರಿಯನ್ನು ತಾನು ಹಾಗೂ ಮಂತ್ರಿಗಳಿಂದ ಗುಪ್ತ ರೀತಿಯಲ್ಲಿ ಪರೀಕ್ಷಿಸಿ ಬಂದು ನೋಡಲಾಗಿ ವೀರಭದ್ರೇಶ್ವರ ದೇವಸ್ಥಾನದಲ್ಲಿ ಪೂಜಾರಿ ಇದ್ದುದನ್ನು ಕಂಡು ಈತನಿಗೆ ೧೬ ಎಕರೆ ಕುಷ್ಕಿ ಜಮೀನು, ಎರಡು ಎಕರೆ ತರಿ ಜಮೀನನ್ನು, ಉಂಬಳಿಯಾಗಿ ಕೊಟ್ಟು, ಇದು ಪೂಜಾರಿಗಳಿಗೆ ಮಾತ್ರ ಸಲ್ಲಬೇಕೆಂದು ತಿಳಿಸಲಾಗಿದೆ. ಇಂದಿಗೂ ಪೂಜಾರಿಗಳ ವಂಶಸ್ಥರೇ ಅನುಭವಿಸುತ್ತಾ ಬಂದಿರುತ್ತಾರೆ.

ಅಧ್ಯಾಯ - ಮೂರು

ವೀರಭದ್ರೇಶ್ವರಸ್ವಾಮಿ ಅಥವಾ ವೀರಣ್ಣ

೩.೧. : ವೀರಭದ್ರ ಒಂದು ವಿಚಾರ

೩.೨. : ಪದನಿಷ್ಪತ್ತಿ

೩.೩. : ಕನ್ನಡಿಗ ವೀರಭದ್ರ

೩.೪. : ವೀರಣ್ಣ ದೈವಗಳ ಐತಿಹ್ಯ

೩.೫. : ದೇವಸ್ಥಾನ ಸ್ಥಾಪನೆ

೩.೬. : ಶ್ರೀ ವೀರಭದ್ರ ದೇವಸ್ಥಾನದ ಅಭಿವೃದ್ಧಿ ಹಂತ

೩.೭. : ಆಸ್ತಿ ಮತ್ತು ಆಡಳಿತ

೩.೮. : ವಾಸ್ತುಶಿಲ್ಪ

೩.೯. : ಪವಾಡಗಳ ಹಿಂದಿನ ಸ್ವರೂಪ

೩.೧೦. : ವೀರಭದ್ರೇಶ್ವರ ಸ್ವಾಮಿಯ ಉಡುಗೆ-ತೊಡುಗೆಗಳು

ಅಧ್ಯಾಯ - ಮೂರು

ವೀರಭದ್ರೇಶ್ವರಸ್ವಾಮಿ ಅಥವಾ ವೀರಣ್ಣ

ದಕ್ಷಬ್ರಹ್ಮನು ತನ್ನ ೨೭ ಮಂದಿ ಪುತ್ರಿಯರನ್ನು ದೇವತೆಗಳಿಗೆ ಕೊಟ್ಟಿದ್ದು, ಅದರಲ್ಲಿ ಶಿವನಿಗೆ ಕೊಟ್ಟ ಪಾರ್ವತಿಯೂ ಹೌದು. ದಕ್ಷಬ್ರಹ್ಮನು ತನ್ನ ಪ್ರಜಾ ಯೋಗಕ್ಷೇಮ ರಕ್ಷಣೆಗಾಗಿ ತನ್ನ ಪ್ರಾಪ್ರತ್ಯವನ್ನು ವಿಸ್ತಾರ ಮಾಡಿಕೊಳ್ಳುವುದಕ್ಕಾಗಿಯೂ ಹಾಗೂ ತನ್ನ ಇಚ್ಛಿತ ಪದವಿಯನ್ನು ಗಳಿಸಿಕೊಳ್ಳುವುದಕ್ಕಾಗಿಯೂ ಯಾಗವನ್ನು ಮಾಡಹತ್ತಿದನು. ಆ ಸಂದರ್ಭದಲ್ಲಿ ತನ್ನ ಮಕ್ಕಳನ್ನು ಕರೆಯಲು ಹೋದ. ಎಲ್ಲರನ್ನು ಕರೆದಂತೆ ಪಾರ್ವತಿಯನ್ನು ಕರೆಯಲು ಹೋದಾಗ ಶಿವ-ಪಾರ್ವತಿಯರು ಕೈಲಾಸದಲ್ಲಿ ಸಭಾ ಮಧ್ಯದಲ್ಲಿ ಕುಳಿತಿರುವ ಸಂದರ್ಭದಲ್ಲಿ ದಕ್ಷ ಪ್ರಜಾಪತಿಯು ಶಿವನ ಕೈಲಾಸ ದ್ವಾರದಲ್ಲಿ ಬಂದಾಗ, ಶಿವನು ಈತನ ಕಡೆಗೆ ನೋಡದೆ ನಿರ್ಲಕ್ಷ್ಯ ಸ್ವಭಾವ ತೋರಿದನು. ಹಾಗೆಯೇ ವಿಚಾರಿಸದಿದ್ದಾಗ ಆತನನ್ನು ಮನಬಂದಂತೆ ಬೈದನು ನೀನು ತ್ವಪಚ, ಬಾಯಿಬಡುಕ, ಬೂದಿಬಡುಕ, ಸ್ಮಶಾನದಲ್ಲಿ ಮನೆ ಮಾಡಿದವನೆ, ಏರಲು ಮುದಿ ಎತ್ತು ಎಂದು ಅವಾಚ್ಯ ಶಬ್ದಗಳಿಂದ ಬೈದನು. ಜೊತೆಗೆ ಮಗಳನ್ನು ಕರೆಯದೆ ಹಿಂದಿರುಗಿ ಬಂದನು. ಹಿಂತಿರುಗಿ ಹೋದದ್ದನ್ನು ಕಂಡ ಪಾರ್ವತಿ ತನ್ನ ಪತಿಯಾದ ಪರಶಿವನ ಬಳಿಗೆರಗಿ ನಮಸ್ಕರಿಸಿ ನಾನು ನಮ್ಮ ತಂದೆಯ ಯಜ್ಞಕ್ಕೆ ಹೋಗುವೆನೆಂದು ಕೇಳಿದಳು. ಶಿವನು ಅನೇಕ ವಿಧದಿಂದ ಕರೆಯದವರ ಮನೆಗೆ ಎರವಾಗಿ ಹೋಗಬಾರ ದೆಂದು ತಿಳಿಸಿದನು. ಹೋಗಲೇಬೇಕೆಂದು ಹಠ ಮಾಡಿದ್ದಕ್ಕಾಗಿ ಶಿವನು ಕಳಿಸಿಕೊಟ್ಟ. ಪಾರ್ವತಿಯು ದಕ್ಷ ಬ್ರಹ್ಮನ ಯಾಗ ಶಾಲೆಗೆ ಬಂದಾಗ ಮಾತನಾಡಿಸದೆ, ಅವಾಚ್ಯ ಶಬ್ದಗಳಿಂದ ಬೈದಿದ್ದಲ್ಲದೆ ಪಾರ್ವತಿಯನ್ನು ಕಡೆಗಣಿಸಿದ್ದರಿಂದ ಪಾರ್ವತಿಯು ಅಗ್ನಿಯಲ್ಲಿ ಹಾರಿ ಪ್ರಾಣ ಹರಣ ಮಾಡಿಕೊಂಡಳು.

ಈ ವಿಷಯ ತಿಳಿದ ಶಿವನು ಸಿಡಿಮಿಡಿಗೊಂಡು ಸಿಡಿಲ್ ಹೊಡೆದಂತೆ ನಡುಗಣ್ಣ ತೆರೆದು ನೋಡಿದಾಗ, ಆ ನಡುಗಣ್ಣಿನಿಂದ ಕಿಡಿಗಣ್ಣ ವೀರಭದ್ರ ಉದಯಿಸಿದ. ಅಂದಿನಿಂದ ಭಾರತದ ಉದ್ದಗಲಕ್ಕೂ ಎಲ್ಲಡೆಯಲ್ಲಿಯೂ ವೀರಭದ್ರನ ಮೂರ್ತಿಗಳೇ ಕಾಣ ಬರುತ್ತಿವೆ. ಕರ್ನಾಟಕದ ವಿಜಯನಗರದ ಸಾಮ್ರಾಜ್ಯ ಎಲ್ಲೆಡೆಯಲ್ಲಿಯೂ ವೀರಭದ್ರೇಶ್ವರ ಮೂರ್ತಿಗಳೇ ಹೆಚ್ಚಾಗಿ ಕಾಣುವುದುಂಟು. ಅದರಲ್ಲಿ ಮೊರಬದ ಶ್ರೀ ವೀರಭದ್ರೇಶ್ವರ ದೇವರು ಕೂಡ ಹೌದು.

೩.೧. ವೀರಭದ್ರ ಒಂದು ವಿಚಾರ :

ಶಿವನಿಗೆ ಮೂರು ಮಂದಿ ಪುತ್ರರು. ಅವರೇ ಗಣಪತಿ, ಕುಮಾರ ಹಾಗೂ ವೀರಭದ್ರ. ಶಿವಾಗವು ಶಿವಪುರಾಣಗಳ ಪ್ರಕಾರ ಶಿವನ ಪಂಚಮಿಶ ಲೀಲೆಗಳಲ್ಲಿ ಹನ್ನೆರಡನೆಯ ಲೀಲೆಯೂ ವೀರಭದ್ರನ ಅವತಾರವೆಂದು ವಿದ್ವಾಂಸರ ಅಭಿಪ್ರಾಯ. ವೀರಭದ್ರ ಶಿವನ ಹಣೆಗಣ್ಣಿನಿಂದ ಹುಟ್ಟಿದನೆಂದೂ, ಸತಿಯ ವಿರಹದುರಿಯಲ್ಲಿಹದುರಿಯಲ್ಲಿ ತಪ್ತನಾದ ಶಿವನ ತನ್ನ ಜಡೆಯನ್ನು ಕೈಲಾಸ ಶಿಖರಕ್ಕೆ ಅಪ್ಪಳಿಸಿದಾಗ ವೀರಭದ್ರ ಜನಿಸಿದನೆಂದೂ ಕೆಲವರು ತಿಳಿದಿರುತ್ತಾರೆ.

ವೀರಶೈವ ಧರ್ಮಕ್ಕೂ ವೀರಭದ್ರ ದೇವರಿಗೂ ನಿಕಟ ಸಂಬಂಧವಿದೆ. ವೀರಶೈವ ಪಂಚಗೋತ್ರಗಳಾದ ವೀರ, ನಂದಿ, ಭೃಂಗಿ, ವೃಷಭ, ಸ್ಕಂದ ಇವುಗಳಲ್ಲಿ ಮೊದಲನೆಯದಾದ ವೀರ ಗೋತ್ರಕ್ಕೆ ವೀರಭದ್ರನು ಅಧಿಪತಿಯಾಗಿರುತ್ತಾನೆ. 'ವೀರಶೈವ ಸಮಾಜಕ್ಕೆ ಪೂಜ್ಯ ಗುರುಗಳಾದ ಶ್ರೀ ಭಗವತ್ಪಾದ ರೇಣುಕಾಚಾರ್ಯರ ಪರಂಪರಾತವಾದ ಮಠಗಳಲ್ಲಿ ವೀರಭದ್ರ ಮೂರ್ತಿಯು ಆರಾಧ್ಯ ದೇವತೆಯಾಗಿರುತ್ತದೆ'. ಈ ಭವ್ಯ ಮೂರ್ತಿಯನ್ನು ರಾಘವಾಂಕ ಹೀಗೆ ಚಿತ್ರಿಸುತ್ತಾನೆ.

> 'ಸೊಡರ್ಗುಡಿ ವೆಳಗಿನ ಮೈವಣ್ಣಂ ನಿಡುಜಡಮುಡಿ ।
> ನಡನೆತ್ತಿಯಲಿಂಗಂ ಮುಕುಟಂ ಫಣಿ ಕುಂಡಲ
> ಕುಡಿಗಣ್ಣುರಿಗೆದರುವ ಪಂಚಮುಖಂ ನಿಡುದಾ
> ಡೆಗಳೆಸೆವ ಸಹಸ್ರ ಭುಜಂ ॥
> ಉಡುಗೆಯ ಚಲ್ಲಣ ರೆಗ್ಗಟ್ಟಿನ ಭೀಳಾಯುಧ
> ಬಿಡುವ ಶಿರೋಮಾಯಲಾಭರಣಗಳೆಂಬಗ್ಗದ
> ತೊಡವಹಿತರ ಹಾಹೆಗಳೆಳೆಯಲು ವೀರೇಶನ ನಿಲಪಾರಂ ನಡುಗಿಸದು'.

ರಾಘವಾಂಕ ಕವಿ ಹೀಗೆ ವೀರಭದ್ರನನ್ನು ವೀರ ಕುಲಾಧೀಶ್ವರ, ಹಲಗೆಯ ಕಡುಗಲಿ ಎಂದು ಬಣ್ಣಿಸಿದ್ದಾನೆ. ಮತ್ತು ವೀರಭದ್ರನು 'ನಡುನೆತ್ತಿಯಲಿಂಗ' ಧಾರಿಯಾಗಿದ್ದ ವೀರಶೈವನೆಂದೂ ಸ್ಪಷ್ಟವಾಗುತ್ತದೆ. 'ವೀರೇಶ'ನೆಂಬ ಮಾತೇ ವೀರಶೈವವಾಗಿರಬೇಕೆಂದು ಕೆಲವರ ಅಭಿಪ್ರಾಯವೂ ಇದೆ. ದಕ್ಷಿಣ ಹಿಂದೂ ಸ್ಥಾನದಲ್ಲಿ ಪ್ರಸಿದ್ಧವಾದ ಹಲವು ವೀರಭದ್ರ ದೇವಾಲಯಗಳಿವೆ. ಶ್ರೀಶೈಲದ ನಾಗಲೂಟಿ, ಕುಂಭಕೋಣಂ, ಪೆರಯಮಠಂ, ಕಂಚಿಯ ಕಲ್ಲುಮಠ, ಮೈಸೂರು ಜಿಲ್ಲೆಯ ನಾಗಮಂಗಲ, ರಾಜೋಟಿ ವೀರಭದ್ರ, ಬೆಂಗಳೂರಿನ ಪ್ರಳಯ ಕಾಲದ ವೀರಭದ್ರ, ಓರುಗಲ್ಲಿನ ವೀರಭದ್ರ ದೇವರು. ಮಂಗಳೂರು ಜಿಲ್ಲೆಯ ಕಾರ್ಕಳದ ವೀರಭದ್ರ. ಕೆಳದಿ ವೀರಭದ್ರ ದೇವರು ಮುಂತಾದ ವಿಗ್ರಹಗಳಲ್ಲಿ ಭವ್ಯತೆಯನ್ನು ಕಾಣಬಹುದಾಗಿದೆ.

ಕರ್ನಾಟಕದಲ್ಲಿ ಪ್ರಸಿದ್ಧವಾದ ವೀರಭದ್ರ ಮೂರ್ತಿಗಳೆಂದರೆ, ಹಂಪೆಯಲ್ಲಿರುವ ಉದ್ಧಾನ ವೀರಭದ್ರ, ತುಮಕೂರು ಸಮೀಪದ ನಿಜಗಲ್ಲು ಬೆಟ್ಟದಲ್ಲಿರುವ ಉದ್ದಾನ ವೀರಭದ್ರ. ಈ ಎರಡು ಮೂರ್ತಿಗಳು ಸುಮಾರು ೨೦ ಅಡಿ ಎತ್ತರವಾಗಿವೆ. ಇವಲ್ಲದೆ ಕರ್ನಾಟಕದ ಕೆಲ ವೀರಭದ್ರ ಮೂರ್ತಿಗಳನ್ನು ನೋಡಬಹುದು.

ವೀರಭದ್ರಸ್ವಾಮಿಯ ಕಥೆಯನ್ನೋದಿದ ಮೇಲೆ ಅನಿಸುತ್ತದೆ. ಆತನೊಬ್ಬ ದೀನ ದಲಿತರ ಉದ್ಧಾರಕ್ಕಾಗಿ ಹೋರಾಡಿದ ವೀರೋದ್ಧಾತ್ತನೆಂದು, ಜಾತಿ ಸೂತಕವಿಲ್ಲದೆ, ಅಧಿಕಾರ ಲಾಲಸೆಯಿಲ್ಲದೆ ಹಗಲಿರುಳು ಜನರ ಏಳಿಗೆಗೆ ಶ್ರಮಿಸಿದವನು ವೀರಭದ್ರ. ಅಂತೆಯೇ ಆತನನ್ನು ಕುರಿತ ವೀರ 'ವಡಬುಗಳು' ಆತನ ದಿವ್ಯ ಚರಿತ್ರೆಯ ವಚನಗಳೇ ಆಗಿವೆ. ಮೌಢ್ಯತೆಯ ಮೃಗಬೇಟೆಯನ್ನಾಡಿ ಕಂಡದ್ದನ್ನು ಕಂಡಂತೆ ಆಡಿ ಸತ್ಯದ ಸಾಕ್ಷಾತ್ಕಾರವನ್ನು ಮಾಡಿಕೊಟ್ಟವನೇ ವೀರಭದ್ರ. ಅಗ್ನಿ ಕುಂಡದಲ್ಲಿ ಪ್ರಾಣಿ, ಹಿಟ್ಟು, ತುಪ್ಪ, ಎಣ್ಣೆಗಳನ್ನು ಸುರಿಯುತ್ತಿದ್ದ ಅರ್ಥವಿಲ್ಲದ ಸ್ವಾರ್ಥಿಗಳನ್ನು ಅಗ್ನಿ ಕುಂಡದಲ್ಲಿ ' ಈಡಾಡಿ' ಮಡಿ ಉಡಿಯಿಂದ ನಡೆದ ವೀರನ ಕಥೆ ಸಾಹಸಮಯವೂ, ಭವ್ಯವೂ ಆಗಿದೆ.

ವೀರೇಶನನ್ನು ಪೂಜಿಸುವುದೆಂದರೆ, ವೀರ ಹಾಗೂ ಭವ್ಯತೆಯ ಪರಂಪರಾನುಗತ ಜೀವನ ದೀಕ್ಷೆಯನ್ನು ಕೈಗೊಂಡಂತೆಯೇ ಸರಿ. ಮೇಲು ಕೀಳುಗಳನ್ನು ತೃಣೀಕರಿಸಿ ಶೋಷಣೆಯನ್ನು ದೂರ ಮಾಡಿ ದ್ವೇಷಾಸೂಹೆಯ ಭಾವನೆಗಳನ್ನು ಸುಟ್ಟು ಮಾನವೀಯತೆಯನ್ನು ಸಮಾಜದಲ್ಲಿ ಅಳವಡಿಸಿ ಕೊಳ್ಳಬೇಕೆಂಬುದೇ ವೀರೇಶನ ಜೀವನ ಚರಿತ್ರೆಯ ಮುಖ್ಯ ಗುರಿ. ಸಮಾಜ ಸಮತೋಲನಕ್ಕಾಗಿಯೇ ಆತ ಸಿಟ್ಟಿನ ಮೂರ್ತಿಯಾಗಿದ್ದ. ಆತ ಮಹಾ ಅಂತಃಕರಣ ಸ್ವಭಾವದವನಾಗಿದ್ದ. 'ಸಿಟ್ಟಿದ್ದವ ಬಳಿ ರೊಟ್ಟಿಯಿರುತ್ತವೆಂಬುದಕ್ಕೆ' ಸಾಕ್ಷಿಯಾಗಿದ್ದ. ಎಲ್ಲರ ಕ್ಷೇಮಕ್ಕಾಗಿ ಹೋರಾಡಿ ವೀರಭದ್ರ ಜನಪ್ರಿಯ ದೇವನಾದ. ಸಕಲ ಜೀವಹತ್ಯೆಗೆ ಶೋಷಣೆಗೆ ಉತ್ಕೃಷ್ಟ ದೇವತೆಯ ಅಪ ಮಾನಕ್ಕೆ ಕಾರಣ ನಾದ. ದಕ್ಷನ ಯಜ್ಞವನ್ನು ಧ್ವಂಸ ಮಾಡಿ ಶರಣೆಂದವರನ್ನೆಲ್ಲಾ ಬದುಕಿಸಿ ಅವರಿಗೆಲ್ಲಾ ಶಿವತ್ವವನ್ನು ಕಲ್ಪಿಸಿಕೊಟ್ಟ. ಸತ್ಯ ಶರಣ ವೀರಭದ್ರ ಶ್ರೀ ಜ.ಚ.ನಿಯವರು ಹೇಳುವಂತೆ 'ಶೈವೀ ಕ್ರಾಂತಿಗೆ ನಾಂದಿ ಹಾಡಿದ ಶೈವವಾದಿ, ವೀರಶೈವ ಪ್ರವಾದಿ, ವೀರಗಣ ಪ್ರತಿನಿಧಿ, ಪುರವಂತರು, ಪುರವಂತರ ಪ್ರತಿನಿಧಿ ಮತ್ತು ಪ್ರತಿಪಾಲಕ, ಭದ್ರ ಜೀವನದ ಪ್ರತಿಷ್ಠಾಪಕ, ವೀರ ಪ್ರತಿಭೆಯಿಂದ ಪ್ರತಿಷ್ಠಿತ, ಶೋಷಣೆಗೆ ತುತ್ತಾಗಿ ತೊಳುವವರನ್ನು ಸಲಹುವಾತ, ಊರ ಮನೆಗಳನ್ನು ಕಳೆದುಕೊಂಡವರಿಗೆ ಮರಳಿ ಕೊಡಿವುವಾತ ವೀರಭದ್ರ. ಇಂಥವೀರ ಪರಂಪರೆಯಿಂದ ಸಮಾಜೋದ್ಧಾರವಾಗಲಿ ಭವ್ಯ ರಾಷ್ಟ್ರ ನಿರ್ಮಾಣವಾಗಲಿ.

೩.೨. ಪದ ನಿಷ್ಪತ್ತಿ :

ವೀರಭದ್ರ, ವಿಶ್ವಚೇತನ, ವಿಶಿಷ್ಟ ಚೇತನ ಮತ್ತು ಭದ್ರ ಚೇತನ ಬೃಹತ್ ಚೇತನ. ಆತನ ವೀರತನ, ಭದ್ರತನ ಮುಖ್ಯವಾಗಿ ನಾಲ್ಕು ತೆರನಾಗಿವೆ. ೧) ನಾಮದಲ್ಲಿ, ೨) ವೀರರೂಪದಲ್ಲಿ, ೩) ವೀರಗುಣದಲ್ಲಿ, ೪) ಕ್ರಿಯೆಯಲ್ಲಿ ವೀರ. ಇದು ಈತನದೇ ವೈಶಿಷ್ಟ್ಯ ಇದರಿಂದಾಗಿ ಈತನನ್ನು ವೀರಭದ್ರ ಚನ್ನಮಲ್ಲ, ಚನ್ನವೀರ, ಚೆನ್ನ ಮತ್ತು ಕಣ್ಣಡಿಗ ಕಾರಡಿಕೆ, ಸಿದ್ಧವೀರ, ಸಿದ್ಧಮಲ್ಲ, ಶಾಂತಮಲ್ಲ ಎಂದು ಮುಂತಾಗಿ ಕರೆಯುವುದುಂಟು. ಈ ಎಲ್ಲಾ ಹೆಸರುಗಳಲ್ಲಿ ನಾಮ ರೂಪ ಗುಣ ಕ್ರಿಯೆ ಆರ್ಥ್ಯಾಭಿವ್ಯಕ್ತಿ ಇದೆ.

೨.೩. ಕಣ್ಣಡಿಗ ವೀರಭದ್ರ :

ಕೃಷ್ಣ ವೀರೇಶನ ಅನುಗ್ರಹ ಪಡೆಯಲು ನಿತ್ಯ ಸಾವಿರ ತಾವರೆ ಹೂ ಪೂಜೆಯ ಕಾಯಕವನ್ನಾರಂಭಿಸಿದ. ಸಾವಿರ ತಾವರೆ ಹೂವುಗಳಲ್ಲಿ ೯೯೯ ಹೂಗಳು ಮಾತ್ರ ಇದ್ದು, ಇನ್ನೊಂದು ಹೂ ಸಾಲದು ಬಂತು. ವ್ರತನಿಷ್ಠೆಗೆ ಭಂಗ ಬಾರದೆಂದು ಪೂಜಾ ನಿಷ್ಠೆಯಲ್ಲಿ ಮಗ್ನನಾದ ವಿಷ್ಣು ತನ್ನ ಕಣ್ಣನ್ನೇ ಕಿತ್ತು ವೀರಭದ್ರನ ಪಾದದ ಮೇಲೆ ಇಟ್ಟ. ಆಗ ವೀರಭದ್ರ ಅಡಿಯಲ್ಲಿನ ಕಣ್ಣುಳ್ಳವನಾದ 'ಕಣ್ಣಡಿಗ-ನಾದ' ಕನ್ನಡನಾಡಿನ ಮೂಲ ಪುರುಷನಾದ.

೩.೪. ವೀರಣ್ಣ ದೈವಗಳ ಐತಿಹ್ಯ :

ಮೊರಬ ಗ್ರಾಮದಲ್ಲಿ ಎರಡು ವೀರಭದ್ರೇಶ್ವರ ದೇವಸ್ಥಾನಗಳಿದ್ದು, ಅವುಗಳನ್ನು 'ಸಣ್ಣ ವೀರಣ್ಣ', 'ದೊಡ್ಡ ವೀರಣ್ಣ' ಎಂದು ಇಂದಿಗೂ ಕರೆಯುತ್ತಾರೆ. ಊರಿನ ಹೊರಭಾಗದ ಪೂರ್ವಕ್ಕೆ ಸಣ್ಣ ವೀರಣ್ಣನ ಗುಡಿ, ದಕ್ಷಿಣಕ್ಕೆ ದೊಡ್ಡ ವೀರಣ್ಣ ಗುಡಿಗಳನ್ನು ಕಟ್ಟಲಾಗಿದೆ. ವೀರಭದ್ರೇಶ್ವರನು ಈ ಊರಲ್ಲಿ ಪ್ರತಿಷ್ಠಾಪನೆಗೊಳ್ಳುವುದಕ್ಕೆ ಒಂದು ಐತಿಹ್ಯ ಪ್ರಚಾರದಲ್ಲಿದೆ. ಅದೇನೆಂದರೆ; ಬಿಜಾಪುರ ಜಿಲ್ಲಾ ಕೊರತಿ ಕೊಲ್ಲಾರದ ಕೆಂಬಾವಿ ಗ್ರಾಮದಲ್ಲಿ ವೀರಶೈವ ಶುದ್ಧ ಶಿವಾಚಾರ ಸಂಪನ್ನರಾದ ಗೌಡರ ಮನೆಯ ಹೆಣ್ಣು ಮಗಳನ್ನು ಇಲ್ಲಿಗೆ ತಂದುಕೊಂಡಿದ್ದರು. ಈ ಮನೆಯ ಸಂಬಂಧಿಗಳು ಗ್ರಾಮದಲ್ಲಿ ಹೆಚ್ಚಾಗಿ ಇದ್ದರು. ಇವರ ಆರಾಧ್ಯ ದೈವ ಶ್ರೀ ವೀರಭದ್ರೇಶ್ವರ. ಈ ತಾಯಿ ಯವ್ವನಾವಸ್ಥೆಯಲ್ಲಿದ್ದು, ಸುಂದರಿಯಾಗಿದ್ದಳು. ಅತಿ ಚಲುವೆ. ಹೀಗಿರುವಾಗ ಇವರ ಪತಿ ದೈವಾಧೀನರಾದರು. ಈ ಸಂದರ್ಭದಲ್ಲಿ ಬಿಜಾಪುರ ಸುಲ್ತಾನ ಕುತಬ್‌ಷಾನ ಆಳ್ವಿಕೆಯ ಕಾಲದಲ್ಲಿ ಮುಸ್ಲಿಂ ಸೈನಿಕನ ದೃಷ್ಟಿ ಇವಳ ಮೇಲೆ ಬಿತ್ತು. ಸುಂದರಿಯಾದ ಇವಳನ್ನು ತನ್ನವಳನ್ನಾಗಿಸಿಕೊಳ್ಳಲು ಅನೇಕ ಸಂಚುಗಳನ್ನು ಮಾಡಿ, ತನ್ನೆಡೆಗೆ ಬರುವಂತೆ ಮಾಡಿದ. ಆದರೆ ಏಕ ಪತ್ನಿ ವ್ರತಸ್ಥ ಪತಿಯೇ

ಪರದೈವನೆಂದು ನಂಬಿದ ಈ ಗರತಿ, ಪತಿ ವಿಯೋಗದಿಂದ ಬಳಲಿದ್ದರು. ಬರಡಾದ ತನ್ನ ಬದುಕಿನಡೆಗೆ ಆಸೆ ಪಡದೆ ನಿರ್ಲಕ್ಷ್ಯತನದಿಂದ ಅವನನ್ನು ತುಚ್ಛೀಕರಿಸಿ ಛೀಮಾರಿ ಹಾಕಿದಳು. ಇದರಿಂದ ನೊಂದ ಆ ಮುಸ್ಲಿಂ ಸೈನಿಕ ಈ ವಿಷಯವನ್ನು ತನ್ನ ದೊರೆಗೆ ಹೇಳಿದನು. ಅಲ್ಲದೆ ದಿನ ನಿತ್ಯವು ಇವಳ ಮೇಲೆ ಆರೋಪದ ಸುರಿ ಮಳೆಗೆರೆಯುತ್ತಿದ್ದನು. ಇದಾವುದಕ್ಕೂ ಜಗ್ಗದೆ ಬಗ್ಗದೆ ತನ್ನ ಕುಲದೇವರಾದ ಶ್ರೀ ವೀರಭದ್ರೇಶ್ವರನ ಪೂಜೆಯಲ್ಲಿ ನಿರತಳಾಗಿದ್ದಳು. ಶ್ರೀ ವೀರಭದ್ರೇಶ್ವರ ದೇವರ ಪಾದದಡಿ ತನ್ನ ಮುಡಿ ಇಟ್ಟು ಬೇಡಿಕೊಳ್ಳುತ್ತಿದ್ದಳು. ಆ ಸಮಯದಲ್ಲಿ ಬಂದ ಧೂತನೊಬ್ಬ ಈ ದೃಶ್ಯವನ್ನು ನೋಡಿ ಇವಳ ಆರಾಧ್ಯ ದೈವ ಶ್ರೀ ವೀರಭದ್ರೇಶ್ವರನೆಂದು ತಿಳಿದು ಈ ವಿಚಾರವನ್ನು ಚಕ್ರವರ್ತಿಗೆ ತಿಳಿಸಿದನು.

ಸ್ವತಃ ಚಕ್ರರ್ಕತಿಯೇ ಬಂದು ನೋಡಲಾಗಿ, ಅವಳು ಶ್ರೀ ವೀರಭದೇಶ್ವರ ದೇವರ ಮೂರ್ತಿಗೆ ತೆಕ್ಕೆ ಬಿದ್ದು ಗೋಳಾಡುತ್ತಿದ್ದುದನ್ನು ಕಂಡು ನನಗೊಲುವಿಯೋ ಅಥವಾ ಊರು ಬಿಟ್ಟು ತೊಲಗುವಿಯೋ ಎಂದನು. ಆದಕ್ಕೆ ಅವಳು ತೊಲಗುವೆನು. ನಿನಗೆ ಒಲಿಯಲಾರೆ ಎಂದಳು. ಹೀಗೆ ಕಡ್ಡಿ ತುಂಡಾಗುವಂತೆ ಹೇಳಿದನ್ನು ಕೇಳಿದ ಚಕ್ರವರ್ತಿ, ಆ ಕ್ಷಣದಿಂದಲೇ ಹಲ ಕೆಲವು ವೀರಭದ್ರೇಶ್ವರ ದೇವರ ಮೂರ್ತಿಗಳನ್ನು ಒಡೆದು ಹಾಕಿಸಿದನು. ಆದರೂ ಜಗ್ಗದೆ ಬಗ್ಗದೆ ಇರುವ ಈಕೆಯ ನಿಶ್ಚಲ ಛಲವನ್ನು ಕಂಡು ಇಲ್ಲಿಂದ ತೊಲಗುವೆಯೋ, ಜೀವ ಕಳೆದುಕೊಂಡು ಮಲಗುವೆಯೋ ಎಂದು ಬಿರುನುಡಿಗಳನ್ನು ಆಡಿದ. ಇದನ್ನು ಕೇಳಿದ ಆ ಗೌಡತಿಯು ಕೆಲ ಉಳಿದ ಮೂರ್ತಿಗಳನ್ನು ತನ್ನ ಪರಿವಾರದವರ ಜೊತೆಗೂಡಿ, ಬಳಗದವರೊಂದಿಗೆ ಬಂಡಿಗಳಲ್ಲಿ ಹೇರಿಸಿಕೊಂಡು ತಾನು ತನ್ನ ತವರೂರಿನ ಕಡೆ ದಕ್ಷಿಣ ಮುಖವಾಗಿ ಪ್ರಯಾಣ ಬೆಳೆಸಲು ಸನ್ನದ್ಧಳಾಗಿದ್ದಳು. ಈ ದೃಶ್ಯವನ್ನು ಕಂಡ ಧೂತರು ಷಾ ನಿಗೆ ವಿಚಾರ ತಿಳಿಸಲಾಗಿ ಕ್ರೋಧವಿತ್ತನಾದ. ಅವನು ಬಂದು ಮೂರ್ತಿ ಹಾಗೂ ಬಳಗ ಕರೆದೊಯ್ಯುವೆಯೋ ಅಥವಾ ಇಲ್ಲಿನ ಕಾಗೆ-ಗುಬ್ಬಿ, ಪಶು-ಪಕ್ಷಿಗಳನ್ನು ಒಯ್ಯುವೆಯೋ ಎಂದು ಕೇಳಿದಾಗ ಸಾಧ್ಯವಾದಷ್ಟು ಬಳಗ ಕಾಗೆ ಗುಬ್ಬಿಗಳನ್ನು ಕರೆದೊಯ್ಯುವೆನೆಂದು ತಿಳಿಸಿದಳಂತೆ.

ಅವಳು ಅಂದ ಮಾತಿನಂತೆ ಏಳು ಮೂರ್ತಿಗಳನ್ನು ಬಂಡಿಯಲ್ಲಿ ಹೇರಿಕೊಂಡು, ಏಳು ಕಂಡುಗ ಅನ್ನ ಬಂಡಿಗೆ ಬಸಿದಾಕಿ, ಪೂಜೆ ಮಾಡಿ ತನ್ನ ದೃಢ ಸಂಕಲ್ಪ ತನ್ನ ಕುಲದೇವರಾದ ನಿನ್ನನ್ನೇ ನಂಬಿ ನನಗತ್ಯಾಚಾರ ನಿನಗೆ ಅಹಿತಕರ ಘಟನೆ ನಡೆಯದ ಹಾಗೆ ಮುನ್ನಡೆಯಲು ಆಶೀರ್ವದಿಸು, ಇಲ್ಲವಾದರೆ ಎಲ್ಲಿ ಬಂಡಿ ನಿಲ್ಲುವುದೋ ಅಲ್ಲಿ ನಿನ್ನ ಮೂರ್ತಿಗಳನ್ನು ಸ್ಥಾಪಿಸಿ ಮುನ್ನೆಡೆಯುತ್ತೇನೆ ಎನ್ನುವ ದೃಢ ಸಂಕಲ್ಪದೊಂದಿಗೆ ಸುತ್ತ ಎಲ್ಲ ಕಡೆಗೂ ಅನ್ನವನ್ನೆರಚಿ ಹಾದಿ ಬೀದಿಗೆ ಚೆಲ್ಲಿ ಕಾಗೆ-ಗುಬ್ಬಿ ಗಳನ್ನು ಕರೆದುಕೊಳ್ಳುತ್ತಾ ಮುನ್ನೆಡೆದಳಂತೆ. ಬರಬರುತ್ತಾ ದಾರಿ ಮಧ್ಯದಲ್ಲಿ ಗಾಡಿ ನಿಂತಲ್ಲಿ ಶ್ರೀ ವೀರಭದ್ರೇಶ್ವರ ದೇವರ ಮೂರ್ತಿ ಸ್ಥಾಪಿಸುತ್ತಾ ಬರುತ್ತಿದ್ದಳಂತೆ.

ಹೀಗೆ ಬರುತ್ತಿರುವಾಗ ರಾಯಚೋಟಿಯಿಂದ ಪೂಜಾರಿಗಳು ಬಂದರೆಂದು ಹೇಳುತ್ತಾರೆ. ಈ ರೀತಿ ಯಾವಗಲ್ ದಾರಿ ಮಧ್ಯ ಬಂಡಿ ನಿಂತಲ್ಲಿ ಅನೇಕ ಮೂರ್ತಿಗಳನ್ನು ನಿಲ್ಲಿಸುತ್ತಾರೆ. ಹೊಸಪೇಟೆಯ ಕಣಿವೆಯಲ್ಲಿ ಬಂಡಿ ನಿಂತಾಗ ಕಣಿವೆ ವೀರಭದ್ರನ ನಿಲ್ಲಿಸುತ್ತಾರೆ. ಹಾರವನ್ನಳ್ಳಿಯಲ್ಲಿ ಬಂಡಿ ನಿಂತಾಗ ವೀರಭದ್ರೇಶ್ವರನನ್ನು ಸ್ಥಾಪಿಸಿ, ಅಡವಿಯಲ್ಲಿ ಅಡವಿ ವೀರಣ್ಣನೆಂದು ಸ್ಥಾಪಿಸಿ ನಂತರ ದಾರಿ ಕ್ರಮಿಸುತ್ತಾ ಕೂಡ್ಲಿಗೆಗೆ ಸೇರಿ ತನ್ನ ಪರಿವಾರದವರು ಹಾಗೂ ಬಂದ ಹಿರಿಯ ಜನರೊಡಗೂಡಿ ಈಗಿನ ಕೂಡ್ಲಿಗಿ ತಾಲೂಕು ಕೂಡ್ಲಿಗಿಯ ಊರಮ್ಮನ ಬಯಲಿನಲ್ಲಿ ಬಂಡಿಯಲ್ಲಿನ ಮೂರ್ತಿ ಹಾಗೂ ಬಂದ ಪರಿವಾರ ಬೀಡುಬಿಟ್ಟತಂತೆ. ಈ ಪರಿವಾರ ಬಂದ ಸುದ್ದಿಯನ್ನು ತಿಳಿದ ತಳವಾರನು ಊರ ಗೌಡರಿಗೆ ಊರಮ್ಮನ ಬಯಲಿನಲ್ಲಿ ನಿಮ್ಮ ಗೌಡತಿಯ ಪರಿವಾರದವರು ಮೂರ್ತಿ ಸಮೇತ ಬಂದಿದ್ದಾರೆ ಎಂದು ತಿಳಿಸುತ್ತಾನೆ. ಆಗ ಗೌಡರು ಬಂದು ನೋಡಿ ವೀರಭದ್ರೇಶ್ವರನ ಮೂರ್ತಿಯನ್ನು ಕಂಡು ಭಕ್ತಿಯಿಂದ ವಂದಿಸಿ ಇಡೀ ಪರಿವಾರಕ್ಕೆ ಊಟದ ವ್ಯವಸ್ಥೆಗಾಗಿ ಬೆಲ್ಲ ಬೇಳೆ ಕೊಟ್ಟರಂತೆ. ಆಗ ಊಟ ಮಾಡಿ,ದಣಿದ ಪರಿವಾರ ನಿದ್ರಾವಸ್ಥೆಯಲ್ಲಿದ್ದಾಗ ಗೌಡರು ಹಾಗೂ ನಾಯಕ ಕೋಮಿನವರು ಸಮಾಲೋಚನೆ ಗೈದು ಈ ಮೂರ್ತಿಯನ್ನು ಇಲ್ಲಿಯೇ ಸ್ಥಾಪಿಸಬೇಕೆಂದು ವಿನಯ ಪೂರ್ವಕವಾಗಿ ಕೇಳಿದರು. ಗೌಡತಿಯು ನನ್ನ ಗಾಡಿ ಅಚ್ಚು ಮುರಿದು ನಿಂತರೆ ಅಲ್ಲಿ ಸ್ಥಾಪಿಸುವೆ ಎಂದು ಸಂಕಲ್ಪ ಮಾಡಿಕೊಂಡಿರುತ್ತೇನೆ. ಇಲ್ಲವಾದರೆ ಮುಂದೆ ಸಾಗುವೆ ಎಂದು ತಿಳಿಸಿದಳು.

ಈ ಮಾತನ್ನು ಕೇಳಿದ ಜನರು ಒಕ್ಕೊರಲಿನಿಂದ ಬಂಡಿಯಲ್ಲಿರುವ ಮೂರ್ತಿಯನ್ನು ಎತ್ತಿಕೊಂಡು ಹೋಗಿ ಊರ ಮುಂದಿರುವ ಊರಮ್ಮನ ಬಾವಿಯಲ್ಲಿ ಹಾಕಿದರು. ಬೆಳಿಗ್ಗೆ ನೋಡಲಾಗಿ ಶ್ರೀ ವೀರಭದ್ರೇಶ್ವರ ದೇವರ ಶಿಲಾ ಮೂರ್ತಿಯು ಹೊಂಡದಲ್ಲಿ ನೀರಿನ ಮೇಲೆ ತೇಲುತ್ತಿತ್ತು. ಇದನ್ನು ಕಂಡು ಆಶ್ಚರ್ಯ ಚಕಿತರಾದ ಜನರು ನೋಡ ನೋಡುತ್ತಿದ್ದಂತೆ, ಗೌಡ ಮನೆತನದ ಒಬ್ಬನಿಗೆ ಆವೇಶ ಬಂದು ತಡ ಮಾಡದೇ ಈ ಮೂರ್ತಿನ್ನು ಮುಂದೆ ಸಾಗಿಸಿ ತಡ ಮಾಡಿದರೆ ಅನಾಹುತ ಸಂಭವಿಸುವುದು ಎಂದು ಕೋಲಾಹಲ ಗೈದು ಕೇಕೆ ಹಾಕಿ ತತ್‌ಕ್ಷಣದಲ್ಲಿಯೇ ಮರಣವನ್ನಪ್ಪಿದನಂತೆ. ಇದನ್ನು ಕಂಡು ಭಯಬ್ರಾಂತರಾದ ಜನರು ಒಟ್ಟಾಗಿ ಬಂಡಿಯಲ್ಲಿ ಹಾಕಿ ಪರಿವಾರದೊಡನೆ ಇಡೀ ಕೂಡ್ಲಿಗಿಯ ಸಕಲ ಜನರು ಮುನ್ನಡೆದರು. ಬಂಡಿಯು ಶ್ರೀ ವೀರಭದ್ರೇಶ್ವರನನ್ನು ಹೇರಿದ ಬಂಡಿ ಮುಂದೆ ಸಾಗುತ್ತಾ ಈಗಿರುವ ಈ ಮೊರಬದ ಊರ ಮುಂಭಾಗದ ದಿನ್ನೆಯ ಮೇಲೆ ಅಚ್ಚು ಮುರಿದು ನಿಂತಾಗ, ಜಯ ಘೋಷಗಳನ್ನು ಕೂಗುತ್ತಾ ಮೂರ್ತಿಯನ್ನು ಪ್ರತಿಷ್ಠಾಪಿಸಿದರು. ಇದೇ ಈಗಿರುವ ದೊಡ್ಡ ವೀರಭದ್ರೇಶ್ವರ ದೇವರ ಗುಡಿ. ಈ ಗುಡಿಯನ್ನು ಭಕ್ತರ ಸಹಕಾರದಿಂದ ಊರ ಪ್ರಮುಖರ ನೇತೃತ್ವದಲ್ಲಿ ಕೂಡ್ಲಿಗಿಯ ಗೌಡ ಮನೆತನದವರ ಸಹಕಾರದೊಂದಿಗೆ ಗರ್ಭಗುಡಿ ಸ್ಥಾಪಿಸಲ್ಪಟ್ಟಿತು. ಆದುದರಿಂದ ಇದಕ್ಕೆ ಕೂಡ್ಲಿಗಿ ಈರಣ್ಣ ಎಂದು ಕರೆಯುವುದುಂಟು. ತರುವಾಯ ಮುಂಭಾಗದಲ್ಲಿ ಹದಿನಾರು ಶಿಲಾ ಮಂಟಪವನ್ನು ಕಟ್ಟಿಸಿ ತೇರನ್ನು ಇಲ್ಲಿ ಎಳೆಯುತ್ತಾರೆ.

೩.೫. ದೇವಸ್ಥಾನ ಸ್ಥಾಪನೆ :

ಸುಮಾರು ಹದಿನಾರು ನೂರರ ಕಾಲದಲ್ಲಿ ಶ್ರೀ ವೀರಭದ್ರೇಶ್ವರ ದೇವಸ್ಥಾನವು ಇಲ್ಲಿ ಮೂಲತಃ ಗರ್ಭಗುಡಿ ಗಂಧದ ಕಟ್ಟಿಗೆಯಿಂದ ನಿರ್ಮಿಸಲ್ಪಟ್ಟ ದೇವಸ್ಥಾನವಿತ್ತು. ಆಗ ವಿಶೇಷತಹ ಪೂಜಾರಿಗಳು ಗರ್ಭಗುಡಿಯ ಒಳಗೆ ಪೂಜೆ ಮಾಡುತ್ತಿದ್ದರು. ತದನಂತರ ಚಿಂತಾಮಣಿ ಸ್ವಾಮಿಗಳು ಈತನ ಸಾನಿಧ್ಯಕ್ಕೆ ಬಂದಾಗ ಆ ಸ್ವಾಮಿಗಳಿಗೆ ಪ್ರೇರಣೆಯಾಗಿ ಮುಂದಿನ ಶಿಲಾ ಮಂಟಪ ನಿರ್ಮಾಣ ವಾಯಿತು. ಇದು ಪೂರ್ವಜರಿಂದ ತಿಳದ ಮಾತು. ಶಿಲಾ ಶೈಲಿ ಕೆತ್ತನೆ ಸ್ವರೂಪ ವಿಜಯನಗರ ಸಾಮ್ರಾಜ್ಯ ಅರಸರ ಕಾಲದ್ದೆಂದು ತೋರುತ್ತದೆ. ಗುಡಿಯ ಪೂರ್ವಭಾಗಕ್ಕೆ ಸೂರ್ಯಕಿಂಡಿ ಇದ್ದು, ಸೂರ್ಯೋದಯವಾದ ನಂತರ ಸೂರ್ಯ ಕಿರಣಗಳು ಪಶ್ಚಿಮದ ಕಡೆಗೆ ಹಿಂದಿನ ಕಾಲದಲ್ಲಿ ಕಟ್ಟಿಗೆಯಿಂದ ಕೆತ್ತಲ್ಪಟ್ಟ ಚಿತ್ರಗಳಿಂದ ನಿರ್ಮಿಸಲ್ಪಟ್ಟಿದೆ. ೩೨ ಕಂಬದ ಚಂದ್ರ ಚಾವಡಿಯಿತ್ತು. ಆದರೆ ಈ ಜಾಗದಲ್ಲಿ ನೂತನವಾಗಿ ದ್ವಾರ ಮಂಟಪ ನಿರ್ಮಾಣ ಮಾಡಲ್ಪಟ್ಟಿದೆ.

೩.೬. ಶ್ರೀ ವೀರಭದ್ರ ದೇವಸ್ಥಾನದ ಅಭಿವೃದ್ಧಿ ಹಂತ :

ದೇವಸ್ಥಾನದ ಗರ್ಭಗುಡಿಯ ಮೇಲ್ಭಾಗದಲ್ಲಿ ಹರವಾದ ಎತ್ತರವಾದ ಅನೇಕ ವೈವಿಧ್ಯಮಯ ಚಿತ್ರಗಳನ್ನು ಗಾರೆಯಿಂದ ಮಾಡಲ್ಪಟ್ಟಿದ್ದಾರೆ. ಇಟ್ಟಿಗೆಯಿಂದ ಕಟ್ಟಲ್ಪಟ್ಟ ಶಿಖರವು ಎತ್ತರವಾಗಿಯೂ, ಸುಂದರವಾಗಿಯೂ ಗುಡಿಗೆ ಕಳಸವಿರುವಂತೆ ಈ ಶಿಖರದ ಮೇಲೆ ಕಳಸವಿಟ್ಟಿದ್ದರೆ, ಮುಂದೆ ಈಶ್ವರ, ನಂದಿ, ಭೃಂಗಿ, ಶಾರದ, ಲಕ್ಷ್ಮಿ, ವೀರಭದ್ರ, ಷಣ್ಮುಖ ವಿವಿಧ ಭಂಗಿಯ ಚಿತ್ರಗಳು ಇವೆ. ಕಲ್ಲಿನಲ್ಲಿ ಸರ್ಪ, ಆನೆ, ಕುದುರೆ, ಸಿಂಹ,ಹುಲಿ ಹೀಗೆ ನಾನಾ ಚಿತ್ರಗಳನ್ನು ಕೆತ್ತಿರುತ್ತಾರೆ. ಒಳಗಡೆ ಪೂರ್ವದ ಕಡೆಗೆ ಈಶ್ವರ ಬಸವೇಶ್ವರ, ವಿಘ್ನೇಶ್ವರ, ರಾಮೇಶ್ವರ, ಕಾಶಿ ವಿಶ್ವನಾಥ ಮೂರ್ತಿಗಳನ್ನು ಸ್ಥಾಪಿಲ್ಪಟ್ಟಿದ್ದಾರೆ. ಗರ್ಭಗುಡಿಯ ಎದುರಿಗೆ ಕಬ್ಬಿಣದ ದೀಪಸ್ತಂಭವಿದೆ. ಎತ್ತರ ಬಾಗಿಲುಳ್ಳ ದೇವಸ್ಥಾನದ ಮುಂಭಾಗದಲ್ಲಿ ಹದಿನಾರು ಕಂಬದ ಹೊರಾಂಗಣವಿದೆ. ಪಶ್ಚಿಮದ ಕಡೆಗೆ ಚಂದ್ರಕಿಂಡಿ ಎದುರಿಗೆ ಸುಮಾರು ಇಪ್ಪತ್ತು ಅಡಿ ಎತ್ತರದ ೧೫ - ೨೦ ಇಂಚು ಸುತ್ತಳತೆಯ ಶಿಲಾ ದೀಪಸ್ತಂಭವಿದೆ. ವಾಯ್ಯುವಿನ ದಿಕ್ಕಿನ ಕಡೆಗೆ ಪುರಾತನ ಬಿಲ್ವಪತ್ರಿ ಗಿಡವಿದ್ದು, ಅಲ್ಲಿ ಬಸವೇಶ್ವರನ ಮೂರ್ತಿಗಳಿವೆ. ಇದಕ್ಕೆ ಪತ್ರಿ ಬಸವೇಶ್ವರ ಕಟ್ಟೆ ಎಂದು ಕರೆಯುತ್ತಾರೆ. ಈ ಪತ್ರಿ ಗಿಡ, ಕಾಣಿ ಪತ್ರಿ ಎಂದು ಸಹ ಕರೆಯಲ್ಪಡುತ್ತದೆ. ಮರ ಹಳೆಯದಾದರೂ ಪ್ರೌಢವಾಗಿದೆ. ಪತ್ರಿ ಮೂರು, ಐದು, ಒಂಭತ್ತು ದಳದಿಂದ ಕೂಡಿದೆ. ಇಲ್ಲಿ ಪರಮ ಪೂಜ್ಯ ಸಿದ್ಧೇಶ್ವರ ಶಿವಾಚಾರ್ಯರ ಅನುಷ್ಠಾನ ಮಾಡಲು ನಿರ್ಧರಿಸಿದ ತಾಣವಿದು. ಈ ಪತ್ರಿ ಬಸವೇಶ್ವರ ಕಟ್ಟಿಯ ಪೂರ್ವಕ್ಕೆ ಒಂದು ಮಜ್ಜನ ಬಾವಿ ಯಿದ್ದು, ಇದಕ್ಕೆ ಹೊಂದಿಕೊಂಡಂತೆ ಒಂದು ಕಲ್ಯಾಣ ಮಂಟಪವು ಇದೆ. ಭಕ್ತರ ಭಕ್ತಿಯ ಕಾಣಿಕೆಯ ದೇಣಿಗೆಯಿಂದ ನಿರ್ಮಿಸಲ್ಪಟ್ಟ ದ್ವಾರ ಮಂಟಪ. ಈ ಕಲ್ಯಾಣ ಮಂಟಪ ಇನ್ನು ಊರ್ಜಿತ ಸ್ಥಿತಿಯಲ್ಲಿ

ಮುಂದುವರಿಯಲ್ಪಡುತ್ತದೆ. ಹಾಗೂ ಸುತ್ತ ಆರು ಕೊಲೆ (ಕೊಠಡಿ)ಗಳಿದ್ದು, ದಕ್ಷಿಣ ಭಾಗಕ್ಕೆ ಇನ್ನು ಭಕ್ತರು ಸಲ್ಲಿಸಿದ್ದ ದೇಣಿಗೆಯಿಂದ ಕೊಠಡಿ ಹಾಗೂ ಅಡುಗೆ ಶಾಲೆ ನಿರ್ಮಾಣದ ಕಾರ್ಯ ಮುಂದುವರಿಯುತ್ತದೆ. ದಕ್ಷಿಣದ ಕಡೆಗೆ ಭರ್ಮಪ್ಪನ ಗುಡಿ ಗೋಡೆಯಲ್ಲಿದೆ. ಸುತ್ತಲು ವಿಶಾಲವಾದ ಬಯಲಂಗಳವಿದೆ.

೩.೭. ಆಸ್ತಿ ಮತ್ತು ಆಡಳಿತ :

ಹದಿನಾರು ಎಕರೆ ಕುಷ್ಕಿ ಜಮೀನು ಪೂಜೆ ಮಾಡುವ ಪೂಜಾರಿ ಮನೆತನದವರಿಗೆ ಇದೆ. ಒಟ್ಟು ಮೂರು ಭಾಗದವರು ಇದ್ದು, ಮೂವತ್ತು ಮನೆಗಳಾಗಿವೆ. ಎರಡು ಎಕರೆ ತರಿ ಜಮೀನು ಪೂಜಾರಿಗಳಿಗಾಗಿ ಇದೆ. ಇತರೆ ಯಾವ ಆದಾಯವು ಇಲ್ಲ. ಇದು ೧೯೭೫-೭೬ ತುರ್ತು ಪರಿಸ್ಥಿತಿಯಲ್ಲಿ ಭೂಮಿ ಉಳುವೆ ಮಾಡುವವರ ಹೆಸರಿನಲ್ಲಿ ೧೯೮೧ರಲ್ಲಿ ನೋಂದಣಿಯಾಗಿದೆ.

ಮೂಲ ಗುಡಿ ಸ್ಥಾಪನೆಯಾದಾಗಿನಿಂದ ಗುರುಪಂಚಮರು ದೈವದವರು ಸೇರಿ ಕಾರ್ಯಕ್ರಮಗಳನ್ನು ಮಾಡುತ್ತಿದ್ದಾರೆ. ಗ್ರಾಮದ ಗೌಡ ಶಾನುಭೋಗ, ಬಣಕಾರ ಎಲ್ಲರೂ ಸೇರಿ ಆಚರಿಸುತ್ತಿದ್ದರು. ತರುವಾಯ ದೇವಸ್ಥಾನ ಸುಧಾರಿಸಿದಂತೆ ಇಲ್ಲಿನ ಹಳೆಯ ರೀತಿಯಲ್ಲಿದ್ದ ಶಿಲೆಗಳನ್ನು ಕೆತ್ತಿಸಿ, ಸ್ವಚ್ಛ ಗೊಳಿಸಿ, ಸುಣ್ಣ ಬಣ್ಣ ಬಳಿಸಿ ಮೆರಗು ಬರುವಂತೆ ಮಾಡುಸುತ್ತಾ ಭಕ್ತರು ಬಂದುಹೋಗುವ ಆಚರಣೆ ಜಾಸ್ತಿಯಾಗಿ ೧೯೮೨ರಿಂದ ಬೆಳಕಿಗೆ ಬಂದಿತು. ತರುವಾಯ ಕೂಡ್ಲಿಗಿಯ ಪಂಪಣ್ಣ, ಪಾಪಯ್ಯ, ಡಾ।ವೀರಯ್ಯ, ಗೌಡ್ರು, ಗ್ರಾಮದ ಗ್ರಾಮಸ್ಥರು ಸೇರಿ ೩೦ ದಿನ ರುದ್ರಾಭಿಷೇಕ ನಡೆಯಲು ಭಕ್ತರನ್ನು ಹುಡುಕಿ ಮುಂದುವರಿಸಿದರು. ಇದೇ ರೀತಿ ಪ್ರತಿ ವರ್ಷವು ಮುಂದುವರೆದ ಪೂಜೆಯು ಬೆಳೆಯುತ್ತ ೬೦೦ ನೂರು ಭಕ್ತರ ವಂತಿಗೆಯನ್ನು ಪಡೆಯುತ್ತಾ ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿಗೊಳ್ಳುತ್ತಲಿದೆ.

ಅಲ್ಲದೆ ಸ್ವಾಮಿಯ ಪಟಾಕ್ಷಿ ಹರಾಜು ಮಾಡಿ ಭಕ್ತರಿಂದ ಬಂದ ಹಣದಿಂದ ಜೀರ್ಣೋದ್ಧಾರ ಕಾರ್ಯಕ್ಕೆ ಉಪಯೋಗಿಸಲಾಗುವುದು. ಇದು ಯಾವ ಸರ್ಕಾರದ ಅಧೀನದಲ್ಲಿಲ್ಲ. ಇದೆಲ್ಲಾ ಗ್ರಾಮದ ಕಮಿಟಿ ವತಿಯಿಂದ ಮುಂದುವರೆದುಕೊಂಡು ಗ್ರಾಮಸ್ಥರ ಸಕಲ ಸದ್ಭಕ್ತರ ಸಮಕ್ಷಮ ವಿಚಾರ ವಿನಿಮಯ ನಿಬಂಧನೆ ನಿಯಮ ಪಾಲಿಸುತ್ತಾ ನಡೆಯುತ್ತದೆ.

೩.೮. ವಾಸ್ತುಶಿಲ್ಪ :

ಶ್ರೀ ವೀರಭದ್ರೇಶ್ವರ ದೇವಸ್ಥಾನಗಳು ಸಂಪೂರ್ಣವಾಗಿ ಕಲ್ಲಿನಿಂದ ನಿರ್ಮಾಣವಾಗಿದೆ. ಗಚ್ಚುಗಾರೆ ಉಪಯೋಗಿಸಿದ್ದಾರೆ. ಗಾರೆ ತಿರುವಲು ಉಪಯೋಗಿಸುವ ಕಲ್ಲಿನ ಗಾಲಿ. ದೇವಸ್ಥಾನದ ಆವರಣದಲ್ಲಿವೆ. ಗುಡಿ ಗೋಪುರವನ್ನು ಆದಿಕಾಲದಲ್ಲೇ ನಿರ್ಮಿಸಲಾಗಿದ್ದು, ಇಂದಿಗೂ ಅಚ್ಚಳಿಯದೇ ಉಳಿದಿದೆ. ಶ್ರೀ ವೀರಭದ್ರೇಶ್ವರ ಮೂರ್ತಿಯು ಶಿಲಾಮೂರ್ತಿ ಇದ್ದು, ಸ್ವಚ್ಛವಾದ ಸುಂದರವಾದ ಕೆತ್ತನೆಯಿಂದ ಕೆತ್ತಲ್ಪಟ್ಟಿದೆ. ಕಿರೀಟ, ಹಣೆಗಣ್ಣು, ರುಂಡ ಮೂಲ, ಈಟಿ ಬಿಲ್ಲು ಬಾಣ, ಖಡ್ಗ,ದಕ್ಷಬ್ರಹ್ಮನ ಕುರಿದಲೆ, ಪ್ರಸುತಾದೇವಿ, ಕಲ್ಲಿನ ಪ್ರಭಾವಳಿ ಭದ್ರವಾದ ಪೀಠ ಇದೆ. ಸುಂದರವಾದ ಶ್ರೀ ವೀರಭದ್ರೇಶ್ವರನ ಮೂರ್ತಿ ಇದೆ.

ಶ್ರೀ ವೀರಭದ್ರ ದೇವಸ್ಥಾನದ ಗುಡಿ ಬಹಳ ವಿಶಾಲವಾಗಿದೆ. ಪ್ರದಕ್ಷಣೆ ಹಾಕಲು ಅನುಕೂಲವಾಗಲೆಂದು ಬಹಳ ಸ್ಥಳವನ್ನು ಅವಕಾಶ ಮಾಡಿಕೊಡಲಾಗಿದೆ. ಸುತ್ತಲು ಕಲ್ಲು ಬಂಡೆ ಹಾಕಲಾಗಿದೆ. ಸುತ್ತಲೂ ಕಲ್ಲಿನ ಕಾಂಪೌಂಡ್ ಕಟ್ಟಲಾಗಿದೆ. ದೇವಾಲಯದ ಒಳಗೆ ಅನೇಕ ಚಿತ್ತಾರದ ಕಲ್ಲಿನಲ್ಲಿ ಕೆತ್ತಿದ ಕಲೆಗಳನ್ನು ಕಾಣಬಹುದು. ದೇವಸ್ಥಾನದ ಪಶ್ಚಿಮದ ಕಡೆಗೆ ದ್ವಾರ ಮಂಟಪ ಕಟ್ಟಿಸಲಾಗಿದ್ದು, ಇಲ್ಲಿ ಪ್ರತಿ ಅಮವಾಸೆಗೂ ಊಟದ ವ್ಯವಸ್ಥೆ ನಡೆಯುತ್ತಿದ್ದು, ಇಲ್ಲಿ ಬಂದ ಭಕ್ತರು ಊಟ ಮಾಡಬಹುದಾಗಿದೆ.

೩.೯: ಪವಾಡಗಳ ಸ್ವರೂಪ :

ಶ್ರೀ ವೀರಭದ್ರೇಶ್ವರ ದೇವರ ರತೋತ್ಸವದ ಹಿಂದಿನ ದಿನ ಬೆಳ್ಳಿಯಿಂದ ಮಾಡಿಸಿದ ಶ್ರೀ ವೀರಭದ್ರೇಶ್ವರ ಸ್ವಾಮಿಯ ಹಲಗೆಗಳನ್ನು ಪೂಜಿಸುತ್ತಾರೆ. ಭಕ್ತರು ರಕ್ತ ಭೂತಾಳ, ಹಾಲು ಭೂತಾಳ ಹಾಗೂ ಇತರೆ ಮರಗಳ ಹಲಗೆಗಳ ಮೇಲೆ ವೀರಭದ್ರಸ್ವಾಮಿಯನ್ನು ಮಾಡಿಸಿ ಅವುಗಳನ್ನು ಪೂಜಿಸಿ ಮನೆಯಲ್ಲಿ ಇಟ್ಟು ಕೊಳ್ಳುತ್ತಾರೆ. ಬಸವನ ಉತ್ಸವದ ದಿನ ಶ್ರೀ ಹಲಗೆಗಳನ್ನು ಬಕ್ತರು ಧರಿಸಿಕೊಳ್ಳುತ್ತಾರೆ. ಅಂದು ಕ್ರಿಯಾ ಪದ್ಧತಿಯಿಂದ ಗುರು ಕರೆತಂದು ಆಚಾರ ವಿಚಾರ ದೀಕ್ಷಾ ಪದ್ಧತಿಯಿಂದ ಪೂಜಿಸಿ ಪಾದೋದಕ ಪ್ರಸಾದ ತೆಗೆದುಕೊಳುತ್ತಾರೆ. ಮನೆಯ ಹೆಂಗೆಳೆಯರು ಕಳಸ ಕನ್ನಡಿಗಳನಿಡಿದು ಅಂದು ಹೊರಡಿಸುತ್ತಾರೆ. ಪ್ರತಿಯೊಬ್ಬರು ಮನೆಯ ಹಲಗೆಗಳನ್ನು ಧರಿಸಿಕೊಂಡು ರೇವಣ ಸಿದ್ದೇಶ್ವರನಿದ್ದ ಮನೆಯಿಂದ ಶಸ್ತ್ರ ಖಡ್ಗಗಳನ್ನುಹೊರಡಿಸಿ ಗುರು ಸಮ್ಮುಖದಲ್ಲಿ ಶಸ್ತ್ರಧಾರಣೆ ಗೈಯುತ್ತಾರೆ. ಅಂದಿನ ದಿನವಿಡೀ ಆಕಾಶ ಭರಿತವಾದ ಶ್ರೀ ವಿರಭದ್ರೇಶ್ವರ ದೇವರ ಒಡಪು ಹೇಳುತ್ತಾ ಕುಣಿದು ಕುಪ್ಪಳಿಸುತ್ತಾ ೨ಳತೊಲೆಯ (ಒಂದು ಸೇರು) ದಪ್ಪವುಳ್ಳ ತಾಮ್ರದ ಶಸ್ತ್ರ ಧಾರಣೆ ಮಾಡುತ್ತಾರೆ. ಬಾಯಿ ಬೀಗ, ನಾಲಿಗೆ, ಕೈ, ಕೊರಳು, ಕಪೋಲ, ನಾಸಿಕಗಳಿಗೆ ಶಸ್ತ್ರ

ಹಾಕಿಕೊಳ್ಳುವುದುಂಟು. ನೂರು ಗಂಟಿನ ದಾರ, ಐದು ನೂರು ಗಂಟಿನ ದಾರವನ್ನು ಬಾಯಿಂದ ಎಳೆಯುವುದುಂಟು. ಈ ರೀತಿ ಎಳೆಯುವಾಗ ನೋಡಿದ ಜನರು ಇದೊಂದು ಪವಾಡವೆಂದು ಹೇಳುತ್ತಾರೆ. ಇದು ಅದ್ಬುತ ಪವಾಡವೇ ಸರಿ.

ವೀರಗಾಸೆ, ಒಡಪು, ನಂದಿ ಧ್ವಜ ಕುಣಿತ, ಸಮೇಳ ವಾದ್ಯದೊಂದಿಗೆ ಮೆರವಣಿಗೆ ನಡೆಸುತ್ತಾ ದೀಪಾರಾಧನಗೈದು ಅಗ್ನಿ ತುಳಿಯುತ್ತಿದ್ದರಂತೆ. ಆದರೆ ಈಗ ಇಲ್ಲಿ ಅಗ್ನಿಕುಂಡವಿಲ್ಲ. ಶ್ರೀ ವೀರಭದ್ರೇಶ್ವರ ಸ್ವಾಮಿಯ ಭಕ್ತರು ತಮ್ಮ ಕಾಣಿಕೆ ಹರಕೆ ಮುಡುಪು ಸಲ್ಲಿಸದಿದ್ದರೆ ಕಷ್ಟಕ್ಕೀಡಾಗುತ್ತಾರಂತೆ. ಅಂದುಕೊಂಡಂತೆ ಆವರವರ ಇಚ್ಛಾ ಪ್ರಕಾರ ಅರ್ಪಿಸದಿದ್ದಲ್ಲಿ ಕಷ್ಟ ಕಾರ್ಪಣ್ಯಗಳು ತಪ್ಪುವುದಿಲ್ಲವಂತೆ. ಬಂದು ಹರಕೆ ಮುಟ್ಟಿಸುವವರೆಗೂ ಈತನು ಕಷ್ಟಕ್ಕೀಡು ಮಾಡುವುದು, ಹರಕೆ ಮುಟ್ಟಿಸಿದಾಗ ಕಷ್ಟದಿಂದ ಮುಕ್ತನನ್ನಾಗಿ ಮಾಡಿ ಸಲಹುತ್ತಾನೆ. ಭಕ್ತರನ್ನು ಓರೆ ಹಚ್ಚಿ ನೋಡುವುದು, ಜಾಸ್ತಿ ಕಷ್ಟಕೊಟ್ಟು ಕಾಪಾಡುತ್ತಾನೆ. ಈತನ ಆಭರಣ ಧಾರಣೆ ಮಾಡಿದಾಗ ಉಗ್ರರೂಪವನ್ನು ಯಾರು ನೋಡುವಂತಿಲ್ಲ. ಗರ್ಭಿಣಿ ಹೆಂಗಸು ನೋಡಿದರೆ ಪಿಂಡ ಪತನವಾಗುವುದು. ಖಂಡಿತ ೧೯೮೫ರಲ್ಲಿ ಜವಳಿಯವರ ಮನೆತನದಲ್ಲಿ ಹಾಗಿದ್ದುಂಟು. ೨೦೦೩ರಲ್ಲಿ ಮಠದವರ ಮನೆಯಲ್ಲಿ ಹಾಗಿದ್ದುಂಟು. ಇದು ಕಣ್ಣಾರೆ ಕಂಡ ದೃಶ್ಯ ಎಂದು ಪೂಜಾರಿ ಹೇಳುತ್ತಾರೆ.

ಈತನ ಗುಡಿಯ ಮೇಲೆ ವಾಹನವೇರಿ ನಡೆಯುವಂತಿಲ್ಲ. ಹನಸಿ ಬಂಧುಗಳು ಪೂಜೆ ಮುಗಿಸಿ ಟ್ಯಾಕ್ಟರ್ ಹತ್ತಿ ಕುಳಿತ್ತಿದ್ದಾಗ ಗುರುಗಳು ಬಂದು ನೀವು ಗುಡಿಯ ಮುಂದೆ ಹತ್ತಬಾರದೆಂದು ಹೇಳಿ, ಕೆಳಗಿಳಿದು ತಪ್ಪೊಪ್ಪಿಕೊಳ್ಳಿ, ಎಂದು ಅಜ್ಞಾಪಿಸಿದಾಗ ಭಕ್ತರು ಗುಡಿಯೊಳಕ್ಕೆ ಧಾವಿಸಿ ಬೇಡಿಕೊಳ್ಳುವ ಸಮಯದಲ್ಲಿ ಟ್ಯಾಕ್ಟರ್ ಮುಂದೆ ನಡೆಯಲು ಮಂಟಪದ ಗೋಡೆ ಕುಸಿದು ಟ್ಯಾಕ್ಟರ್ ತುಂಬ ಕಲ್ಲು ತುಂಬಿಕೊಂಡದ್ದು ಉಂಟು. ಈ ಘಡನೆ ನಡೆದದ್ದು ೧೯೮೪ರ ಶ್ರವಣ ಮಾಸದಲ್ಲಿ. ಇದೇ ರೀತಿ ೧೯೮೭ರಲ್ಲಿ ಕುಪ್ಪನಕೇರಿ ಗೌಡರ ಮನೆತನದವರು ಮರಿ ಪರಿಶೆ ಮುಗಿಸಿಕೊಂಡು ಗುಡಿ ಮುಂದೆ ಏರಿ ಕುಳಿತು ಕೊಂಡು ಹೋದಾಗ ಕೂಡ್ಲೀಗಿ ಸಮೀಪ ಗಾಡಿ ಮುಗಚಿ ಬಿದ್ದಿತಂತೆ.

ರಥೋತ್ಸವದ ದಿನ ಯಾದವ ಜನಾಂಗದ ಜೋಗಿ ಹಳ್ಳಿ ಬಾಲಪ್ಪನೆಂಬ ರೈತನು ಅಂದು ಊರು ಬಿಟ್ಟು ವ್ಯಾಪಾರಕ್ಕೆಂದು ಹೋಗಿ ಬಂದವನೇ, ತೇರು ಮಣಿ ಎಳೆಯುವಾಗ ಕಾಲು ಸಿಕ್ಕು ಗಾಯವಾಗಿ ಪ್ರಾಣದಿಂದ ಪಾರಾಗಿದ್ದಾನೆ. ಆತ ಇಂದಿಗೂ ಜೀವಂತನಾಗಿದ್ದಾನೆ. ಇಂತಹ ಅನೇಕ ಪವಾಡಗಳು ಹಿಂದಿನಿಂದಲೂ, ಈಗಲೂ ನಡೆಯುತ್ತಲಿವೆ. ಮಳೆ ಬಾರದಿದ್ದ ಸಂದರ್ಭದಲ್ಲಿ ಶ್ರೀ ಸ್ವಾಮಿಯ ಮಜ್ಜನವನ್ನು ಮಾಡಿ ಉದಯಕ್ಕೆ ಪೂಜೆಗೈದು, ಶ್ರೀ ಸ್ವಾಮಿಯನ್ನು ಪ್ರಸಾದ ಕೇಳಲು, ಕೇಳಿದ ಪ್ರಸಾದ ಕೊಟ್ಟರೆ ಮಳೆ ಬಂದೇ ತಿರುತ್ತದೆ. ವಿದ್ಯಾರ್ಜನೆ, ಮದುವೆ, ಶುಭ ಕಾರ್ಯ, ವಾಹನ ಸೌಕರ್ಯಕ್ಕಾಗಿ, ಜಲ ಪ್ರಶ್ನೆ, ಸಂತಾನಕ್ಕಾಗಿ ಈ ರೀತಿ ಪೂಜೆಗೈದು ಕೇಳಿದ ಪ್ರಸಾದ ಕೊಟ್ಟರೆ ಈಗಲೂ ವಿಜಯಿಗಳಾಗಿ ಸಂತಾನಭಿವೃದ್ಧಿಯಾಗಿ, ಶ್ರೇಯಸ್ಸು ದೊರೆತು ಮಂಗಲ ಕಾರ್ಯಗಳೂ ನೆರವೇರುತ್ತವೆ. ಭಕ್ತರು ಪಾದುಕ ಖಡ್ಗ ರುಂಡಮಾಲೆ, ಪ್ರಭಾವಳಿ, ಗೊಂಡೆ, ಹಣದ ರೂಪದಲ್ಲಿ ಕಾಣಿಕೆ ಇಂದಿಗೂ ಸಲ್ಲಿಸುತ್ತಲೇ ಬರುತ್ತಿದ್ದಾರೆ.

ಶ್ರೀ ವೀರಭದ್ರೇಶ್ವರ ಸ್ವಾಮಿಯ ಪೂಜೆ ಮಾಡುವ ಅರ್ಚಕನು ಸರಿಯಾಗಿ ಪೂಜೆ ನಿರ್ವಹಿಸ ಲಿಲ್ಲವಂತೆ. ಕೆಲವು ದಿನ ಕಳೆದ ನಂತರ ತಮ್ಮ ನಿಜಭಕ್ತ ಕೂಡ್ಲಿಗಿಯ ಗೌಡರ ಕನಸಿನಲ್ಲಿ ಹೋಗಿ ನನಗೆ ಪೂಜೆ ಸರಿಯಾಗಿ ಸಲ್ಲಿಸುತ್ತಿಲ್ಲ. ಆದಕಾರಣ ನಾನು ಸಿದ್ದಯ್ಯನ ಗುಡ್ಡದಲ್ಲಿ ನೆಲೆಸಿರುವೆ ನೀನು ಅಲ್ಲಿಗೆ ಪೂಜಾ ಪ್ರಸಾದ ತೆಗೆದುಕೊಂಡು ಬಾ ಎಂದು ಹೇಳಿದರಂತೆ. ಇದನ್ನು ತಿಳಿದು ಅಚ್ಚರಿಗೊಂಡ ಗೌಡರು ಬೆಳಗಿನ ಜಾವ ಎದ್ದ ಕೂಡಲೇ ದೈನಂದಿನ ಪೂಜೆ ಮುಗಿಸಿ ಪೂಜಾ ಸಾಮಾಗ್ರಿ ಪ್ರಸಾದ ತೆಗೆದುಕೊಂಡು ಸಿದ್ದಯ್ಯನ ಗುಡ್ಡಕ್ಕೆ ಹೋದನಂತೆ. ನಾನು ಇಲ್ಲಿರುವೆ ಪೂಜೆ ಸಲ್ಲಿಸು ಪ್ರಸಾದ ಎಡೆಮಾಡು ಆದರಂತೆ. ಗೌಡರು ಪೂಜೆ ಮಾಡಿ ನೈವೇದ್ಯ ಮಾಡಿದ ಪ್ರಸಾದವನ್ನು ಸ್ವೀಕರಿಸಿದರಂತೆ ಶ್ರೀ ವೀರಭದ್ರೇಶ್ವರ ಸ್ವಾಮಿಯ ಆಶೀರ್ವಾದದಂತೆ ಇದನ್ನರಿತ ಗೌಡರು ಮರಳಿ ಮನೆಗೆ ಬಂದು ಹಸಿ ಹುಣಿಸೆ ಬರಲಿನಿಂದ ತಳಿಸಿದಾಗ ಪೂಜಾರಿ ನಿಜ ಸಂಗತಿಯನ್ನು ಒಪ್ಪಿಕೊಂಡನಂತೆ. ಇನ್ನು ತಪ್ಪು ಮಾಡುವುದಿಲ್ಲವೆಂದು ಒಪ್ಪಿಕೊಂಡಾಗ ಗೌಡರು ಸಿದ್ದೇಶ್ವರನ ಗುಡ್ಡಕ್ಕೆ ಹೋಗಿ ಶ್ರೀ ವೀರಭದ್ರೇಶ್ವರ ದೇವರನ್ನು ಸ್ವಾಮಿ ತಾವು ತಮ್ಮ ನಿಜಾಲಯಕ್ಕೆ ಬಂದು ನನಗೆ ದರ್ಶನ ಕೊಡಬೇಕೆಂದು ಬೇಡಿಕೊಂಡಾಗ ಅಲ್ಲಿಗೆ ಬಾ ಎಂಬ ವಾಣಿ ಕೇಳಿ ಬಂತಂತೆ. ಆದರಂತೆ ಮಾರನೆಯ ದಿನ ಪೂಜಾ ಸಮಯಕ್ಕೆ ಗೌಡರು ಬಂದಾಗ ಜಾಗಟೆ ಗಂಟೆನಾದ ತಾವಾಗಿಯೇ ಶಬ್ದವಾಗಿ ಇಲ್ಲಿದ್ದೇನೆ ಎಂದು ಸೂಚನೆಯಾದ ಪವಾಡವಾಯಿತಂತೆ. ಶ್ರೀ ವೀರಭದ್ರೇಶ್ವರ ಸ್ವಾಮಿಯ ಪೂಜಾರಿಯೂ ಸಂತಾನ ಹೀನನಾಗಿದ್ದು ಅನೇಕ ದುಶ್ಚಟಗಳಿಗೆ ಬಲಿಯಾಗಿದ್ದು, ಕೆಟ್ಟ ಜನರ ಸಹವಾಸಿಯಾಗಿದ್ದು ಸಕಾಲಕ್ಕೆ ಪೂಜೆ ಮಾಡದೆ, ನಾ ಕೇಳಿದ ವರ ಕೊಡಲೊಲ್ಲ ಆದಕ್ಕಾಗಿ ನಾನು ನಿನ್ನನ್ನು ಪೂಜಿಸುವುದಿಲ್ಲ ಎಂದು ಅವಾಚ್ಯ ಶಬ್ದಗಳನ್ನಾಡಿ, ಹೂ ಧರಿಸಿದನಂತೆ. ಕಲ್ಲಿನಿಂದ ಕುಟ್ಟಿ ಬೈದ ಪೂಜಾರಿಯ ಮನೆ ಮಠ ನಿಷೇಶವಾಗಿದೆ.

ದೇವಸ್ಥಾನದ ಆವರಣದಲ್ಲಿರುವ ಮಜ್ಜನ ಭಾವಿ ಕಟ್ಟೆಯ ಮೇಲ್ಭಾಗದಲ್ಲಿ ಆಟವಾಡು ತ್ತಿರುವ ಮಗುವೊಂದು ಆಚಾನಕ್ಕಾಗಿ ಬಾವಿಯಲ್ಲಿ ಬಿದ್ದಾಗ ರಂಗ ಮಧ್ಯದಲ್ಲಿ ಶ್ರೀ ವೀರಭದ್ರೇಶ್ವರ ಸ್ವಾಮಿಯ ಕಾರ್ಯಕ್ರಮ ನಡೆಯುತ್ತಿದ್ದ ಸಂದರ್ಭ, ಆಗ ಹೊರಗಿನಿಂದ ಬಂದ ಅರ್ಥನಾದ ಧ್ವನಿಯನ್ನು ಆಲಿಸಿದ ಜನ ಬಂದು ನೋಡಲಾಗಿ ಮಗುವೊಂದು ಬಾವಿಯಲ್ಲಿ ಬಿದ್ದಿದ್ದು ಎತ್ತಲಾಗಿ ಒಂದು ಕೂದಲು ಎಳೆಯಷ್ಟು ನೋವಾಗದೆ ಮಗು ಸುರಕ್ಷಿತವಾದ ರೀತಿಯಲ್ಲಿತ್ತು.

ಪುರವಂತಿಕೆ ಸಂದರ್ಭದಲ್ಲಿ ಆವೇಶ ಭರಿತವಾದ, ನಂದಿ ಧ್ವಜ ಕುಣಿಸುವ ಸಂದರ್ಭದಲ್ಲಿ ನಂದಿ ಧ್ವಜದ ಗಳ ಮುರಿದು ತಲೆಯ ಮೇಲೆ ಪೆಟ್ಟಾಗಿ ತಲೆಒಡೆಯಿತೇನೋ ಎನ್ನುವ ಸಂದರ್ಭ ಕಂಡು ನೋಡಿದಾಗ ಅಲ್ಪವು ಗಾಯವಾಗದೆ ನೋವು ಸಹ ಇಲ್ಲದೆ ಗೆಲುವಿನಿಂದ ಕುಣಿದ ಸಂದರ್ಭ ನಡೆದಿದೆಯಂತೆ.

೩.೧೦. ಶ್ರೀ ವೀರಭದ್ರೇಶ್ವರಸ್ವಾಮಿಯ ಉಡುಗೆ-ತೊಡುಗೆಗಳು :

ಭಕ್ತರು ಶ್ರೀ ವೀರಭದ್ರೇಶ್ವರ ಸ್ವಾಮಿಗೆ ಅನೇಕ ಹರಕೆಗಳನ್ನು ಒಪ್ಪಿಸುತ್ತಾರೆ. ವೈಯಕ್ತಿಕವಾಗಿ ಕಷ್ಟ ಬಂದವರು, ಕಷ್ಟ ತೀರುವುದಕ್ಕಾಗಿ ದೈವಕ್ಕೆ ಹರಕೆ ಒಪ್ಪಿಸುತ್ತಾರೆ. ಹರಕೆಗಳನ್ನು ವಸ್ತುಗಳ ರೂಪದಲ್ಲಿಯೂ ಒಪ್ಪಿಸುತ್ತಾರೆ. ಜನರು ನಾನಾ ರೀತಿಯ ಹರಕೆ ಕಟ್ಟಿಕೊಂಡು ನಿಯತ್ತಿನಿಂದ ಹರಕೆ ತೀರಿಸುತ್ತಾರೆ. ಹರಕೆ ತೀರಿಸದಿದ್ದರೆ ಏನೆಲ್ಲಾ ಕಷ್ಟಪ್ರಾಪ್ತವಾಗುತ್ತದೆ ಎಂಬ ಭಯ ಜನರನ್ನು ಆವರಿಸಿದೆ. ಈ ರೀತಿ ಶ್ರೀ ವೀರಭದ್ರೇಶ್ವರಸ್ವಾಮಿಗೆ ಹರಕೆ ಹೊತ್ತವರು ವಸ್ತುಗಳ ರೂಪದಲ್ಲಿ ಆತನಿಗೆ ಬೆಳ್ಳಿ ಸಾಮಾನುಗಳನ್ನು ಒಪ್ಪಿಸಿದ್ದಾರೆ. ಆ ಸಾಮಾನುಗಳನ್ನು ವಿಶೇಷ ದಿನಗಳಲ್ಲಿ ಮಾತ್ರ ಹಾಕಿ ಪೂಜಿಸುತ್ತಾರೆ. ಮೊರಬದ ಶ್ರೀ ವೀರಭದ್ರೇಶ್ವರ ಸ್ವಾಮಿಗೆ ಅನೇಕ ಭಕ್ತರು ಬೆಳ್ಳಿ ಮತ್ತು ಬಂಗಾರದ ಸಾಮಾನುಗಳನ್ನು ಹರಕೆಯ ರೂಪದಲ್ಲಿ ಅರ್ಪಿಸಿದ್ದಾರೆ.

ಮೊರಬ ಗ್ರಾಮದ ಶ್ರೀ ವೀರಭದ್ರೇಶ್ವರನ ಉಡುಗೆ-ತೊಡುಗೆಗಳು ಈ ಕೆಳಗಿನಂತಿವೆ. ರೌದ್ರಾವತಾರ ಮೂರ್ತಿ, ಕಣ್ಣ ಅಡಿಗೆ, ಕಾಶಿ ಪೀತಾಂಬರಿ, ಈಟಿ, ಆಭರಣಗಳು. ನಿಲುವಂಗಿ, ಕಾಶಿ ಕೌಪಿನ ಪೇಟ, ರುಂಡ ಮಾಲೆ, ಈಟಿ , ಬಾಕು ಕನ್ನಗತ್ತಲಿ, ಕಿರಿಯಗ್ಗ, ಉರುಲಗ್ಗ, ಗಜದಾಂಡು, ಪಾಶಾಂಕುಶ, ಚಪ್ಪುಗೊಡಲಿ, ಸಿಂಗಾಡಿ, ಮೇಕು, ಜಂಗು, ಕಿರೀಟ , ವಜ್ರಾಯುಧ, ಕಮಂಡಲು, ರುದ್ರಾಕ್ಷಿ, ಪಾವಕ ಜ್ವಾಲೆ, ನೂಪುರ ಗೆಜ್ಜೆ, ಬಿಲ್ಲುಬಾಣ, ಈಟಿ, ರಣಚೂರಿ ಇನ್ನು ನಾನಾ ತರಹದ ಆಯುಧಗಳನ್ನೊಳಗೊಂಡ ನಾಗಾಭರಣ.

ಈ ಮೇಲೆ ಕಾಣಿಸಿದ ಸಾಮಾನುಗಳನ್ನು ಭಕ್ತರು ಕೆಲವನ್ನು ಕೊಡಿಸಿರುತ್ತಾರೆ. ಹರಕೆಗಳನ್ನು ಹೊತ್ತ ಭಕ್ತರು ಈಗಲೂ ಸ್ವಾಮಿಗೆ ಸಾಮಾನುಗಳನ್ನು ಕೊಡಿಸುತ್ತಿದ್ದರೆ, ಸ್ವಾಮಿಗೆ ಆಭರಣ ಪೂಜೆ ಸಮಯದಲ್ಲಿ ಮಾತ್ರ ಮೈಮೇಲೆ ಹಾಕುತ್ತಾರೆ.

ಅಧ್ಯಾಯ - ನಾಲ್ಕು

ಆಚರಣೆಗಳು

ಅಧ್ಯಾಯ - ೪

ಆಚರಣೆಗಳು

''ತಲೆ ತಲಾಂತರದಿಂದ ಸಮುದಾಯದ ಅಂಗೀಕಾರವನ್ನು ಪಡೆದು ಬಳಕೆಯಲ್ಲಿರುವ ಮಾಟ ಮತ್ತು ಧಾರ್ಮಿಕ ವಿಧಿಗಳೇ ಜನಪದ ಆಚರಣೆಗಳು''

ಒಬ್ಬ ವ್ಯಕ್ತಿ ಇಷ್ಟ ಪಟ್ಟ ಒಂದು ಆಚರಣೆಯನ್ನು ಸೃಷ್ಟಿಮಾಡಲು ಸಾಧ್ಯವಿಲ್ಲ. ಒಂದು ಜನಾಂಗದ ಜೀವನ ವಿಧಾನದ ಬೇಡಿಕೆಯ ಅಂಗವಾಗಿ ಆಚರಣೆ ರೂಪ ಪಡೆಯುತ್ತದೆ. ಪ್ರಕೃತಿಯಲ್ಲಿ ಮತ್ತು ಮಾನವನ ದೇಹದಲ್ಲಿ ಉಂಟಾಗುವ ಬದಲಾವಣೆಗಳನ್ನು ಆಚರಣೆಗಳ ಮೂಲಕ ಗುರುತಿಸಲಾಗುತ್ತದೆ. ಮಾನವನ ಬದುಕಿಗೆ ಮತ್ತು ಅವನ ಭಾವ ಪ್ರಪಂಚಕ್ಕೆ ಸಂಬಂಧಿಸಿದ ಆಚರಣೆಗಳು ನೈಸರ್ಗಿಕ ಕ್ರಿಯೆಗಳಿಗೆ ಸಂಬಂಧಿಸಿದ ಕ್ರಿಯೆಗಳು, ಆರ್ಥಿಕ ಚಟುವಟಿಕೆಗಳಿಗೆ ಸಂಬಂಧಿಸಿದ ಹಾಗೂ ಸಾಮಾಜಿಕ ರಚನೆಗಳಿಗೆ ಸಂಬಂಧಿಸಿದ ಆಚರಣೆಗಳೆಂದು ಇವನ್ನು ಸ್ಥೂಲವಾಗಿ ವಿಂಗಡಿಸಬಹುದು. ಮನುಷ್ಯನ ಮನಸ್ಸಿನ ಪರಿವರ್ತನೆಯ ಬಗೆ ಬಗೆಯ ವಿನ್ಯಾಸಗಳನ್ನು ಆಚರಣೆಗಳು ವ್ಯಕ್ತಗೊಳಿಸುತ್ತವೆ.

ದೈವಸಂಬಂಧದ ಆಚರಣೆಗಳು ಜನಪದ ಬದುಕಿನ ಹೆಚ್ಚು ಭಾಗವನ್ನು ಆಕ್ರಮಿಸಿವೆ. ದಿನಕ್ಕೊಂದು ಸಾರಿ, ವಾರಕ್ಕೊಂದು ಸಾರಿ, ತಿಂಗಳಿಗೊಂದು ಸಾರಿ, ಒಂದು ದೇವರ ಆರಾಧನೆ ಆಗುತ್ತದೆ. ಸಕಲ ಪೂರ್ವಸಿದ್ಧತೆಯೊಂದಿಗೆ ಆಗುವ ಹಬ್ಬಗಳು ಅನೇಕ ಆಚರಣೆಗಳ ಮೊತ್ತವಾಗಿದೆ.

ಒಂದು ವಾರ್ಷಿಕದಲ್ಲಿ ಆಚರಿಸುವ ಆಚರಣೆಗಳನ್ನು 'ವಾರ್ಷಿಕಾವರ್ತನ' ಆಚರಣೆಗಳೆಂದೂ, ಮನುಷ್ಯ ಹುಟ್ಟಿದಾಗಿನಿಂದ ಸಾಯುವವರೆಗೂ ಅವನಿಗೆ ಸಂಬಂಧಿಸಿದಂತೆ ಮಾಡುವ ಆಚರಣೆಗಳನ್ನು 'ಜೀವನಾವರ್ತನ' ಆಚರಣೆಗಳೆಂದೂ ಕರೆಯುತ್ತಾರೆ.

೪.೧. ಜೀವನಾವರ್ತನ ಆಚರಣೆಗಳು :

ಶ್ರೀ ವೀರಭದ್ರೇಶ್ವರನ ಆಶೀರ್ವಾದ ಹೊಂದಿ ಸಂತಾನರಾದ ಅಥವಾ ಮನೆ ದೇವರಾದವರು ಶ್ರೀ ವೀರಭದ್ರ ದೇವಸ್ಥಾನಕ್ಕೆ ಮದುವೆಯ ಸಂದರ್ಭದಲ್ಲಿ ಉಲುಪಿ ಕೊಡುತ್ತಾರೆ. ಹೊಸ ಮರ, ಅಕ್ಕಿ, ಬೇಳೆ, ಬೆಲ್ಲ, ಹಿಟ್ಟು, ಕಾಯಿ, ಕೊಬ್ಬರಿ ಬಟ್ಟಲು, ಉತ್ತತ್ತಿ, ಅಡಿಕೆ, ಎಲೆ, ದಕ್ಷಿಣೆ ತೆಗೆದುಕೊಂಡು ವಾದ್ಯದವರೊಂದಿಗೆ ಮುತ್ತೈದೆಯರು, ಕಳಸ ಕನ್ನಡಿಯನ್ನಿಡಿದು ಪ್ರಥಮವಾಗಿ ಶ್ರೀ ವೀರಭದ್ರ ದೇವಸ್ಥಾನಕ್ಕೆ ಹೋಗುತ್ತಾರೆ. ಕಾಯಿ-ಕರ್ಪೂರ ಮಾಡಿಸಿ, ಮಂಗಳಾರತಿ ತೆಗೆದುಕೊಂಡು ತೀರ್ಥ ಪ್ರಸಾದ ತೆಗೆದುಕೊಂಡು ಉದ್ಧರಿಸೆಂದು ಧೀರ್ಘ ದಂಡ ಪ್ರಣಾಮವನ್ನು ಸಲ್ಲಿಸುತ್ತಾ ಮನೆಗೆ ಹಿಂದಿರುಗುತ್ತಾರೆ. ಯಾವುದೇ ಮನೆಯಲ್ಲಿ ಮಂಗಳ ಕಾರ್ಯ ನಡೆದರೂ ಉಲುಪಿ ಕೊಟ್ಟು (ಶಾಜ) ಹರಕೆ ಮುಟ್ಟಿಸಿ ಆಶೀರ್ವಾದ ಪಡೆದು ಮನೆಗೆ ಬರುವ ಪದ್ಧತಿ ಇದೆ.

ಜನನ ಸಂದರ್ಭ :

ಯಾವುದೇ ಮನೆಯಲ್ಲಿ ಮಗು ಜನನವಾದ ತಿಂಗಳು ತುಂಬುವುದರೊಳಗಾಗಿ ಇದೇ ರೀತಿಯಲ್ಲಿ ಹರಕೆಯನ್ನು ತೀರಿಸುತ್ತಾರೆ. ಉಲುಪಿ ಸಮೇತ ಮುತ್ತೈದೆಯರೊಡಗೂಡಿ ತೆಗೆದುಕೊಂಡು ಹೋಗಿ ಮಗುವನ್ನು ಅಡ್ಡಗೆಡವಿ, ದೇವಸ್ಥಾನದ ಭರ್ಮಪ್ಪನಿಗೆ ಕಾಯಿ ಕರ್ಪೂರ ಮಾಡಿಸಿ, ಮಂಡಕ್ಕಿ ಹಂಚಿ ಬರುವ ಪದ್ಧತಿ ಇದೆ.

ಮದುವೆಯ ಸಂದರ್ಭದಲ್ಲಿ :

ಮದುವೆಯ ಸಂದರ್ಭದಲ್ಲಿ ಬೀಗರು ಬಂದು ಬೀಡು ಬಿಡುವುದೇ ಶ್ರೀ ವೀರಭದ್ರ ದೇವಸ್ಥಾನದ ಆವರಣದಲ್ಲಿ. ಅವರಿಗೆ ಮೇಲೋಪಚಾರವೆಂದು, ನೀರು ಕನ್ನಡಿ ಕೊಡುವುದು, ಇಳಿದುಕೊಳ್ಳಲು ತಳ ತೋರಿಸುವುದು ಇಲ್ಲಿಯೇ. ನಂತರ ಮನೆಗೆ ಬಂದು ಸಿಹಿ-ಖಾರ, ತಿನಿಸುಗಳನ್ನು ಕಾಫಿ-ಟೀ ಪೇಯಗಳನ್ನು ತೆಗೆದುಕೊಂಡು ಉಪಚಾರ ಮಾಡಿಸಿ, ಮುಂಭಾಗದಲ್ಲಿ ಎದುರುಗೊಳ್ಳಲು ಮುಹೂರ್ತ ಮಾಡಿಸಿ, ಕಳಸ ಕನ್ನಡಿ ಇಡಿಸಿ ಉಪಚಾರದ ಮಾತುಗಳನ್ನು(ವ್ಯಂಗ್ಯವಾಗಿ) ಆಡುತ್ತಾರೆ. ತಾವು ಯಾರು?, ಎಲ್ಲಿಂದ ಬಂದಿರಿ?, ತಾವು ಕುಶಲರಾಗಿದ್ದೀರಾ? ಹ್ಯಾಂಗದೀರಿ, ಹೊಳ್ಳಿ ಎಲ್ಲಿ ಹೊಕ್ಕೀರಿ?, ಕನ್ನಡಿ ನೋಡಿಕೊಳ್ಳಿ, ಸಿಗರೇಟು ಹಚ್ಚಿಕೊಳ್ಳಿ, ಭಸ್ಮ ಧರಿಸಿಕೊಳ್ಳಿ, ತೊಂಬಲ ತಕ್ಕೊಳ್ಳಿ, ಕಳಸ ಇಕ್ಕಿಸಿಕೊಳ್ಳಿ ಎನ್ನುವ ರೂಢಿಯ ಆಡು ಭಾಷೆಯಿಂದ ನಗೆಯಾಡಿಸಿ ಎದಿರುಗೊಂಡು ಮರಳಿ ಶ್ರೀ ವೀರಭದ್ರನ ಸನ್ನಿಧಾನಕ್ಕೆ ಹೋಗಿ ದರ್ಶನ ಪಡೆದು ಮನೆಗೆ ಕರೆತರುತ್ತಾರೆ.

ಮದುವೆಯ ದಿನ ಉದಯಕ್ಕೆ ಸೋದರ ಮಾವನಾದವನು ಹಂದರ ಹಾಲು ಗಂಬ ತಂದು, ಇಲ್ಲಿರಬೇಕು. ಇದಕ್ಕೆ ಉಲುಪಿಕೊಟ್ಟು ಪೂಜೆ ಮಾಡಿಸಿ, ಆತನಿಗೆ ಬಳುವಳಿ ಕೊಟ್ಟು, ವಾದ್ಯ ಸಮೇತವಾಗಿ ಮನೆಗೆ ತೆಗೆದುಕೊಂಡು ಬರುವರು. ಅಂದಿನ ಉದಯಕ್ಕೆ ಪ್ರಥಮವಾಗಿ ಎಣ್ಣೆ ಬೀರುವ

ಸಂಪ್ರದಾಯ. ಮೊದಲು ದೇವಸ್ಥಾನದ ತಲೆ ಬಾಗಿಲಿಗೆ ನಂತರ ಉಳಿದ ತಲೆ ಬಾಗಿಲುಗಳಿಗೆ ಹಚ್ಚುವರು. ನಂತರ ತಾಳಿ ಕಟ್ಟುವ ಸಂದರ್ಭಕ್ಕೆ ಮುಂಚೆ ಮದುಮಗನ ಸಹೋದರಿ ಸ್ನಾನ ಮಾಡಿಸಿ, ಹೊಸ ಉಡುಗೆ ಕೊಟ್ಟು, ದೇವಸ್ಥಾನಕ್ಕೆ ಕರೆದೊಯ್ದು ಎತ್ತನ್ನು ಹಿಡಿದು ಮುಂದೆ ನಂದಿ, ಹಿಂದೆ ಮದುಮಗ ಈ ರೀತಿಯಾಗಿ ಕರೆದೊಯ್ದು ದೇವಸ್ಥಾನದಲ್ಲಿ ಬಾಸಿಂಗ ಸೂಡಿಸಿ (ಕಟ್ಟಿ) ಅಲ್ಲಿಂದ ಓಕಳಿ ನಿವಾಳಿಸುತ್ತಾ ಮನೆಗೆ ಕರೆತಂದು ಮಾಂಗಲ್ಯಧಾರಣೆ ಮಾಡಿಸುವರು.

ಚೊಚ್ಚಲು ಹೆರಿಗೆಯ ತೊಟ್ಟಿಲ ಸಂದರ್ಭ :

ಪ್ರಥಮ ಚೊಚ್ಚಲ ಹೆರಿಗೆಯಾದಾಗ ತವರೂರಿಂದ ಮಗುವನ್ನು ಕರೆತರುವಾಗ ಭಾವ-ಮೈದುನನು ತೊಟ್ಟಿಲನ್ನು ಹೊತ್ತುಕೊಂಡು ಬಂದು ಸೇರುವುದೇ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ. ನಂತರ ಮಗುವಿನ ತಂದೆ; ಮನೆಯವರು ವಾದ್ಯಗಳ ಜೊತೆ ಕಳಸ ಕನ್ನಡ ತೆಗೆದು ಕೊಂಡು ಬಂದು ಕಾಯಿ,ಕರ್ಪೂರ ಮಾಡಿಸಿ, ಶ್ರೀ ವೀರಭದ್ರನ ಹೆಸರಿನಿಂದ ಕರೆಯಿಸಿ ನಂತರ ನಾಮಕರಣವನ್ನು ಮನೆಯಲ್ಲಿ ಮಾಡುವ ಪರಿಪಾಠವಿದೆ.

ದೈವಾಧೀನ ಸಂದರ್ಭ :

ಗ್ರಾಮದಲ್ಲಿ ಯಾರಾದರೂ ದೈವಾದೀನರಾದರೆ ಅವರ ಅಂತಿಮ ಸಂಸ್ಕಾರ ಆಗುವವರೆಗೆ ಅಂದಿನ ಪೂಜೆ ಮಾಡುವುದಿಲ್ಲ, ಎಡೆಯಿಲ್ಲ. ಸಂಸ್ಕಾರ ಮಾಡಿದ ನಂತರ ಪೂಜೆ ಮಾಡುತ್ತಾರೆ ಸಂಸ್ಕಾರಕ್ಕೆ ಹೋಗಿ ಬಂದವರು ಸ್ನಾನ ಮಾಡಿ ದೇವಸ್ಥಾನಕ್ಕೆ ಬಂದು ಪ್ರದಕ್ಷಿಣೆ ಹಾಕಿ, ನಮಸ್ಕರಿಸಿ ಹೋಗುತ್ತಾರೆ. ಸಂಸ್ಕಾರಕ್ಕೆ ಹೋಗಿ ಬಂದವರು ಅನ್ಯರನ್ನು ಮಾತನಾಡಿಸುವಂತಿಲ್ಲ. ದೇವಸ್ಥಾನಕ್ಕೆ ಹೋಗಿ ಬಂದರೆ ಯಾವ ದೋಷವು ಇಲ್ಲವೆಂಬ ರೂಢಿ ಇದೆ.

ಹೀಗೆ ಶ್ರೀ ವೀರಭದ್ರ ದೇವರು ನಮ್ಮ ದಿನ ನಿತ್ಯದ ಜೀವನ ಸಂಸ್ಕೃತಿಯೊಂದಿಗೆ ತನ್ನ ಸಂಬಂಧವನ್ನು ಗಟ್ಟಿಗೊಳಿಸುತ್ತಾ ಬಂದಿದ್ದಾನೆ.

೪.೩. ವಾರ್ಷಿಕಾವರ್ತನದ ಆಚರಣೆಗಳು :

ಮೂಲ ಕಾಲದಿಂದಲೂ ವೀರಶೈವ ಅರ್ಚಕರೇ ಪೂಜೆಯನ್ನು ಮಾಡುತ್ತಾ ಬಂದಿರುತ್ತಾರೆ. ಈಗ ಇವರ ವಂಶವೃದ್ಧಿಯಾಗಿ ಪ್ರತಿವರ್ಷಕ್ಕೆ ಒಬ್ಬರಂತೆ ನವರಾತ್ರಿಯ ದಿನ ಬದಲಾಗುತ್ತಾರೆ. ಈ ರೂಢಿಯ ವಾಡಿಕೆಯಂತೆ ಪೂಜೆ ಮಾಡುತ್ತಾ ಹೋಗುತ್ತಾರೆ. ಶ್ರಾವಣ ಮಾಸ ರುದ್ರಾಭಿಷೇಕ, ಅಭಿಷೇಕ, ವಿಶೇಷ ಪೂಜೆಗಳನ್ನು ಗುರುಗಳು ಮಾಡುತ್ತಾರೆ.

೧. **ದಿನಂಪ್ರತಿ :** ದಿನಂಪ್ರತಿ ಪೂಜಾರಿಯು ದೈನಂದಿನ ಕೆಲಸಗಳನ್ನು ಮುಗಿಸಿ, ಮಡಿಯಿಂದ ನೀರು ತಂದು ಶ್ರೀ ವೀರಭದ್ರ ದೇವರಿಗೆ ಅಷ್ಟಾವಿರಾರ್ಚನೆ ಪೂಜೆಗೈದು, ಗಂಟೆ, ಶಂಕು, ಜಾಗಟೆ, ಸಮಾಳ, ಖಡ್ಗನಾದದಿಂದ ಪೂಜಿಸಿ, ನೈವೇದ್ಯ ಮಾಡಿ ಬಂದವರಿಗೆ ಪ್ರಸಾದ, ಕಾಯಿ-ಕರ್ಪೂರ, ತೀರ್ಥ ಕೊಡುವ ರೂಢಿ ಇದೆ.

೨. **ವಾರ :** ಈತನ ವಾರ ಮಂಗಳವಾರ. ನಿತ್ಯ ಕರ್ಮಗಳನ್ನು ಮುಗಿಸಿ ಸುಚಿರ್‌ಭೂತನಾಗಿ ಮಡಿ ನೀರನ್ನು ತಂದು ಬೆಳಿಗ್ಗೆ ೫ಗಂಟೆಗೆ ಪೂಜೆ ಮಾಡುತ್ತಾನೆ. ವಸ್ತ್ರಧರಿಸಿ ಅಷ್ಟಾರ್ಚನೆ ಪೂಜೆಗೈದು ಭಕ್ತರಿಗೆ ತೀರ್ಥ ಕೊಡುವರು. ವಾರದ ದಿನ ಒಪ್ಪತ್ತು ಇರುವ ಭಕ್ತರು ಉಪವಾಸ ವ್ರತ ಆಚರಣೆ ಮಾಡುತ್ತಾರೆ. ಅಂದಿನ ದಿನ ಎಲ್ಲಾ ಕೋಮಿನವರು ಶ್ರೀ ವೀರಭದ್ರನ ದೇವಸ್ಥಾನಕ್ಕೆ ಬಂದು ಹೋಗುವ ಪರಿಪಾಠವಿದೆ. ಶ್ರೀ ಸ್ವಾಮಿಯ ದರ್ಶನಕ್ಕೆ ಬೇರೆ ಊರುಗಳಿಂದ ಭಕ್ತರು ಬಂದು ಹೋಗುವ ರೂಢಿ ಸಹ ಇದೆ. ಹಬ್ಬ ಹರಿದಿನಗಳಲ್ಲಿ , ತಿಥಿ, ವಾರ, ಶುಭದಿನಗಳಲ್ಲಿ ವಿಶೇಷ ಅಮವಾಸೆ ಪೂಜೆ ನಡೆಯುತ್ತದೆ. ಕಾರ್ತೀಕ ಮಾಸ ಅಮವಾಸೆ ಆದ ಮೊದಲ ಮಂಗಳವಾರವೇ ಈತನ ಪ್ರಥಮ ಕಾರ್ತಿಕ ಮುಡಿಸುತ್ತಾರೆ.

ಈ ಜಾತ್ರಾ ಮಹೋತ್ಸವವೂ ವರ್ಷಕ್ಕೊಂದು ದಿನ, ಅದು ನಿಗದಿಪಡಿಸಿದ ದಿನ, ಇನ್ನಿತರ ಅವಧಿಗೂ, ಗೊತ್ತಾದ ಸ್ಥಳದಲ್ಲಿ ಒಂದು ದಿನವೂ , ಇನ್ನು ಹೆಚ್ಚಿನ ದಿನಗಳವರೆಗೂ ಜನ ಸೇರಿ ನಡೆಸುವ ಉತ್ಸವವಾಗಿದೆ. ಜಾತ್ರೆಯೆಂದರೆ ಯಾತ್ರೆ. ಸಾಮೂಹಿಕವಾಗಿ ಸೇರಿ ಯಾವುದೋ ಅಗೋಚರವಾದ ಶಕ್ತಿಯ ಬಂಧನದಲ್ಲಿ ಮಿಲನವಾಗಿ ಏಕೋ ಭಾವದಿಂದ, ಏಕೋಚಿತ್ತದಿಂದ ಸೇರಿ ದೇವರನ್ನು ಆರಾಧಿಸುವದೇ ಜಾತ್ರೆ ಎಂದು ನಂಬಿದ್ದೇವೆ. ಆ ಸಂದರ್ಭದಲ್ಲಿ ನಾವು ಸೇರಿರುವ ಬಳಗಕ್ಕೆ ಒಬ್ಬರಿಗೊಬ್ಬರು ಸೌಹಾರ್ದದ ಸಹಾಯದ ಬೆಸುಗೆಯಾಗುತ್ತದೆ. ಬಂಧುಗಳ ಬಂಧನ ವಾಗುತ್ತದೆ.

ಜಾತ್ರೆಗಳು ನಡೆಯುವುದು ಪ್ರಕೃತಿಯ ಮಡಿಲಲ್ಲಿ. ನಿರಂತರವಾಗಿ ದುಡಿಯುವ ಶ್ರಮಜೀವಿ ವಿರಾಮ ಪಡೆಯಲು ಹಬ್ಬ ಹರಿದಿನ, ತೇರು, ಉತ್ಸವ, ಜಾತ್ರೆ ಮೊದಲಾದ ಸಾಮೂಹಿಕ ಆಚರಣೆಗಳನ್ನು ಕಂಡುಕೊಂಡಿದ್ದಾನೆ. ಈ ಹಬ್ಬದ ಔತಣದ ಆಚರಣೆಗಳಲ್ಲಿ, ಮಾನವ ತನ್ನ ಕಷ್ಟ ನಿಷ್ಠೂರ, ಚಿಂತನೆ, ಅನೇಕ ನೋವುಗಳಿಂದ ಬಳಲಿ ಬೆಂಡಾಗಿದ್ದರೂ ಸಂತೋಷಪಡುವನು. ಅವಿರತ ಶ್ರಮದಿಂದ ನೊಂದ ಜೀವಿಗೆ ಆ ಶ್ರಮದ ಅಲ್ಪ ವಿರಾಮದ ಸುಖ ನೀಡುವವು ಈ ಜಾತ್ರೆಗಳು. ತನ್ನ ಇಡೀ ಜೀವಮಾನ ವ್ಯವಸ್ಥೆಯಲ್ಲಿ ಬಳಲಿದ್ದರೂ ಸಂತೋಷದ ಕೂಟದ ಸಮಾಗಮವೇ ಈ ಜಾತ್ರೆಯ ಉದ್ದೇಶವಾಗಿದೆ. ಎಲ್ಲರೂ ಎಲ್ಲಾ ಜಾತಿಯ ಜನರು ಒಟ್ಟಾಗಿ ಸದ್ಭಾವನೆಯಿಂದ ಸದಾ ನಗುಮುಖದಿಂದ ಕೂಡಿ ಹೊಂದಿಕೊಂಡು ವರ್ಷವಿಡೀ ಕೆಲಸ ಮಾಡಿ ಧಣಿದ ಮನಸ್ಸಿಗೆ ಸುಖ ನೀಡುವ ಸುಖ ದೌತಣ ಕೊಡುವ ಸುಖದಿಂದ ಕಾಲ ಕಳೆವ ಸದ್ಭಾವನೆಯೂ ಈ ಜಾತ್ರೆ.

ಮೊರಬ ಶ್ರೀ ವೀರಭದ್ರೇಶ್ವರ ಸ್ವಾಮಿಯ ಭಕ್ತರು ಅಸಂಖ್ಯಾತರು. ಇಂದಿಗೂ ದೂರದ ಸುಮಾರು ಊರುಗಳಲ್ಲಿ ಇದ್ದಾರೆ. ಅವುಗಳಲ್ಲಿ ಕೂಡ್ಲಿಗಿ, ಹರಪನಹಳ್ಳಿ, ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ, ಮಧುಗಿರಿ, ತುಮಕೂರು, ಭದ್ರಾವತಿ, ಚನ್ನಗಿರಿ, ಚನ್ನಪಟ್ಟಣ, ಚಿಂತಾಮಣಿ, ಹಾಸನ, ಕೋಲಾರ, ಮೈಸೂರು, ಆಂಧ್ರ, ತಮಿಳುನಾಡು ಮುಂತಾದ ಕಡೆಗಳಲ್ಲಿ ಮೊರಬದ ಶ್ರೀ ವೀರಭದ್ರೇಶ್ವರಸ್ವಾಮಿ ಭಕ್ತರಿದ್ದಾರೆ. ಈತನ ಭಕ್ತರು ಎಲ್ಲಾ ಜಾತಿ ಜನಾಂಗಕ್ಕೆ ಸೇರಿದವರಾಗಿದ್ದಾರೆ. ಶೆಟ್ಟರು, ವೈಶ್ಯರು, ವಿಶ್ವಕರ್ಮ, ವಾಲ್ಮೀಕಿ, ಚಿಂಪಿಗರು, ಬಣಜಿಗರು ಇನ್ನೂ ಅನೇಕ ಜಾತಿಯವರು ಭಕ್ತರಾಗಿ ಪೂಜಿಸುತ್ತಿದ್ದಾರೆ. ಶ್ರೀ ವೀರಭದ್ರೇಶ್ವರನ ಜಾತ್ರೆಗೆ ದೂರದ ಊರುಗಳಿಂದ ಜನರು ಕಾಲ್ನಡಿಗೆ, ಬಂಡಿ, ಬಸ್ಸು, ಟ್ರ್ಯಾಕ್ಟರ್, ಆಟೋ ಮತ್ತಿತರ ವಾಹನಗಳ ಮೂಲಕ ಬರುತ್ತಾರೆ. ಜಾತ್ರೆಗೆ ಬಂದ ಭಕ್ತರು ಹರಕೆ, ಮುಡುಪು, ಕಾಣಿಕೆಗಳನ್ನು ಕೊಟ್ಟು ಶಸ್ತ್ರ ಧರಿಸುವುದು, ಬಾಯಿ ಬೀಗ ಹಾಕಿಸಿಕೊಳ್ಳುವುದು, ದೀರ್ಘದಂಡ ನಮಸ್ಕಾರ ಮಾಡುವುದು ಇನ್ನು ಅನೇಕ ವಿಧವಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುತ್ತಾರೆ.

ರಥೋತ್ಸವ :

ಹಿಂದೂ ಲೆಕ್ಕದಲ್ಲಿ ಪುಷ್ಯಮಾಸ ಶೂನ್ಯಮಾಸವೆಂದೂ ಯಾವ ಶುಭ ಕಾರ್ಯಗಳಿಗೆ ಇದು ಪ್ರಾಶಸ್ತವಲ್ಲವೆಂದೂ ನಂಬಿಕೆ ಇದೆ. ಇಂಥ ಮಾಸದಲ್ಲಿ ಶ್ರೀ ವೀರಭದ್ರೇಶ್ವರನ ತೇರು ಎಳೆಯುತ್ತದೆ. ಇದಕ್ಕೆ ಕಾರಣ ಹೀಗಿದೆ;

ಸೋಮಶೇಖರ ರಾಜನ ವಿರುದ್ಧ ಮುಸಲ್ಮಾನ ದೊರೆಯೊಬ್ಬ ಯುದ್ಧಕ್ಕೆ ಹೊರಟಿದ್ದ. ಅವನ ಭಾರಿ ಸೈನ್ಯ ಮೊರಬ ಗ್ರಾಮದ ಬಳಿ ಹಾದು ಹೋಗಬೇಕಾಗಿತ್ತು. ಮುಂದೆ ಹರಪನಹಳ್ಳಿಗೆ ಪಯಣ. ಇದ್ದಕ್ಕಿದ್ದಂತೆ ಮುಸಲ್ಮಾನ ದೊರೆಯ ಸೈನ್ಯ ಮೊರಬದ ಬಳಿ ವಿಗ್ರಹದಂತೆ ನಿಂತು ಬಿಟ್ಟಿತು. ಕಾಲು ಕೀಳಲು ಸೈನಿಕರಿಗಾಗದು. ದೊರೆಗೂ ಭಯ ಹಾಗೂ ವಿಸ್ಮಯ. ಹಾಗೆ ಯೋಚಿಸಲಾಗಿ ಅಲ್ಲಿಯ ಅಧಿ ದೇವತೆಯ ನೆನಪು ಬಂತು. ದೇವಸ್ಥಾನಕ್ಕೆ ಬಂದು ಅಂಗಲಾಚಿ ಅನನ್ಯ ಭಾವದಿಂದ ಶ್ರೀ ಸ್ವಾಮಿಗೆ ಕೈಮುಗಿದ. ಆಗ ಮುಸಲ್ಮಾನ ಸೈನ್ಯಕ್ಕೆ ಚೇತನ ಬಂತು. ಧರ್ಮ ವಿವೇಕ ಮಾಡಿದ ಮೇಲೆ ಆ ದೊರೆ ಯುದ್ಧ ಸ್ವಾಮಿಗೆ ರಥೋತ್ಸವ ಮಾಡಲು ನಿರ್ಧರಿಸಿದ. ಶೂನ್ಯ ಮಾಸ ಮುಸಲ್ಮಾನರಿಗೆ ಪವಿತ್ರವಂತೆ ಅವರ ಧರ್ಮದ ಪ್ರಕಾರ ಪುಷ್ಯ ಶುದ್ಧ ಪಂಚಮಿಗೆ ರಥೋತ್ಸವವನ್ನು ಆಚರಿಸಿದ ಸಂದರ್ಭದ ಹಿನ್ನೆಲೆಯಲ್ಲಿ ಇಂದಿಗೂ ಮೊರಬದ ಜಾತ್ರೆ ನಡೆಯುತ್ತದೆ.

ಪುಷ್ಯ ಮಾಸದಲ್ಲಿ ತೇರು :

ಮುಸಲ್ಮಾನ ದೊರೆ ಅಂದುಕೊಂಡಂತೆ ತಾನು ಮತ್ತು ತನ್ನ ಸೈನಿಕರು ಸುರಕ್ಷಿತವಾದುದರಿಂದ ಆತನು (ಮುಸ್ಲಿಂಮರಿಗೆ ಶೂನ್ಯ ಮಾಸವು ಪವಿತ್ರ ಮಾಸವಾಗಿರುವುದರಿಂದ ಪುಷ್ಯ ಮಾಸದಲ್ಲಿ) ತೇರು ಕಟ್ಟಿಸಿ, ಎಳೆಸಿದನಂತೆ. ಅದರಂತೆ ಅಂದು ಪ್ರಾರಂಭವಾದ ಹೊಸತೇರು ಇಂದಿಗೂ ತಪ್ಪದೇ

ನಡೆದುಕೊಂಡು ಬರುತ್ತದೆ. ಅಂದು ಹೊಸ ತೇರು ಕಟ್ಟಿಸಿ ಒಪ್ಪಿಸಿದ್ದ ಮುಸ್ಲಿಂ ವ್ಯಾಪಾರಿಯು ಈಗ ಈ ಸಂಪ್ರದಾಯ ವನ್ನು ಅವಿರತವಾಗಿ ಪದ್ಧತಿ ಪ್ರಕಾರ ಪುಷ್ಯ ಶುದ್ಧ ಪಂಚಮಿಯ ದಿವಸ ಸಾಯಂಕಾಲ ಸುಮಾರು ೫ ಗಂಟೆಗೆ ರಥೋತ್ಸವವು ಜರುಗುವುದು.

ಅಂದಿನಿಂದ ಇಂದಿನವರೆಗೂ, ಇನ್ನು ಮುಂದೆಯೂ ಗ್ರಾಮದ ದೈವಸ್ಥರು ಸೇರಿ ಹೊಸ್ತಲ ಹುಣ್ಣಿಮೆಯಾದ ಬುಧವಾರ ಇಲ್ಲವೆ ಶನಿವಾರದ ದಿವಸ ತೇರಿನ ಗಾಲಿ ಹೊರಹಾಕಿ,ತೇರು ಕಟ್ಟಲು ನಿಲ್ಲಿಸುವ ಜಾಗ ಅಂದರೆ ಮುಸ್ಲಿಂ ವ್ಯಾಪಾರಿಯ ಕುದುರೆಯು ಬಿದ್ದ ಜಾಗದಲ್ಲಿ ಒಂದು ಚೌಕಾಕಾರದ ಕಲ್ಲು ಇಡಲಾಗಿದೆ. ಅಲ್ಲಿಯೇ ಗಾಲಿಗಳನ್ನು ನಿಲ್ಲಿಸಿ ತೇರು ಕಟ್ಟುವರು.

ತೇರಿಗೆ ಬೇಕಾದ ಮರಮುಟ್ಟುಗಳನ್ನು ದೈವದವರು ಕೊಡಿಸುತ್ತಾರೆ. ಇಲ್ಲವೇ ಭಕ್ತರು ಯಾರಾದರೂ ಅಂದುಕೊಂಡರೆ ಅವರೇ ಕೆಡಿಸುತ್ತಾರೆ. ಗ್ರಾಮದ ದೈವದವರು ಸೇರಿ ಈ ವರ್ಷದ ರಥೋತ್ಸವದ ಒಂತಿಗೆಯನ್ನು ಎಷ್ಟು ನಿರ್ಧರಿಸುವುದು ಎಂದು ಸಮಾಲೋಚಿಸಿ ಆ ವರ್ಷಕ್ಕೆ ತಗಲುವ ವೆಚ್ಚಕ್ಕೆ ಅನುಸರಿಸಿ ರೈತ ಕಾರ್ಮಿಕ ಸಾಮಾನ್ಯ ವರ್ಗದ ಜನರಿಗೆ ಒಂದೇ ರೀತಿಯ ಪಟ್ಟಿ ಬರೆಯುತ್ತಾರೆ. ಊರಿನ ಪರವಾಗಿ ಬಣಕಾರ, ಬಾರಿಕ, ತಳವಾರ, ಒಂತಿಗೆ ವಸೂಲು ಮಾಡಿಕೊಂಡು ಇಷ್ಟು ವಸೂಲಾಗಿದೆ ಎಂದು ತಿಳಿಸಿದಾಗ, ಹೊಸದಾಗಿ ತರುವ ಮರ ಮುಟ್ಟು, ಕಬ್ಬಿಣ ಕಮ್ಮಾರಿಕೆ ಗಳ-ಬಿದುರು, ಬಟ್ಟೆ ಜಲ್ಲಿ ಗಾಲಿ ರಿಪೇರಿ ಮಾಡಿಸುತ್ತಾರೆ. ಗ್ರಾಮ ದೈವದವರಿಂದ ಹಣ ಕಡಿಮೆಯಾದಲ್ಲಿ ಶ್ರೀ ವೀರಭದ್ರೇಶ್ವರ ಸ್ವಾಮಿಯ ಹುಂಡಿ ಅಥವಾ ಪಟ ಹರಾಜು ಮಾಡಿದ ಹಣದಿಂದ ಸರಿಪಡಿಸಿಕೊಳ್ಳುತ್ತಾರೆ.

೩.೨. <u>ಜಾತ್ರೆಯಲ್ಲಿನ ವಿಶೇಷ ಕಾರ್ಯಕ್ರಮಗಳು :</u>

ರಥೋತ್ಸವಕ್ಕೆ ಮುಂಚೆ ಶ್ರೀ ಸ್ವಾಮಿಯ ಐದು ದಿವಸದ ಶುಭ ಕಾರ್ಯಗಳ ಆಚರಣೆ. ಈ ಆಚರಣೆಯಿಂದ ಜನರಲ್ಲಿ ಎಲ್ಲಿಲ್ಲದ ಆನಂದ ಸಂಭ್ರಮವನ್ನು ಕಾಣಬಹುದು. ಮೊದಲು ನಾಲ್ಕು ದಿವಸಗಳಲ್ಲಿ ' ಉಚ್ಚಯ್ಯನ ಉತ್ಸವ'. ಅಂದರೆ ಸಣ್ಣದಾದ ರಥದಲ್ಲಿ ಉತ್ಸವ ಮೂರ್ತಿಯನ್ನು ಮೇಳ ಭಜಂತ್ರಿಯೊಂದಿಗೆ ಮೆರೆಸುವರು. ದಿವಸಗಳಲ್ಲಿ ಕಂಕಣ ಕಾರ್ಯ ನಡೆಯುವುದು. ಅಂದರೆ ವೀರಭದ್ರಸ್ವಾಮಿಗೂ ಕಾಳಮ್ಮನಿಗೂ ವಿವಾಹ ಮಾಡುತ್ತಾರೆ. ಅಂದು ದೈವದವರೆಲ್ಲಾ 'ಬಾಗೀನ' ತರುತ್ತಾರೆ. ಕಡಗ ಸುತ್ತು, ಬಳೆ, ತಾಳಿ, ಎಲೆ, ಅಡಿಕೆ, ಹಣ್ಣು, ಕಾಯಿ ಮುಂತಾದವುಗಳನ್ನು ತಂದು ವೀರಶೈವ ಶಾಸ್ತ್ರೋಕ್ತ ರೀತಿಯಲ್ಲಿ ಲಗ್ನ ಮಾಡುವರು. ೨ನೇ ಹಾಗೂ ೩ನೇ ದಿವಸ ಗಜವಾಹನೋತ್ಸವ, ತುರುಗೋತ್ಸವಾದಿಗಳು ನಡೆಯುತ್ತವೆ. ೪ನೇ ದಿವಸ ಹಲಗೆ ಉತ್ಸವ ನಡೆಯುತ್ತದೆ. ಅದನ್ನೇ ಬಸವ ಉಚ್ಚಯ್ಯನ ದಿನವೆಂದು ಕರೆಯುವರು. ೫ನೇ ದಿನವೇ ವೀರಭದ್ರ ಸ್ವಾಮಿಯ ರಥೋತ್ಸವ.

೧. ಶ್ರೀ ಸ್ವಾಮಿಗೆ ಕಂಕಣಧಾರಣೆ

೨. ರಾತ್ರಿ ತುಗವಾಹನ ಉತ್ಸವ

೩. ರಾತ್ರಿ ಗಜವಾಹನ ಉತ್ಸವ

೪. ಬಸವನ ಉತ್ಸವ ಹಾಗೂ ಭಕ್ತರಿಂದ ದೀಪೋತ್ಸವ

೫. ರಥೋತ್ಸವ.

ಜಾತ್ರಾ ವಿಶೇಷ ಕಾರ್ಯಕ್ರಮ :

ಪುಷ್ಯ ಮಾಸದ ಅಮವಾಸೆಯ ಹಿಂದಿನ ರಾತ್ರಿ ಗುರುಗಳಿಗೆ ಉಲುಪಿ ಕೊಟ್ಟು ಬರುವರು ಶ್ರೀ ವೀರಭದ್ರೇಶ್ವರ ದೇವರಿಗೂ ಉಲುಪಿ ಕೊಡುವರು. ಹೆಣ್ಣು ದೇವತೆಗೆ ಹಣ್ಣು, ಹೂ, ಕಾಯಿ, ಕರ್ಪೂರ ಕೊಡುವರು. ಇದಕ್ಕೂ ಮುಂಚಿತವಾಗಿ ದೈವದ ಪರವಾಗಿ ಬಣಕಾರನು ಕಾರ್ಯಕ್ರಮಕ್ಕೆ ಬೇಕಾಗುವ ಹರಿಶಿಣ, ಕುಂಕುಮ, ಕಾಯಿ ,ಕರ್ಪೂರ, ಅಡಿಕೆ, ಎಲೆ, ದಾರದ ರೀಲು, ಹರಿಶಿಣ ಕೊಂಬು ಬೆಟ್ಟಡಿಕೆ, ಉತ್ತತ್ತಿ, ಕೊಬ್ಬರಿ ಬಟ್ಟಲು, ತಾಳೆಗರಿ, ಗೇರುಬೀಜ ಹಾಗೂ ಐದು ಕಳಸದ ತಂಬಿಗೆ, ಅಕ್ಕಿ, ಜೋಳ, ದಕ್ಷಿಣೆ, ತಾಂಬೂಲ ಎಲ್ಲಾ ಜೋಡಿಸಿಕೊಂಡಿರುತ್ತಾರೆ. ಅಂದು ಉತ್ಸವಕ್ಕೆ ಚಿಕ್ಕ ತೇರು ತಯಾರು ಮಾಡುತ್ತಾರೆ. ಕಂಬಳಿ, ಪಂಚಕಲಶಕ್ಕೆ ಐದು ಪರಡಿಗಳು, ೫ ಬಣ್ಣದ ಬಟ್ಟೆ ಹೊಂದಿಸಿಕೊಳ್ಳಲಾಗುತ್ತದೆ. ಉಮಾಮಹೇಶ್ವರರಿಗೆ ಬಟ್ಟೆ ತಂದಿರುತ್ತಾರೆ. ಮಡಿ ಬಟ್ಟೆ, ಬಳೆ, ತಾಳಿ, ಕಡಗ, ಸುತ್ತು ತಂದಿರುತ್ತಾರೆ. ಪೂಜಾರು ಮನೆಯ ಕಳಸದವರನ್ನು ಈ ಸಂದರ್ಭದಲ್ಲಿ ಕರೆಸಿಕೊಳ್ಳಲಾಗಿರುತ್ತದೆ.

ಅಂದು ಆಯಾ ವರ್ಷದ ಪೂಜಾರ ಮನೆಯ ಅಣ್ಣ-ತಮ್ಮಂದಿರು ಸೇರಿ ವಿಶೇಷ ರೀತಿಯ ಪೂಜೆ ಮಾಡುತ್ತಾರೆ. ನಾಲ್ಕು- ಐದು ಜನರು ಸೇರಿ, ಸಾಯಂಕಾಲ ಬೆಳ್ಳಿಯ ಸಾಮಾನು ತರುವರು. ಸಾಮಾನು ತರಲು ಮಠದವರು (ಗುರುಗಳನ್ನು) ಕರೆದುಕೊಂಡು, ಪಟ್ಟಿ (ಲೀಸ್ಟ್) ಬರೆಯಿಸಿ ಸಾಮಾನುಗಳನ್ನು ತೆಗೆದುಕೊಂಡುಬರುತ್ತಾರೆ. ಸಾಯಂಕಾಲ ಶುಚೀರ್ಭೂತರಾಗಿ ಅಂದು ರಾತ್ರಿ ೧೦ ರಿಂದ ೪ಗಂಟೆಯವರೆಗೂ ಕುದುರೆ ಪೂಜೆ, ಎಲೆ ಪೂಜೆ, ಪ್ರಭಾವಳಿ ಅಲಂಕಾರ ಮಾಡುತ್ತಾರೆ. ಶ್ರೀವೀರಭದ್ರೇಶ್ವರನಿಗೆ ಧರಿಸುವ ವಿವಿಧ ರೀತಿಯ ಬಿರುದುಳ್ಳ ಆಯುಧಗಳನ್ನು ಧರಿಸಿರುತ್ತಾರೆ.

ಅವುಯಾವುವೆಂದರೆ; ಕಿರೀಟ, ನಾಗರಹೆಡೆ, ನಾಗಾಭರಣ, ಹಣೆಗಣ್ಣು, ಕರ್ಣಕುಂಡಲ, ಕ್ವಾರೆ ಮೀಸೆ, ಗದ್ದ, ಎದೆಬಾಹು, ತೋಳನಾಗಮುರಿ, ದೇಹಕವಚ, ಖಡ್ಗ, ಬಾಕು, ಈಟಿ,ರಣಚೂರಿ, ಬಿಲ್ಲು ಬಾಣ, ಸಣ್ಣಗತ್ತರಿ, ಕತ್ತರಿ, ಬಾಕು, ಬೀಸುವ ಹಗ್ಗ, ಜ್ವಾಲೆ, ಪೆಂಡಿಗೆಜ್ಜೆ ಪಾದುಕೆ, ರುದ್ರಾಕ್ಷಿಮಾಲೆ , ಸರಗೆಜ್ಜೆ, ಜಂಗು, ಸರಮಾಲೆ, ಇನ್ನೂ ಅನೇಕ ವಿಧವಾದ ಆಯುಧಗಳನ್ನು ಧರಿಸುತ್ತಾರೆ. ಕುದುರೆಯ ಪೂಜೆ, (ಕುದುರೆಯ ಮೇಲೆ ಕುಳಿತಂತೆ ಕುದುರೆ ಪೂಜೆ) ಕಡ್ಡಿ ಕರವಾಳ ಕಾಸಿಪೀತಾಂಬರ, ರೇಷ್ಮೆ ಝರಿಯ ರುಮಾಲ ಹಾಗೂ ನಾನಾ ರೀತಿಯ ರೇಷ್ಮೆಯ ಮಡಿಯ ಮಡಿ ಹೂಡಿಗೆಗಳನ್ನು

ಧರಿಸಿರುತ್ತಾರೆ. ಶಸ್ತ್ರ ಖಡ್ಗ, ಬಾಕು ಇಟ್ಟು ಗುರು ಪಾದೋದಕ ತೀರ್ಥ ಪ್ರಸಾದ ಕೊಟ್ಟು, ದೃಷ್ಟಿ ದೋಷ ನಿವಾರಣೆಗಾಗಿ ಬಲ್ಲಂಥ ಪೂಜಾರರು ಓಕಳಿ ನಿವಾಳಿಸಿ ದೃಷ್ಟಿ ಬಲಿ ತೆಗೆಯುವುದುಂಟು. ನಂತರ ಪೂಜಾರರು ಭಯ ಭಕ್ತಿಯಿಂದ ನಾವು ಮಾಡಿರುವ ಸೇವೆಯಲ್ಲಿ ಏನಾದರೂ ತಪ್ಪು ತಡೆಯಾದಲ್ಲಿ ಕ್ಷಮಿಸುವಂತೆ ಧೀರ್ಗ ದಂಡ ನಮಸ್ಕಾರ ಹಾಕಿ ಬೇಡಿಕೊಳ್ಳುತ್ತಾರೆ. ಮಂಗಳಾರತಿ ಮಾಡಿ ಧೂಪಹಾಕುತ್ತಾರೆ. ಪೂಜೆಯಾಗಿದೆ ಎಂದು ತಿಳಿಸಲು ಮಂಗಳಾರತಿ ಮಾಡುತ್ತಾರೆ. ಆಗ ರುದ್ರ ಮೇದ ಘೋಷ ಕೇಳಿಸುತ್ತಿದ್ದಂತೆಯೇ ಬಾಬುದಾರರು ತಮ್ಮ ತಮ್ಮ ಆದಿಕಾಲದಿಂದ ನಡೆದು ಬಂದ ಗೊರವ ಕಟ್ಟಿಗೆ ಹಿಡಿದು, ಹರಿಜನರು ಪಂಜುಹಿಡಿದು ಮಡಿವಾಳ ನಡೆಮಡಿ ಸಹಿತ ಬರುತ್ತಾನೆ. ದಿವಟಿಗೆ ಹಿಡಿದು ಬಾರಿಕೇರವರು, ಕಾಯಿ ಕೊಡೆ ಬಟ್ಟಲು ಹಿಡಿದು ವಾಲೇಕಾರ, ಬಾಣಿಕೋಲು ಹಿಡಿದು ತಳವಾರ, ವಾಲಗದವರು ಸಹನಾಯಿ ಬಾರಿಸುವವರು ನಂದೀಧ್ವಜ ಸಮೇಳ ಡೋಲು ಸಂಘದವರು ಏಕಕಾಲಕ್ಕೆ ಸ್ನಾನ ಪೂಜಾ ಮಡಿಧರಿಸಿ ಕೊಂಡು ಹೊರಡಿ ಸಮಯ ಸಮೀದಿಸಿದೆ ಎಂದು ಎಚ್ಚರಿಸುತ್ತಾರೆ. ಆಗ ಎಲ್ಲರೂ ಎದ್ದು ಕಳಶ ಕನ್ನಡಿಗಳನ್ನು ಹಿಡಿದು ಹೊರಡುತ್ತಾರೆ.

ಅಂದರೆ ಗ್ರಾಮದ ಗುರುಗಳ ಮನೆಯವರು, ಪೂಜರು ಮನೆಯವರು, ಗೌಡ ಶಾನುಭೋಗ ಕೆಟ್ಟಿ ಆದಿಯಾಗಿ ವೀರ ಮಹೇಶ್ವರರ ಕಳಶಗಳನ್ನು ಹೊರಡಿಸಿ ಕೊಂಡು ಹೋಗುವರು. ದುರ್ಗಾಂಬಿಕೆಗೆ ಹಣ್ಣು ಹೂ ಕಾಯಿ ಕೊಟ್ಟು ಮಂಗಳಾರತಿ ಮಾಡಿಸುವರು ಮುಂದೆ ಸಕಲ ಸಜ್ಜನರನ್ನು ಕರೆದು ಕೊಂಡು ರಾಣ್ಯದವರು ಸೇರಿ ಬರುತ್ತಾರೆ. ಬೆಳಗಿನ ಜಾವ 4-30, ಸುಮಾರಿಗೆ ಶ್ರೀ ವೀರಭದ್ರೇಶ್ವರ ದೇವಸ್ಥಾನದ ಪ್ರಾಂಗಣಕ್ಕೆ ಬಂದು ಗರ್ಭಗುಡಿಯ ರಂಗ ಮಧ್ಯದಲ್ಲಿ ಹಾಸಿಗೆ ಹಾಸಿ ಗುರುಗಳ ಮನೆಯ ಮುತ್ತೈದೆಯರು ಹಾಸಿಗೆ ಬರೆಯುತ್ತಾರೆ. ನಂತರ ಗುರುಗಳು ಈಶಾನ್ಯಕ್ಕೆ ಪಂಚ ಕಲಶ ಸ್ಥಾಪಿಸುತ್ತಾರೆ. ಪೂಜಿಸಿ, ಕಾಯಿ, ಕರ್ಪೂರದಾರತಿ ಮಾಡುತ್ತಾರೆ. ಮದುವೆಯ ಮನೆಯಲ್ಲಿ ಮಾಡುವಂತೆ ಮಾಡುತ್ತಾರೆ. ದಶಕರ್ಮ ಪದ್ದತಿಯಂತೆ ಕಂಕಣ ಧಾರಣೆಯಿಂದ ಹಿಡಿದು ಹತ್ತು ಕರ್ಮ ಗಳನ್ನು ಕ್ರಮವಾಗಿ ಆಚರಿಸುತ್ತಾ ಶ್ರೀ ಸ್ವಾಮಿಯನ್ನು ಹಾಸಿಗೆಗೆ ಗುರುಮುಂದೆ ಕರೆತಂದು ಮುಹೂರ್ತ ಮಾಡಿಸಿ ಶ್ರೀ ವೀಭದ್ರೇಶ್ವರ ಉತ್ಸವ ಮೂರ್ತಿಯನ್ನು ಅಲಂಕರಿಸಿರುತ್ತಾರೆ. ಶ್ರೀ ವೀರಭದ್ರೇಶ್ವರ ಬೆಳ್ಳಿಯ ಪಟ್ಟ ಮೂರ್ತಿಯು ನಾನಾ ವಿಧವಾಗಿ ಆಯುಧಗಳಿಂದ ಕೆತ್ತಲ್ಪಟ್ಟ ವಿಗ್ರಹವಿದೆ. ಬಹುಸುಂದರವಾದ ಮೂರ್ತಿ ಒಂದೇ ಪೀಠದ ಮೇಲೆ ಶ್ರೀ ಸ್ವಾಮಿ ಹಾಗೂ ಕಾಳಮ್ಮನ ವಿಗ್ರಹವೂ ಕೂಡಾ ಇದೆ. ಘಟ್ಟಿಯಾದ ವಿಗ್ರಹವಿದೆ 4 ಕೈ, ಆಯುಧ, ನತ್ತು, ಕಿರೀಟ, ತಾಳಿಕಡಗ ಸುತ್ತು ಬಳೆ ಇಡುತ್ತಾರೆ. ನಂತರ ಮುಸುಗು ಹಾಕಿ ಬ್ರಹ್ಮ ಗಂಟು ಹಾಕಲು ಕಂಕಣ ಕಟ್ಟಿ ಬಂದ ಮುತ್ತೈದೆಯರು ಸಕಲ ಭಕ್ತರೂ, ಕಂಕಣ ಧಾರಣೆ ಮಾಡಿಕೊಂಡು ಇಂದಿನಿಂದ ನಾವುಗಳು ಕಂಕಣ ಬಿಚ್ಚುವವರೆಗೂ ಊರು ಬಿಟ್ಟು ಕದಲದೇ ನಿಮ್ಮ ಸೇವಾನಿರತರಾಗಿರುತ್ತೇವೆಂದು ಸಂಕಲ್ಪ ಮಾಡಿ ಕೊಳ್ಳುತ್ತಾರೆ.

ಕಂಕಣ ಕಟ್ಟಿದಾಗ ಇದ್ದವರು ಕಂಕಣ ಬಿಚ್ಚುವಾಗಲೂ ಇರಬೇಕೆಂಬುದೇ ಇದರ ಉದ್ದೇಶವಾಗಿರುತ್ತದೆ. ನಂತರ ಕಾಳಮ್ಮ ವೀರಭದ್ರೇಶ್ವರರಿಗೆ ಮುಹೂರ್ತ ಮಾಡಿಸಿ ಮುತ್ತೈದೆಯರು ಸಾಸೆಯಿಟ್ಟು ಆರತಿ ಮಾಡುತ್ತಾರೆ. ನಂತರ ಶ್ರೀಸ್ವಾಮಿಯನ್ನು ಗರ್ಭ ಗುಡಿಗೆ ಕಳುಹಿಸಿ ಅಂದರೆ ಮದು ಮಕ್ಕಳನ್ನು ದೇವರು ಕೋಣೆಗೆ ಕಳುಹಿಸಿದಂತೆ ಕಳುಹಿಸುತ್ತಾರೆ. ಪುನಃ ಕರೆತಂದು ಪಲ್ಲಕ್ಕಿಯಲ್ಲಿ ಕೂಡ್ರಿಸಿ, ಚಿಕ್ಕ ರಥದಲ್ಲಿ ಉತ್ಸವ ಮೂರ್ತಿಯನ್ನು, ಗುರುಗಳು ಹಾಗೂ ಒಬ್ಬ ಪೂಜಾರಿಯು ಕುಳಿತ ನಂತರ ರಥ ಮುಂದೆ ಸಾಗುತ್ತದೆ. ಬಂದ ಕಳಸದವರೂ ಸಹ ಸಾಮೂಹಿಕವಾಗಿ ಶ್ರೀ ದೊಡ್ಡ ವೀರಭದ್ರೇಶ್ವರ ದೇವಸ್ಥಾನಕ್ಕೆ ಹೋಗಿ ಅಲ್ಲಿ ಮಂಗಳಾರತಿ ಮಾಡಿದ ನಂತರ ಹಿಂದಿರುಗುತ್ತಾರೆ. ಬರುವಾಗ ಎತ್ತರವಾದ ದೀಪಕಂಬದ ಮೇಲೆ ಬಟ್ಟೆಯಿಂದ ತಯಾರಿಸಿದ ಸಿಂಬೆಯ ಮಧ್ಯ ಬತ್ತಿ ಮಾಡಿ ಎಳ್ಳೆಣ್ಣೆಯಲ್ಲಿ ಅದ್ದಿ ದೀಪ ಹಚ್ಚುತ್ತಾರೆ. ನಂತರ ಚಿಕ್ಕದಲ್ಲಿರುವಾಗ ಮಾಂಗಳಾರತಿ ಮಾಡಿ ನಡೆಮಡಿಯ ಹಾಸಿ ಪಲ್ಲಕ್ಕಿಯಲ್ಲಿ ಶ್ರೀ ಸ್ವಾಮಿಯನ್ನು ಕೂಡ್ರಿಸಿ ಜಯ ಕಾರದೊಂದಿಗೆ ''ಶ್ರೀ ವೀರಭದ್ರೇಶ್ವರ ದೊರೆಯೇ ನಿನಗಾರು ಸರಿಯೇ ಸರಿ ಸರಿ ಎಂದವರ ಹಲ್ಲು ಮುರಿಯೇ'' ಎಂದು ಹೇಳುತ್ತಾರೆ. ''ಜಯ್ಯೆ ನಮಃ ಪಾರ್ವತೀ ಸತಿ ಹರ ಹರ ಮಾಹಾದೇವ್'' ಎಂದು ಜಯಕಾರ ಮಾಡುತ್ತಾ ತಾಳಕ್ಕೆತಕ್ಕಂತೆ ಕುಣಿಯುತ್ತಾ ಹರ್ಷೋದ್ಗಾರ ಮಾಡುತ್ತಾ ಹೋಗುತ್ತಾರೆ. ರಾಣ್ಯೇರ ಹೆಣ್ಣು ಮಕ್ಕಳು ಸೋಬಾನದ ಪದಗಳನ್ನು ಹಾಡುತ್ತ ಗುಡಿ ಪ್ರದಕ್ಷಿಣೆ ಮಾಡುತ್ತಾರೆ. ಬಾಗಿಲಿಗೆ ಬಂದಾಗ ಪುನಃ ಶ್ರೀ ವೀರಭದ್ರೇಶ್ವರ ಸ್ವಾಮಿಯ ಎದುರಿಗೆ ನಿಂತು ಮಂಗಳಾರತಿ ಮಾಡಿ ನಡೆ ಮಡಿಯ ಮೇಲೆ ನಡೆದು ರಂಗ ಮಧ್ಯದಲ್ಲಿ ಕೂಡ್ರಿಸಲು ಸಿದ್ಧ ಪಡಿಸಿದ ಮಂದಾ ಹಾಸನದ ಮೇಲೆ ಕೂಡ್ರಿಸುತ್ತಾರೆ. ಏಕಾರತಿಯಿಂದ,ಎರಡಾರತಿಯಿಂದ,ಮೂರಾರತಿಯಿಂದ, ನಾಲ್ಕಾರತಿಯಿಂದ, ಪಂಚಾರತಿಯಿಂದ ಮಾಂಗಳಾರತಿ ಮಾಡುತ್ತಾರೆ. ಮಂಗಳಾರತಿಗಳನ್ನು ಹೇಳುತ್ತಾ ಗಂಟೆ, ಶಂಖ, ಜಾಗಟ, ನಾಗಾರಿ, ಸೌಬತ್ತ, ಸಮೇಳ ವಾಧ್ಯ ಮೊಳಗಿದಾಗ ಆವೇಶ ಭರಿತರಾದ ಭಕ್ತರು ಆರ್ಭಟ ದಿಂದ ಕೆಂಗಣ್ಣಿನಿಂದ ಕೇಕೆ ಹಾಕುತ್ತಾ ಸಿಡಿಲು ಗುಡುಗಿನ ಆರ್ಭಟದಂತೆ ವಡಬು ಹೇಳುತ್ತಾರೆ. ಕಣಕಾಲು ಕುಣಿಸುತ್ತಾ ಹುಬ್ಬು ಹಾರಿಸುತ್ತಾ ಹಾವ ಭಾವ ದೊಂದಿಗೆ ನೋಡಿದ ಜನರು ಮೋಡಿಯಾಗುವಂತೆ ಮಾಡಿರುತ್ತಾರೆ. ಭಕ್ತಿಯ ಭಾವಪರವಶರಾದ ಸಂದರ್ಭದಲ್ಲಿ ಗುಡಿದುಂಬಿಸುತ್ತಾರೆ. ಇಲ್ಲಿಗೆ ಕಂಕಣ ಧಾರಣೆ ಮುಗಿಯುತ್ತದೆ.

ಪ್ರಸಾದ : ತುರಗ ವಾಹನ ಉತ್ಸವು ನೆರವೇರಿದ ನಂತರ ಗಣಾಧೀಶ್ವರರನ್ನು ದ್ವಾರ ಮಂಟಪದಲ್ಲಿಕೂಡ್ರಿಸುತ್ತಾರೆ. ಪಾದೋದಕ ಕಿಯ್ರಾದೀಕ್ಷೆಯನ್ನು ಪಡೆದು ಶ್ರೀ ಸ್ವಾಮಿಯ ವಿವಾಹ ಮಹೋತ್ಸವದ ಸಿಹಿ ಊಟವನ್ನು ಮಾಡುತ್ತಾರೆ. ಭೋಜನವನ್ನು ಶ್ರೀಮತಿ ಶ್ರೀ ಮೊರಬದ ಪುಜಾರ ಮನೆತನದ ಭಾವಿಕಟ್ಟಿ ಶ್ರೀ ಮತಿ ಶ್ರೀ ಸರೋಜಮ್ಮ ಚಿಕ್ಕ ವೀರಪ್ಪ ಮತ್ತು ಮಕ್ಕಳು ಅಂದಿನ ಕಾರ್ಯ ಕ್ರಮದಲ್ಲಿ ಭಾಗವಹಿಸಿದ ಪ್ರತಿಯೊಬ್ಬರಿಗೂ ಉಣ ಬಡಿಸಿ ತಾಂಬೂಲ ಕೊಟ್ಟು ಕಳುಹಿಸುತ್ತಾರೆ. ಈ ಪದ್ಧತಿಯು 2003 ಕ್ಕೆ 9 ನೇ ವರ್ಷಕ್ಕೆ ಪಾದಾರ್ಪಣೆ ಮಾಡಿದಂತಾಗಿದೆ.

ಹಣ, ಕನಕ, ವಸ್ತು ವಾಹನ ಆರೋಗ್ಯ ಭೂಮಿ ಎಲ್ಲಾ ರೀತಿಯಿಂದಲೂ ಉತ್ತಮೋತ್ತಮ ರೀತಿಯಲ್ಲಿ ಕೊಟ್ಟಿರುತ್ತಾನೆ. ಶ್ರೀ ವೀರಭದ್ರೇಶ್ವರ ಊಟ ವಾದ ಮೇಲೆ ಬಂದ ಕಳಸದವರನ್ನು ಶ್ರೀ ಗುರುಗಳನ್ನು ಮೊದಲು ಕರೆತಂದಂತೆ ಅವರವರ ಮನೆಗಳಿಗೆ ಬೀಳ್ಕೊಟ್ಟು ಬರುತ್ತಾರೆ.

ಗಜ ವಾಹನ ಉತ್ಸವ : ಪದ್ದತಿಯಂತೆ ಆಯಗಾರರು ಪ್ರತಿಯೊಬ್ಬರು ಹಾಗೂ ಗ್ರಾಮದ ಭಕ್ತರು ಸಾಯಂಕಾಲ ೮ ಘಂಟೆಯ ಸುಮಾರಿಗೆ ಶ್ರೀ ಸ್ವಾಮಿಯನ್ನು ಆನೆಯ ವಾಹನದ ಮೇಲೆ ಕೂಡ್ರಿಸಿ ಚಿಕ್ಕ ತೇರಿನಲ್ಲಿ ಮುಹೂರ್ತ ಮಾಡಿಸುತ್ತಾರೆ. ದೊಡ್ಡ ವೀರಭದ್ರೇಶ್ವರ ದೇವಸ್ಥಾನಕ್ಕೆ ಹೋಗಿ ಮಂಗಳಾರತಿ ಮಾಡಿ ಹಿಂದಿರುಗಿಬಂದು ದೀಪಾರಾಧನೆ ಗೈದು ಗುಡಿ ಪ್ರದಕ್ಷಿಣೆ ಹಾಕಿ ಆರತಿಮಾಡಿ ಗುಡಿ ದುಂಬಿಸುವರು.

ಬಸವನ ಉತ್ಸವ : ವೃಷಭ ವಾಹನ ಉತ್ಸವವು ಆಚರಣೆಯಲ್ಲಿ ಅತೀ ಪವಿತ್ರವಾದ ದಿನ ವೆಂದರೆ ತಪ್ಪಾಗಲಾರದು. ಭಕ್ತರಿಗೆ ದಯದಿಂದ ಭಕ್ತಿಯಿಂದ ನಡೆಯುವ ದಿನವಿದು. ಬಸವನ ಉತ್ಸವದ ದಿನದಂದು ಭಕ್ತಿಯಿಂದ ಮಡಿನೀರು ಮುಡಿಗೆರದುಕೊಂಡು ಮಡಿಯಿಂದ ಅಡಿಗೆ ಮಾಡಿ ಗುರುಗಳನ್ನು ಕರೆತಂದು ಪ್ರತಿ ವೀರಶೈವರ ಮನೆಯಲ್ಲೂ ಪಾದೋದಕ ತೀರ್ಥ ಪ್ರಸಾದಗಳಾಗಿ ಶ್ರೀ ವೀರಭದ್ರೇಶ್ವರ ಮೂರ್ತಿ ಹಲಗೆಯಿದ್ದವರು ಕ್ರಿಯಾಗೊಟ್ಟು ಹೊಸ ಬಟ್ಟೆ ರುಮಾಲು ಧರಿಸಿಕೊಂಡು ತಯಾರಾಗಿರುತ್ತಾರೆ.

ಇದೇ ದಿನವೇ ಗ್ರಾಮದೇವರ ಗುಡಿಗಳಲ್ಲಿ ರಾಜ ಬೀದಿಗಳಲ್ಲಿ ಯುವಕ ವೃಂದ, ವಾಧ್ಯ ವೃಂದ, ಉತ್ಸಾಹಿ ತರುಣ ಬಳಗ, ಸಮೇಳ, ನಂದಿ ಧ್ವಜ ಭಜನಾ ಸಂಘದವರು ಒಟ್ಟಾಗಿ ಸೇರಿ ಭಕ್ತಿಯ ಕಾಣಿಕೆಯಾಗಿ ಕೊಟ್ಟ ದೇಣಿಗೆಯಿಂದ, ಹಣ ಸಂಗ್ರಹವಾದ ಲೆಕ್ಕಾಚಾರದಂತೆ 5000, ದಿಂದ 2,5000 ದೀಪೋತ್ಸವದ ಕಾರ್ಯವನ್ನು ಹಮ್ಮಿಕೊಳ್ಳುತ್ತಾರೆ. ವೈಭವ ಪೂರ್ಣವಾಗಿ 3ದಿನ ತಮ್ಮ ಮನೆ ಕೆಲಸವನ್ನು ತೊರೆದು ಅವಿರತವಾಗಿ ಶ್ರಮಿಸಿ ''ಶ್ರೀ ವೀರಭದ್ರೇಶ್ವರ ನಿಮ್ಮಿಂದ ನಾವು ನಿಮಗಾಗಿ ನಾವು'' ಎನ್ನುವಂತೆ ರಥೋತ್ಸವವಾಗುವರೆಗೂ ಕಂಕಣಧಾರಣೆಯಾದಾಗಿನಿಂದ ಕಂಕಣಬಿಚ್ಚು ವವರೆವಿಗೂ ಕಂಕಣ ಬದ್ಧರಾಗಿ ನಿಂತು ಕೆಲಸ ಮಾಡುವರು. ಉತ್ಸಾಹಿ ತರುಣರ ಬೆಂಗಾವಲಿಗೆ ಮಾರ್ಗದರ್ಶಕರಾದ ಹಿರಿಯರೂ ನಿಂತು ಕಾರ್ಯ ಮಾಡುತ್ತಾ ಬಂದಿರುತ್ತಾರೆ.

ಬಸವನ ಉತ್ಸವದ ದಿನದಂದು ದೂರದಿಂದ ಬರುವ ಭಕ್ತರು ಕಾಲ್ನಡಿಗೆಯಿಂದ ನಡೆದು ಬರುತ್ತಾರೆ. ಗಾಡಿಯಲ್ಲಿ ಬರುವವರೂ, ತಾಳಿ ಮಾಡುವವರು, ತಮ್ಮ ಸ್ಥಳವನ್ನು ತಮ್ಮದಾಗಿರಿಸಿ ಕೊಳ್ಳಲು ಮೊದಲೇ ಬರುತ್ತಾರೆ. ದಾವಣಗೆರೆ, ಆಂಧ್ರ, ಕೊಪ್ಪಳ, ಚಿತ್ರದುರ್ಗ, ಗದಗ, ಧಾರವಾಡ ಇನ್ನೂ ಅನೇಕ ಕಡೆಗಳಿಂದ ಬರುವವರೂ ಮೊದಲೇ ಬರುತ್ತಾರೆ. ಈ ರೀತಿಯಾಗಿ ಜನರು ಕುದುರೆಯ ಪೂಜೆಯನ್ನು ಕಟ್ಟುವುದಕ್ಕಿಂತ ಮುಂಚೆಯೇ ಬಂದು ತಮ್ಮ ಹರಕೆಯಂತೆ ಅಭಿಷೇಕ ಮಾಡಿಸುವುದುಂಟು.

ಗ್ರಾಮದಲ್ಲಿ ಸಂಭ್ರಮವೇ ಸಂಭ್ರಮ. ಕೇರಿಕೇರಿಯ ರಾಜ ಬೀದಿಗಳಲ್ಲಿ ಶೃಂಗಾರ ಭರಿತವಾದ ರಂಗುರಂಗಿನ ತೋರಣ ವಿಧವಿಧವಾದ ರಂಗೋಲಿಗಳನ್ನು ಬೀದಿಗಳಿಗೆ ಥಳೇಗೊಟ್ಟು ಹಾಕುತ್ತಾರೆ. ಸಾಯಂಕಾಲವಾದಂತೆ ತಮ್ಮ ಮನೆಗಳಿಗೆ ಬಿನ್ನಕ್ಕಿ ಗುರುಗಳನ್ನು ಕರೆದುಕೊಂಡು ಹೋಗುತ್ತಾರೆ. ಸ್ವಚ್ಛತೆ ಯಿಂದ ನಿತ್ಯ ನೇಮದಿಂದ ಮಡಿಯಿಂದ ಮಾಡಿದ ಅಡುಗೆಯನ್ನು ಎಡೆಮಾಡಿ ಶ್ರೀ ವೀರಭದ್ರೇಶ್ವರನಿಗೆ ಎಡೆಕಾಯಿ,ಕರ್ಪೂರ ಮಾಡಿಸುತ್ತಾರೆ. ಈ ರೀತಿ ಸರ್ವರ ಮನೆಯಿಂದ ಎಡೆ ತೆಗೆದುಕೊಂಡು ಹೋಗುವ ಕಾರ್ಯ ಮುಗಿಯುವುದರೊಳಗೆ ಸಂಜೆ ದೀಪೋತ್ಸವವು ಆರಂಭವಾಗುವುದು. ಒಬ್ಬ ಶಿವಯೋಗಿಯಿಂದ ದೀಪ ಬೆಳಗಿಸಿ, ನಂತರ ಸರ್ವ ಭಕ್ತರು ಸೇರಿ ಒಂದೇ ಸಾರಿ ದೀಪಬೆಳಗಿಸುತ್ತಾರೆ. ಹರಕೆ ಹೊತ್ತವರು ಆಗ ತಮ್ಮ ಮನೆಯಿಂದ ಎಣ್ಣೆ ಬತ್ತಿಗಳನ್ನು ತಂದು ತಾವೇ ದೀಪ ಹಚ್ಚುತ್ತಾರೆ. ಆಗ ನೋಡಿದರೆ ಹಿಂದೆ 'ವಿಕ್ರಮನು ಕಷ್ಟ ಕಾಲದಲ್ಲಿ ತೇಲಿ ಶೆಟ್ಟಿಯ ಮನೆಯ ಗಾಣದ ಮೇಲೆ ಕುಳಿತು ತನ್ನ ಮೊಂಡ ಕೈಯಿಂದ ಗಾಣದ ಎತ್ತನ್ನು ಹೊಡೆಯುವಾಗ ತನಗರಿವಾಗದಂತೆ ಒಂದು ರಾಗ ದೀಪ ಕಲಿಯಾರ ರಾಗವನ್ನು ಹಾಡಿದಾಗ ದೀಪ ಬೆಳಗಿದಂತೆ'. ಬೀದಿ ಬೀದಿಗಳಲ್ಲಿ ಗುಡಿ ಗೋಪುರಗಳ ಮೇಲೆ ಮಂಟಪ ಮಂದಿರಗಳ ಮೇಲೆ ಬೆಳಗುವ ದೀಪದ ಪ್ರಕಾಶವನ್ನು ನೋಡುವ ಜನರು ಬಹುಸಂಖ್ಯೆ ಯಲ್ಲಿ ಸೇರುತ್ತಾರೆ. ಹೆಚ್ಚಾಗಿ ಕೂಡ್ಲಿಗಿಯ ಭಕ್ತರು ಕುಟುಂಬ ಸಮೇತರಾಗಿ ಟೆಂಪೋ, ಟ್ರ್ಯಾಕ್ಟರ್ ಬಸ್, ಗಾಡಿಗಳ ಮೇಲೆ ಸ್ಪೆಷಲ್ ಬಸ್ಸುಗಳ ಮೇಲೆ ಬಂದು ನೋಡಿಕೊಂಡು ಹೋಗುತ್ತಾರೆ.

ರಾತ್ರಿ ೧೦ಗಂಟೆಯ ಸುಮಾರಿಗೆ ಭಕ್ತರ ಎಡೆಯಾದ ನಂತರ ಪಕ್ಕದ ಊರುಗಳಿಂದ ಶ್ರೀ ವೀರಭದ್ರೇಶ್ವರನ ಹಲಗೆಯಿದ್ದವರು ತಮ್ಮ ಹಲಗೆ ಶ್ರೀ ವೀರಭದ್ರೇಶ್ವರ ಮೂರ್ತಿಯನ್ನು ಕರೆ ತರುತ್ತಾರೆ. ಈ ರೀತಿಯಾಗಿ ಬರುವುದರಲ್ಲಿ ಸಾಸಲವಾಡದಿಂದ, ಶಿವಪುರದಿಂದ, ಅಮ್ಮನಕೇರಿಯಿಂದ, ಚೌಡಾಪುರದಿಂದ, ಮಲ್ಲಾಪುರದಿಂದ ಬರುವ ಭಕ್ತರಿದ್ದಾರೆ. ಸಮೇಳ, ನಂದೀಧ್ವಜ ತರುವವರೂ ತರುತ್ತಾರೆ. ಈ ರೀತಿ ತಂದು, ಬಂದ ಭಕ್ತರು ಶ್ರೀ ವೀರಭದ್ರೇಶ್ವರ ಗುಡಿಯಲ್ಲಿ ಇಟ್ಟಿರುತ್ತಾರೆ. ತದನಂತರ ಗ್ರಾಮದ ಬಣಕಾರನು ಆಯಗಾರರನ್ನು ಕರೆದುಕೊಂಡು ಸರ್ವ ಭಕ್ತರೊಡಗೂಡಿ ಶ್ರೀ ದುರ್ಗಾಂಬಿಕೆಯ (ಊರ ಮಧ್ಯೆ ಇರುವಲ್ಲಿ) ಬಂದು ಒಂದು ಸಾರಿ ಸಹನಾಯ್ ವಾದ್ಯ ಸಮೇಳ, ನಂದೀಧ್ವಜ ಕುಣಿಸಿದರೆಂದರೆ ಕರೆಯಲು ಬರುತ್ತಾರೆಂದು ತಿಳಿದು ಎಲ್ಲರೂ ತಮ್ಮ ತಮ್ಮ ಮನೆಗಳಲ್ಲಿ ತಯಾರಿಯಲ್ಲಿರುತ್ತಾರೆ.

ಮೊದಲು ಮಡದಯ್ಯನವರನ್ನು ಕರೆದುಕೊಂಡು ಬರುತ್ತಾರೆ. ಎಲ್ಲರೂ ಸೇರಿ ದುರ್ಗಾಂಬಿಕೆಗೆ ಮಂಗಳಾರತಿ ಮಾಡುತ್ತಾರೆ. ಮುನ್ನಡೆದು ಶ್ರೀ ವೀರಭದ್ರೇಶ್ವರ ದೇವಸ್ಥಾನಕ್ಕೆ ಬಂದು. ಸಣ್ಣ ವೀರಣ್ಣನ ಗುಡಿಗೆ ಬಂದು, ಅಲ್ಲಿ ವಡಬು ಹೇಳುತ್ತಾರೆ. ಆಶೀರ್ವಾದ ಪಡೆದು ಗುಡಿಯಲ್ಲಿ ಪಾದೋದಕ ಮಾಡಿಕೊಂಡು ಬರುತ್ತಾರೆ. ಭಕ್ತರು ತಂದಿರುವ ಹಲಗೆಗಳನ್ನು ಧರಿಸಿಕೊಂಡು ಹೊರಡುವಾಗ ಕೊಳಚಿಯ ಭಕ್ತನು ಕ್ರಮವಾದ ರೀತಿಯಲ್ಲಿ ಆರ್ಭಟದಿಂದ ನುಡಿದ

ವಡಬನ್ನು ಕೇಳಲು ಜನ ಸ್ಥಬ್ದರಾಗಿ ಆಲಿಸುತ್ತಾರೆ. ಈ ರೀತಿಯಾಗಿ ಹೊರಡುವ ಹೊತ್ತಿಗೆ ಸಮಯ ಹನ್ನೊಂದು ಗಂಟೆಯಾಗಬಹುದು. ಮುಂದೆ ಸಾಗುತ್ತಾ ಬರುವ ಭಕ್ತರ ಮನೆಯನ್ನು ಪ್ರವೇಶಿಸುವಾಗ ಸಮೇಳದ ಮುಂದೆ ಗುರುಗಳು, ಇವರ ಹಿಂದೆ ಬರುವ ಭಕ್ತರಿಗೆ ಕಾಲಿಗೆ ನೀರು ಹಾಕಲು ಒಬ್ಬ ಮುಂದಿರುತ್ತಾನೆ. ಬಾಗಿಲಲ್ಲಿ ನೀರು ಹಾಕಿದ ನಂತರ ಗುರುಗಳು ಮುಂದೆ ನಡೆಯುತ್ತಾರೆ. ಒಳಗೆ ಹೋದ ಮೇಲೆ ಗುರುಪಾದೋದಕ ಮಾಡಿಕೊಂಡು ಪೋಷಿಸಿಕೊಂಡು ಕಳಸ ಬೆಳಗುತ್ತಾರೆ. ಕಾಯಿ ಕರ್ಪೂರ ಮಾಡಿ ವಡಬಿನೊಂದಿಗೆ ಶ್ರೀ ವೀರಭದ್ರೇಶ್ವರನನ್ನು ಹೊರಡಿಸುತ್ತಾರೆ. ಈ ರೀತಿಯಲ್ಲಿ ಪ್ರತಿ ಮನೆಯಲ್ಲೂ ಮುಂದುವರಿದ ಕಾರ್ಯಕ್ರಮವು ಹಲಗೆಗಳನ್ನು ಹೊರಡಿಸುತ್ತಾರೆ. ಪೂಜಾರ ಬಳಗದ ಮನೆಯ ಪೂಜಾರ ಕುಂಟೀರಪ್ಪನವರ ಕೊಟ್ರಪ್ಪ, ದೊಡ್ಮನೆ ವೀರಣ್ಣಗೌಡ, ಬಡಿಗೇರ ಬಸಣ್ಣ ಹೊರಗಳ ವೀರಣ್ಣ, ಪೂಜಾರ ಮುಪ್ಪಿನಪ್ಪ, ದೊಡ್ಮನೆ ತಿಪ್ಪೇರುದ್ರಗೌಡ, ಹನಸೀ ವೀರನಗೌಡ ಮನೆ, ಶಸ್ತ್ರ ಹೊರಗಳ ಮನೆ ರಾಜಗೌಡನ ಮನೆ, ನಂತರ ಊರ ಬಾಗಿಲಿನಲ್ಲಿ ಹಾಯ್ದು ದುರ್ಗಾಂಬಿಕೆಯ ದೇವಸ್ಥಾನದ ಮುಂದಿನಿಂದ ಹೊರಡುತ್ತಾರೆ. ಊರಗೌಡರಾದ ಲಿಂಗನಗೌಡರ ಮನೆಯಿಂದ, ಗೌಡ್ರಸಿದ್ಧಪ್ಪನವರ ಮನೆಯಿಂದ ಹೊರಡಿಸಿಕೊಂಡು, ಪ್ರತಿ ಮನೆಯಿಂದಲೂ ಹಲಗೆಗೆ ಒಬ್ಬೊಬ್ಬರಂತೆ ಒಂದೊಂದು ಕಳಶ ತೆಗೆದುಕೊಂಡು ಬರುತ್ತಾರೆ.

ಈ ರೀತಿಯಾಗಿ ಕೋಟೆಯೊಳಗಿರುವ ಮೇಲ್ಮನೆಯಲ್ಲಿ ಅಂದರೆ ವೀರಣ್ಣನೆಂಬುವರ ಮನೆಯಿಂದ ಶಸ್ತ್ರಗಳನ್ನು ಹೊರಡಿಸಿಕೊಂಡು ಬರುತ್ತಾರೆ. ಊರ ದೇವರ ಸಾಮಾನುಗಳನ್ನು ಇಡುವ ಭಾವೀಕಟ್ಟಿ ಭದ್ರಪ್ಪನವರ ಮನೆಯ ಮುಂದೆ ಮೆರವಣಿಗೆ ಮಾಡುತ್ತಾ ಅಲ್ಲಿಯೇ ಪ್ರಥಮವಾಗಿ ಕಳಶ ಹಿಡಿದ ಹೆಣ್ಣು ಮಕ್ಕಳಿಗೆ ಶಸ್ತ್ರ ಧರಿಸುತ್ತಾರೆ. ಈ ಕಾರ್ಯವನ್ನು ಹಿಂದೆ ಕೂಡ್ಲಿಗಿ ಶರಬಜು ಮಾಡುತ್ತಿದ್ದರು. ಆದರೆ ಈಗ ಮೊರಬದ ಮಾತಂಗದ ವೀರಭದ್ರಪ್ಪ, ದೊಡ್ಮನೆ ವೀರಣ್ಣ, ಮಾತಂಗದ ಹೊನ್ನ ಮಹೇಶ್ ನಡೆಸಿಕೊಂಡು ಬರುತ್ತಾರೆ. ಈ ಸಮಯದಲ್ಲಿ ಬಿಚ್ಚು ಪುರವಂತರದವರು ವೀರಗಾಸೆ ಧರಿಸಿದವರು ಶಸ್ತ ಹಾಕಿಸಿಕೊಳ್ಳುವವರು, ೧೦೦ ಗಂಟಿನ ದಾರ ಎಳೆಯುವವರು, ಬಾಯಿ ಬೀಗ ಹಾಕಿಸಿಕೊಳ್ಳುವರು ಅನೇಕರಿರುತ್ತಾರೆ. ಆಗ ಹಾಕಿದ ಶಸ್ತ್ರ ತೆಗೆದ ಕೂಡಲೇ ಗುರುಗಳು ತೀರ್ಥ ಪಾದೋದಕ ಕೊಡುತ್ತಾರೆ. ಸ್ವಹಸ್ತದಿಂದ ಇನ್ನೊಬ್ಬ ಗುರುಮೂರ್ತಿಯೂ ಭಸ್ಮ ಧರಿಸುತ್ತಾರೆ. ಆ ಸಂದರ್ಭದಲ್ಲಿ ಆವೇಶದಿಂದ ಸಮೇಳದ ಶಬ್ಧದಿಂದ ವಡಬಿನ ಆರ್ಭಟದಿಂದ ಮೂರ್ಛೆ ಬಂದರೆ ಪಾದೋದಕವೇ ಮುಖ್ಯ. ಅಷ್ಟೇ ಪವಿತ್ರವೆಂದೂ, ಯಾರಿಗೂ ಯಾವ ತೊಂದರೆಯೂ ಆಗುವುದಿಲ್ಲ.

ಬಿಡುವಿಲ್ಲದೆ ನಡೆಯುವ ಈ ಕಾರ್ಯವು ಸುಮಾರು ಎರಡು ಗಂಟೆಯವರೆಗೆ ಮುಂದುವರಿಯುತ್ತದೆ. ಆಗ ಚಳಿಗಾಲವಾದ್ದರಿಂದ ಕೊರೆಯುವ ಛಳಿಯಿದ್ದರೂ ಮೈ ಮರೆತು ನಿಂತಿರುತ್ತಾರೆ. ಜನಸ್ತೋಮದ ಮಧ್ಯ ಮಧ್ಯ ವಡಬಿನಾರ್ಭಟ, ಭಕ್ತರ ಕುಣಿದಾಟ, ಕಳಶ ಕನ್ನಡಿ ಹಿಡಿದ ಹೆಂಗಳೆಯ ನೋಟ, ಹಲಗೆ ಧರಿಸಿದವರ ಕೋಟದ ಈ ಕಣ್ಣಿಗೆ ಮುದ ನೀಡುವ ನೋಟ

ಬಹು ಸುಂದರವಾಗಿರುತ್ತದೆ. ಅಷ್ಟೇ ಭಯ ಭಕ್ತಿಯಿಂದಿರುತ್ತದೆ. ಆ ಸಮಯಕ್ಕೆ ಸರಿಯಾಗಿ ಹೆಚ್ಚಿನ ಸ್ಫೂರ್ತಿ ತುಂಬುವಂತೆ ಪ್ರಶಸ್ತಿ ವಿಜೇತ ಛಲವಾದಿ ಚೌಡಪ್ಪ ಸಹೋದರರ ಶಹನಾಯಿ ಇರುತ್ತದೆ. ವೀರಪ್ಪ ಮತ್ತು ಮಕ್ಕಳು ತೋರಿಸುವ ರಾಗ ರಂಜಿತವಾಗಿ ಪ್ರತಿಯೊಬ್ಬರೂ ತಲೆದೂಗಿ ಕಾಲು ಕುಣಿಸುತ್ತಾ ತಮಗೆ ತಾವರಿಯದೇ ಕುಣಿಯುವುದುಂಟು. ಇದನ್ನು ನೋಡಿದ ಭಕ್ತರು ನಕ್ಕು ನಲಿಯುತ್ತಾ ನಿದ್ರಾದೇವಿಯ ಪರವಶರಾಗಿರುವುದಿಲ್ಲ.

ಸುಮಾರು ೪ಗಂಟೆಯವರೆಗೆ ಊರ ಗ್ರಾಮ ದೇವತೆಯ ಗುಡಿಯ ಮುಂಭಾಗದಲ್ಲಿ ಮೆರವಣಿಗೆ ಮಾಡುತ್ತಾ ಮುಂದೆ ಸಾಗುತ್ತದೆ. ಆ ಸಮಯಕ್ಕೆ ವಾದ್ಯದವರಿಗೆ ಸ್ವಲ್ಪ ವಿರಾಮ. ಆ ಸಮಯದಲ್ಲಿ ಹರಪನಹಳ್ಳಿ, ಹೊಸಪೇಟೆ, ಕೊಳಚಿ, ಕೊಟ್ಟೂರಿನಿಂದ ಬಂದ ಭಕ್ತರು ಹೇಳುವ ವಡಬು ಅಷ್ಟೇ ಅರ್ಥ ಗರ್ಭಿತವಾಗಿರುತ್ತದೆ. ಕೇಳಲು ಕಿವಿಗಿಂಪು. ಭಕ್ತಿಯ ಸೊಂಪು ಸೇರಿರುವ ಜನರ ಗುಂಪು. ನಂತರ ವಾದ್ಯ ಮೊಳಗುತ್ತಾ ಮುಂದೆ ಸಾಗುತ್ತಾ ಊರ ಬಾಗಿಲು ದಾಟಿ ಬಂದು ಬಯಲಿನಲ್ಲಿ ನಿಂತಾಗ ವಡಬು ಹೇಳುತ್ತಾ ಕುಣಿಯುತ್ತಾರೆ. ಮುನ್ನಡೆದು ೫ ಗಂಟೆಯ ಸುಮಾರಿಗೆ ಶ್ರೀ ದೊಡ್ಡ ವೀರಭದ್ರೇಶ್ವರ ಸ್ವಾಮಿಯ ಗುಡಿಯ ಮುಂದೆ ನಿಂತಾಗ ಜನ ಎರಡು ಭಾಗವಾಗಿ ನಿಲ್ಲುತ್ತದೆ. ಶ್ರೀ ವೀರಭದ್ರೇಶ್ವರ ಕಾಣುವಂತೆ ಇಕ್ಕೆಲಗಳಲ್ಲಿ ನಿಲ್ಲುತ್ತಾರೆ. ಆಗ ಶಸ್ತ್ರ ಧರಿಸಿಕೊಳ್ಳುವವರೂ, ವೃದ್ಧರೂ, ಮಕ್ಕಳೂ, ಹೆಣ್ಣುಮಕ್ಕಳೂ ಹೆಚ್ಚಿಗೆ ಸೇರುತ್ತಾರೆ. ಈ ರೀತಿಯಾಗಿ ಮುಂದುವರಿದ ಕಾರ್ಯಕ್ರಮವು, ೬ ಗಂಟೆಯ ಸುಮಾರಿಗೆ ಸಣ್ಣ ವೀರಭದ್ರೇಶ್ವರ ದೇವಸ್ಥಾನಕ್ಕೆ ಬಂದು ಅಲ್ಲಿ ಹಲಗೆ ವಿಸರ್ಜಿಸುತ್ತಾರೆ. ಶ್ರೀ ವೀರಭದ್ರೇಶ್ವರ ಸ್ವಾಮಿಯನ್ನು ಉತ್ಸವ ಮೂರ್ತಿಯನ್ನು ಹೊರಡಿಸಿಕೊಂಡು ಸಣ್ಣ ತೇರಿನಲ್ಲಿ ಕೂಡಿಸುತ್ತಾರೆ. ಶ್ರೀ ದೊಡ್ಡ ವೀರಭದ್ರೇಶ್ವರ ದೇವಸ್ಥಾನಕ್ಕೆ ಬಂದು (ತೇರು ಎಳೆತಂದು) ಮಂಗಳಾರತಿ ಮಾಡಿ, ಹಿಂದಿರುಗಿ ಬಂದು ಅಲ್ಲಿ ಹಲಗೆ ವಿಸರ್ಜಿಸುತ್ತಾರೆ. ಶ್ರೀ ವೀರಭದ್ರೇಶ್ವರ ಸ್ವಾಮಿಯ ಉತ್ಸವ ಮೂರ್ತಿಯನ್ನು ಹೊರಡಿಸಿಕೊಂಡು ಸಣ್ಣ ತೇರಿನಲ್ಲಿ ಕೂಡಿಸುತ್ತಾರೆ. ಶ್ರೀ ದೊಡ್ಡ ವೀರಭದ್ರೇಶ್ವರ ದೇವಸ್ಥಾನಕ್ಕೆ ಬಂದು (ತೇರು ಎಳೆತಂದು) ಮಂಗಳಾರತಿ ಮಾಡುತ್ತಾರೆ. ಹಿಂದಿರುಗಿ ಬಂದು ಅಂದು ಕಲ್ಲು ಕಂಬದ ಮೇಲೆ ದೀಪಾರಾಧನೆ ಮಾಡುತ್ತಾರೆ. ಶ್ರೀ ಸ್ವಾಮಿಯನ್ನು ಎಲ್ಲಾ ಭಕ್ತರೊಡಗೂಡಿ, ಗುಡಿದುಂಬಿಸಿ, ಅವರವರ ಮನೆಗಳಿಗೆ ಮೊದಲು ಕರೆತಂದ ರೀತಿಯಲ್ಲಿ ಕಳುಹಿಸಿ ಬರುತ್ತಾರೆ. ಇದಕ್ಕೂ ಮುಂಚೆ ದೇವಸ್ಥಾನದ ಪೂಜಾರರು ಬಾಬುದಾರರಿಗೆ ಹಣ್ಣು-ಹೂ, ಪ್ರಸಾದ ಕೊಡುವ ಪದ್ಧತಿ ಇದೆ. ಇದು ಗೌರವಾರ್ಥವಾಗಿ ಗ್ರಾಮದ ಗುರುಗಳು, ಗೌಡರು, ಶೆಟ್ಟರು, ಶಾನಭೋಗರು, ಬಣಕಾರ, ಮಡಿವಾಳ, ಬಾರಿಕಿ, ತಳವಾರ, ರಾಣ್ಯದವರಿಗೆ, ಯಾದವರಿಗೆ, ಹರಿಜನರಿಗೆ, ಚಲವಾದಿ ಹಾಗೂ ಬಂದಿರುವ ಹಲಕೆಲವು ಹಿರಿಯರಿಗೆ ಕೊಡುವರು. ಈ ರೀತಿ ಮುಗಿಯುವುದರೊಳಗೆ ೯ಗಂಟೆ ಆಗಿರುತ್ತದೆ. ಆಗಾಗಲೇ ಭಕ್ತರು ಭಕ್ತಿಯ ಎಡೆ ಮಾಡಿಸಲು ಅಣಿಯಾಗುತ್ತಾರೆ.

ಭಕ್ತರು ಭಕ್ತಿಯಿಂದ ಮಡಿಯಿಂದ ಮಾಡಿದ ಅಡಿಗೆಯನ್ನು ಎಡೆ ಮಾಡಲು ಗಣಂಗಳನ್ನು ತಮ್ಮ ತಮ್ಮ ಮನೆಗಳಿಗೆ ಕರೆದೊಯ್ದು ಉಣ ಬಡಿಸಿ ಎಡೆ ಮಾಡುತ್ತಾರೆ. ತರುವಾಯ ಗಣಂಗಳ ಪ್ರಸಾದವಾದ ಮೇಲೆ ಊಟ ಮಾಡುತ್ತಾರೆ. ಕೆಲವು ಭಕ್ತರು ತೇರಿನ ದಿನ ಬೆಳಿಗ್ಗೆ ಸ್ನಾನ ಮಾಡಿದವರು ಹಾಗೆಯೇ ಉಪವಾಸವಿದ್ದು, ತೇರು ಸಾಗಿದ ನಂತರ ಊಟ ಮಾಡುವುದುಂಟು. ಯಾವ ರಥೋತ್ಸವ ಜರುಗಿದರೂ ಎಲ್ಲಾ ಕಡೆಯೂ ಈ ರೀತಿಯ ರೂಢಿಯ ವಾಡಿಕೆಯಾಗಿ ಬಿಟ್ಟಿದೆ.

೧೨ಗಂಟೆಯಿಂದಲೇ ಒಪ್ಪತ್ತಿನಿಂದ ಭಕ್ತರು ತೇರಿನ ಗಾಲಿಗೆ ನೀರಿನಿಂದ ಮಜ್ಜನ ಮಾಡಿಸುತ್ತಾರೆ. ತರುವಾಯ ತೇರಿಗೆ ಶೃಂಗಾರವಾಗಲೆಂದು ಭಕ್ತರು ತಮ್ಮ ತೋಟದಿಂದ ಬೆಳೆದ ಬಾಳೆಗೊನೆ, ಬಾಳೆಕಂಬ, ತೆಂಗಿನಕಾಯಿ, ತೊಟ್ಟ (ಗುಚ್ಛ) ಹಾಗೂ ಹುಲುವಾಗಿ ಬೀಗಿ ಬೆಳೆದ ಕಬ್ಬು ಕಟ್ಟುವುದುಂಟು. ಅಲ್ಲದೆ ಯುವಕರು ತಮ್ಮ ಭಕ್ತಿಯ ಕಾಣಿಕೆಯಾಗಿ ದೊಡ್ಡದಾದ ಹೂವಿನಹಾರಗಳು ಹೂವಿನಿಂದ ಅಲಂಕರಿಸಿ ತಳಿರು ತೋರಣ ಕಟ್ಟುತ್ತಾರೆ. ಹೆಚ್ಚಿನ ಶೃಂಗಾರ ಮಾಡುತ್ತಾರೆ.

ಕಾರ್ಯಕ್ರಮದಂತೆ ಊರಗೌಡರ ಮನೆಯವರು ಬಲಿಯನ್ನು ಮಾಡಿದಾಗ ವಾದ್ಯದವರೊಡ ಗೂಡಿ, ಕಳಸ ಕನ್ನಡಿ ಹಿಡಿದು ತರುತ್ತಾರೆ. ಈ ಬಲಿಯನ್ನು ಒಂದು ಹೊಸ ಗಡಿಗೆಯನ್ನು ತಂದು, ಅದಕ್ಕೆ ಹೊಸದಾಗಿ ತಂದು ನೀರೆರೆದುಕೊಂಡು, ಹೊಸ ನೀರಿನಿಂದ ಅಕ್ಕಿ ತೊಳೆದು, ಭಯ-ಭಕ್ತಿಯಿಂದ ಎಡೆ ಮಾಡುತ್ತಾರೆ. ಗಡಿಗೆ ಇಳಿಸಿದ ಮೇಲೆ ಪೂಜಿಸಿ, ಎರಡು ಅಗ್ರದ ಬಾಳೆ ಎಲೆ ಕಂಬಳಿ ಕಳಸ ತೆಗೆದುಕೊಂಡು ಹೋಗುತ್ತಾರೆ. ಇದಕ್ಕೂ ಮುಂಚೆಯೇ ಕೇರಿಯ ಹರಿಜನರು ಹೊಸ ಗಡಿಗೆಯನ್ನು ಹಿಡಿದು, ತಮ್ಮದೇ ಆದ ಹಲಗೆ ವಾದನದೊಂದಿಗೆ ಪ್ರಮುಖವಾದ ಮನೆಮನೆಗೆ ಹೋಗಿ, ಎಣ್ಣೆ ತರುತ್ತಾರೆ. ತಂದ ಎಣ್ಣೆಯನ್ನು ಇವರು ನಾಲ್ಕು ಗಾಲಿಗಳಿಗೂ ಹಚ್ಚುತ್ತಾರೆ. ಮರದಿಂದ ಸನ್ನೆಗೊಟ್ಟು ಎಣ್ಣೆ ಬೀರುತ್ತಾರೆ. ಆಗ ಅಚ್ಚುಗಳಿಗೆ ಗ್ರೀಸ್ ಮತ್ತು ಎಣ್ಣೆ ಎರೆದು ಸುಲಭವಾಗಿ ಗಾಲಿ ತಿರುಗುವಂತೆ ಮಾಡುತ್ತಾರೆ.

ತಂದ ಬಲಿಯನ್ನು ಇಟ್ಟು ಪೂಜಿಸಿ, ನಾಲ್ಕು ಗಾಲಿಗೂ ನಾಲ್ಕು ಹುಂಡಿ ಮಧ್ಯ ಒಂದು ಹುಂಡಿಯನ್ನಿಟ್ಟು ಪೂಜಿಸಿ, ಅವರರವರು ಪಕ್ಕಕ್ಕೆ ಸರಿದು ಜಯ ಘೋಷ ಮಾಡುತ್ತಾ ಬಲಿ ಅನ್ನವನ್ನು ಎಂಟು ದಿಕ್ಕುಗಳಿಗೂ ಚಲ್ಲಿ ಎರಚುತ್ತಾರೆ. ಇಲ್ಲಿಗೆ ಸುಮಾರು ೪ಗಂಟೆಯಾಗುತ್ತದೆ.

ಗುರುಗಳ ಸಮೇತ ಹಿಂದಿನ ವರ್ಷ ಹರಾಜು ಮಾಡಿದ ಪಟವನ್ನು ತಂದವರು ಪಟಹಿಡಿದು, ಈ ವರ್ಷ ಹರಾಜು ಮಾಡುವ ಹೊಸ ಪಟದೊಂದಿಗೆ ಶ್ರೀ ವೀರಭದ್ರೇಶ್ವರ ಗುಡಿಗೆ ಹೋಗುತ್ತಾರೆ. ಅಷ್ಟೊತ್ತಿಗೆ ಪಂಚ ಕಲಶ, ಸಿಂಹದ ಮುಖ ಒಳಗಡೆ ವಿಧವಿಧವಾದ ಗೊಂಡೆಗಳು ರಾಜಗೊಂಡೆಗಳನ್ನು ಕಟ್ಟಿ ಹೂವಿನಿಂದ ಹೂವಿನ ಹಾರಗಳಿಂದ ಶೃಂಗರಿಸಲ್ಪಟ್ಟಿರುತ್ತಾರೆ. ಪಲ್ಲಕ್ಕಿಯಲ್ಲಿ ಶ್ರೀ ವೀರಭದ್ರೇಶ್ವರ ಉತ್ಸವ ಮೂರ್ತಿಯನ್ನು ಮುಹೂರ್ತ ಮಾಡಿಸಿ, ಜಯಘೋಷ ಮಾಡುತ್ತಾ ತೇರಿನ

ಸಮೀಪ ಬಂದು, ಮೂರು ಸುತ್ತು ಪ್ರದಕ್ಷಿಣೆ ಮಾಡಿ, ನಂತರ ಏಣಿ ಹಾಕುತ್ತಾರೆ. ಏಣಿಯ ಮೂಲಕ ಆಯಾ ವಂತಿನ ಪೂಜಾರರು ಶ್ರೀ ಸ್ವಾಮಿಯ ಮೂರ್ತಿಯನ್ನು ಹೊತ್ತು ಹತ್ತುತ್ತಾರೆ. ತೇರಿನಲ್ಲಿ ಸ್ವಾಮಿ ಮುಹೂರ್ತ ಮಾಡಿಸುತ್ತಾರೆ. ಆಗ ಬಣಕಾರ ಕಂಬಳಿ ಹಾಸುತ್ತಾನೆ. ಹಿಂದಿನ ವರ್ಷ ಪಟ ಹರಾಜು ಮಾಡಿಕೊಂಡವರು ಪಟ ಹರಾಜಿನ ಹಣ ತಂದು ಕೊಡುತ್ತಾರೆ. ಈ ರೀತಿಯಾಗಿ ಹಿಂದಿನ ವರ್ಷದ ಹಣ ಮುಟ್ಟಿದೆ ಎಂದು ಹೇಳುತ್ತಾರೆ. ಮತ್ತೆ ಈ ವರ್ಷದ ಶ್ರೀ ವೀರಭದ್ರೇಶ್ವರ ಸ್ವಾಮಿಯ ಪಟದ ಹರಾಜ್ ಪ್ರಥಮವಾಗಿ ೧೦,೦೦೦-೦೦ ಎಂದು ಕೂಗಿದರೆ, ಪಟ ಹರಾಜು ಮಾಡಲು ಇಚ್ಛೆ ಉಳ್ಳವರು ತಮಗೆ ತೋರಿದಂತೆ ಸುಮಾರು ಸಾವಿರದ ಲೆಕ್ಕದಿಂದ ೫,೦೦೦-೦೦ ಎಂದು ಕೂಗಬಹುದು. ಈ ರೀತಿ ಒಬ್ಬರಿಗೊಬ್ಬರು ಪೈಪೋಟಿ ಮಾಡಿ ೧೫,೦೦೦-೦೦ ಅಥವಾ ೨೦,೦೦೦-೦೦ ಅಥವಾ ೨೫,೦೦೦-೦೦ ಸಾವಿರದವರೆಗೂ ಏರಿಸುತ್ತಾರೆ. ಅಂತ್ಯಕ್ಕೆ ಮೂರು ಸಾರಿ ಒಬ್ಬರ ಹೆಸರಿನ ಮೇಲೆ ಕೂಗಿ, ಅಷ್ಟರಲ್ಲಿ ಯಾರೂ ಪೈಪೋಟಿ ಮಾಡದಿದ್ದರೆ ಅದನ್ನು ಕೊಡುತ್ತಾರೆ. ಈ ವರ್ಷ ಪಟ ಹರಾಜಿನಲ್ಲಿ ಭಾಗವಹಿಸಿ ತೆಗೆದುಕೊಂಡವರಿಗೆ ಹಾರ ಹಾಕಿ ಆಶೀರ್ವಾದ ಮೂಲಕವಾಗಿ ನಿಂತ ಜನರು ಏಕ ಕಂಠದಿಂದ ಜಯನಮಃ ಪಾರ್ವತೀ ಪತಿ ಶಿವ ಹರಹರ ಮಹಾದೇವ ಎಂದು ಜಯಕಾರ ಹಾಕುತ್ತಾರೆ. ಇದಾದ ಮೇಲೆ ಎರಡು ಕಡೆಗೂ ಚಾಮರದವರು ನಿಂತಿರುತ್ತಾರೆ. ಗಾಲಿಗೆ ಒಡೆದ ಕಾಯಿಗಳನ್ನು, ಹಣ್ಣುಗಳನ್ನು ತುಂಬಿಕೊಂಡು ಹೋಗಿ ಇಟ್ಟು ಬರುತ್ತಾರೆ. ನಂತರ ಇವರು ಮತ್ತು ಎರಡು ಗಾಲಿಯ ಕಡೆ ಸನ್ನೆ ಹಾಕುವವರು ನಿಂತಾಗ ತೇರಿನ ಗಾಲಿಗೆ ಇಡಲಾದ ಕಲ್ಲು ತೆಗೆದಾಗ ರಥ ಮುಂದೆ ಸಾಗುತ್ತದೆ. ರಥ ಪ್ರಥಮವಾಗಿ ಸಾಗುವಾಗ ಕಳಸ ಯಾವ ದಿಕ್ಕಿನ ಕಡೆ ಬಾಗುತ್ತದೆಯೋ ಆ ದಿಕ್ಕಿನ ಬೆಳೆಯು ಉತ್ತಮವಾಗಿ ಹುಲುಸಾಗಿ ಬೆಳೆಯುವುದೆಂಬ ನಂಬಿಕೆ ಇದೆ.

ಈ ರಥವು ಮುಂದೆ ಸಾಗುವಾಗ ಚಿಕ್ಕದಾದ ಜಾಗದಲ್ಲಿ ಚಲಿಸಬೇಕಾಗಿರುತ್ತದೆ. ಪಕ್ಕದಲ್ಲಿಯೇ ಅಂಗಡಿಗಳಿರುತ್ತವೆ. ತೇರಿಗೂ ಬಜಾರದಲ್ಲಿರುವ ಅಂಗಡಿಗಳಿಗೂ ಎರಡರಿಂದ ಮೂರು ಅಡಿ ಅಂತರವಿರಬಹುದು. ಎಡಗಡೆ ತೇರು ನಡೆದಾಗ ಒಂದು ಮಂಡಾಳು ಚೀಲ ಮಾತ್ರ ನಷ್ಟವಾಗಿದ್ದು, ಎರಡನೆಯ ಬಾರಿ ಕೊಟ್ಟೂರಿನವರ ಅಂಗಡಿ ಮೇಲೆ ಚಲಿಸಿದಾಗ ಯಾವ ತೊಂದರೆ ಆಗಿಲ್ಲ. ಇದು ಈತನ ಪವಾಡವೆಂದು ನಂಬಲಾಗುತ್ತದೆ.

ತೇರು ಪಾದಗಟ್ಟಿ ಬಸವೇಶ್ವರ ದೇವಸ್ಥಾನ ಕಟ್ಟಿಗೆ ಹೋಗುತ್ತದೆ. ಅಲ್ಲಿ ಬಸವೇಶ್ವರನಿಗೆ ಮಂಗಳಾರತಿ ಮಾಡಿ, ಪತ್ರಿ ವಿನಿಯೋಗಿಸಿ, ವಿಮುಖ ಮಾಡಿ ಆಗ ಹಿಂದಕ್ಕೆ ಅಂದರೆ ದಕ್ಷಿಣ ದಿಕ್ಕಿಗೆ ಎರಡು ಮಿಣಿ ಹಚ್ಚುತ್ತಾರೆ. ಆಗ ಮೊದಲು ತೇರು ಸಾಗಿದಂತೆ ವಿಮುಖವಾದಾಗಲೂ ಸಾಗಿ ಬರುತ್ತದೆ. ತೇರು ನಿಲ್ಲುವ ಸ್ವಸ್ಥಾನಕ್ಕೂ ಸರಿಯಾಗಿ ಎಳೆದು ನಿಲ್ಲಿಸುತ್ತಾರೆ. ಎಲ್ಲರೂ ಜಯಕಾರ ಮಾಡಿ ಮಂಗಳಾರತಿ ಮಾಡಿ ಶ್ರೀ ಸ್ವಾಮಿಯನ್ನು ಕೆಳಗೆ ತಂದು ಪಲ್ಲಕ್ಕಿಯಲ್ಲಿ ಮುಹೂರ್ತ ಮಾಡಿಸಿ ನಡೆ ಮುಡಿಯ ಮೇಲೆ ಶ್ರೀ ವೀರಭದ್ರೇಶ್ವರ ದೇವಸ್ಥಾನಕ್ಕೆ ಕೊಂಡೊಯ್ದು ಗುಡಿ ದುಂಬಿಸುತ್ತಾರೆ. ಈ ಹೊತ್ತಿಗೆ ಸುಮಾರು ೭ ಗಂಟೆಯಾಗಿರುತ್ತದೆ. ಆಗ ದಿನದ ಪದ್ಧತಿಯಂತೆ ಬಂದ ಬಾಬುದಾರರಿಗೆ

ಗೌರವಾನ್ವಿತರಾದ ಪ್ರಮುಖರಿಗೆ ಇಡಿಗಾಯಿ ಹೊಡೆದು ಕಾಯಿಕೊಟ್ಟು ಗೌರವಕ್ಕೆ ಹಣ್ಣು, ಹೂ, ಕಾಯಿ ಕೊಟ್ಟು ಕಳುಹಿಸುತ್ತಾರೆ. ಪುನಃ ಬಂದ ಗುರುವರ್ಗದವರನ್ನು ಅವರವರ ಮನೆಗಳಿಗೆ ಬೀಳ್ಕೊಡುತ್ತಾರೆ. ಈ ರೀತಿಯಾಗಿ ಈ ಕಾರ್ಯ ಮುನ್ನಡೆಯುತ್ತದೆ. ಪ್ರತಿ ವರ್ಷವೂ ಶೃಂಗಾರವೆಲ್ಲಾ ಸಣ್ಣ ವೀರಣ್ಣನಿಗೆ ಮಾಡುತ್ತಾರೆ. ದೊಡ್ಡ ವೀರಣ್ಣನ ಗುಡಿ ಮುಂದೆ ತೇರು ಅರಳಿ ಮರಕ್ಕೆ ಹೋಗಿ ವಾಪಾಸು ಬಂದು ದೊಡ್ಡ ವೀರಣ್ಣನ ಗುಡಿ ಮುಂದೆ ನಿಲ್ಲುತ್ತದೆ. ಜಾತ್ರೆ ನಡೆಯುವುದು ದೊಡ್ಡ ವೀರಣ್ಣನ ಸಮ್ಮುಖದಲ್ಲಿ.

ಮರಿ ಪರುಷೆ :

ಮರಿ ಪರುಷೆಯ ಬೆಳಗಿನ ಜಾವ ಗ್ರಾಮದವರು ಅಕ್ಕಪಕ್ಕದವರು ವೀರಣ್ಣನ ಬೇಟೆಗೆ ಹೋಗುವರು. ಇಡೀ ತಾಲೂಕಿನಲ್ಲೇ ಅವರವರ ಗಡಿ ಹದ್ದು ಮೀರಿ ಹೋಗಿ ಬೇಟೆ ಮಾರ್ಗವನ್ನು ಅನುಸರಿಸಿ ಪ್ರಾಣಿಗಳ ಬೇರೆಯವರ ಗಡಿಯಲ್ಲಿ ಸಿಕ್ಕರೆ ಅವರಿವರಿಗೂ ಮಾರಾಮರಿ ಹೊಡೆದಾಟಗಳಾಗಿ ಪ್ರಾಣ ಹಾನಿಯಾಗಿ ತೀರ್ಮಾನವಾಗಿದೆ. ವೈಷ್ಯಮ್ಯಕ್ಕೆ ಕಾರಣವಾಗಿ ನ್ಯಾಯಾಲಯ ದವರೆಗೆ ಹೋಗಿ ನ್ಯಾಯ ಸಮ್ಮತವಾದ ತೀರ್ಮಾನ ಸಿಕ್ಕಿದ್ದು, ಶ್ರೀ ವೀರಭದ್ರಶ್ವೇರನ ಕೃಪೆಯಾದದ್ದು ಅನೇಕ ಬಾರಿ ಇದೆ. ಶ್ರೀ ವೀರಭದ್ರೇಶ್ವರ ರಥೋತ್ಸವ ನಡೆದ ಮಾರನೆಯ ದಿನವೇ ಮರಿ ಪರಿಷೆ. ಮರಿ ಪರಿಷೆಯ ದಿನ ಭಕ್ತರು ತಮಗೆ ಇಚ್ಛೆಗನುಸಾರವಾಗಿ ನಿರೀಕ್ಷಿಸಿದ ಫಲ ದೊರೆತಾಗ ದಂಪತಿ ಯೋಗ ದೊರೆತವರು ಅದಕ್ಕೆ ತಕ್ಕ ಉರುಳು ಸೇವೆ, ದೀರ್ಘ ದಂಡ ನಮಸ್ಕಾರ ಮಾಡುತ್ತಾರೆ.

ಉರುಳು ಸೇವೆ : ಪ್ರಥಮವಾಗಿ ಶ್ರೀ ಸ್ವಾಮಿ ಗುಡಿಗೆ ಮಂಗಳ ವಾದ್ಯದೊಡನೆ ತನ್ನ ಬಳಗದವರೊಂದಿಗೆ ಉದಯಕ್ಕೆ ತಲೆ ಸ್ನಾನ ಮಾಡಿ, ಸೇರಿ ಉಲುಪಿಕೊಟ್ಟು, ಅದೇ ವದ್ದೆ ಬಟ್ಟೆಯಲ್ಲಿಯೇ ದೇವರ ದೇವಸ್ಥಾನದ ಬಾಗಿಲಲ್ಲಿ ನಮಸ್ಕರಿಸಿ ಪೂರ್ವದ ಕಡೆಯಿಂದ ದೇಹವನ್ನು ದೀರ್ಘದಂಡವಾಗಿ ಪೂರ್ಣ ಎರಡೂ ಮುಂಗೈಗಳನ್ನು ಮುಂದಕ್ಕೆ ಚಾಚಿ ಕಾಲುಗಳನ್ನು ನೀಳವಾಗಿ ಚಾಚಿ ತನ್ನ ದೇಹವನ್ನು ಸಂಪೂರ್ಣ ನೆಲಕ್ಕೆ ತಾಕುವಂತೆ ಗುಡಿಯ ಸುತ್ತಲೂ ಉರುಳುತ್ತಾ ಉರುಳುತ್ತಾ ಮುಂದೆ ಸಾಗುತ್ತಾರೆ. ಈ ಸಂದರ್ಭದಲ್ಲಿ ಸಂಬಂಧಿಗಳು ಒಂದು ತುಂಬಿದ ಕೊಡದಲ್ಲಿ ನೀರನ್ನು ಹಾಕುತ್ತಾ, ಶುದ್ಧತೆಗಾಗಿ ಮುಂದೆ ಸಾಗುತ್ತಾರೆ. ಆಗಾಗ ಗುರು ಪಾದೋದಕವನ್ನು ಹಾಕುವುದುಂಟು. ಈ ರೀತಿ ಉರುಳು ಸೇವೆ ಮಾಡುವ ಭಕ್ತರು ಉಪವಾಸ ವ್ರತ ಕೈಗೊಂಡಿರುತ್ತಾರೆ.

ದೀರ್ಘದಂಡ ನಮಸ್ಕಾರ: ಸಂತಾನಾಪೇಕ್ಷೆ,ರೋಗ ನಿವಾರಣೆ,ಉತ್ತಮ ಪತಿ, ಉತ್ತಮ ಪತ್ನಿ, ಉತ್ತಮ ಪದವಿ ದೊರೆಯಲೆಂದು ಹರಕೆ ಹೊರುತ್ತಾರೆ. ಭಕ್ತರು ತಮ್ಮ ಮನೆಯಲ್ಲಿ ಪರಿವಾರದೊಡನೆ ಮಂಗಳ ವಾದ್ಯದೊಂದಿಗೆ ನಿತ್ಯ ನಿಯಮಾಚಾರದಂತೆ ತಲೆ ಸ್ನಾನ ಮಾಡಿಕೊಂಡು ಬರುತ್ತಾರೆ. ತನ್ನ ಬಲಗೈ ಮೊಳದ ಅಳತೆಗೋಲಿನಿಂದ ಒಂದು ಸರಳ ರೇಖೆಯಲ್ಲಿರುವ ಅಳತೆಗೋಲು ಮಾಡಿಕೊಂಡಿರುತ್ತಾರೆ. ಇದನ್ನು ಶ್ರೀ ವೀರಭದ್ರೇಶ್ವರ ಸ್ವಾಮಿಯೇ ಉದ್ಧರಿಸು

ಎಂದು, ಆ ಕಟ್ಟಿಗೆಯನ್ನು ಮುಂದು ಮಾಡಿ ತನ್ನ ದೇಹವನ್ನು ನೆಲಕ್ಕೆ ತಾಗುವಂತೆ, ಎರಡು ಕೈಗಳನ್ನು ಮುಂದೆ ಚಾಚಿ, ಕೋಲಿನಿಂದ ಒಂದು ನಿರ್ಧಿಷ್ಟವಾದ ಗೆರೆಹಾಕಿ, ಎದ್ದು ಆ ಗೆರೆಯ ವರೆಗೆ ನಡೆದು ಮತ್ತು ಆ ಗೆರೆಯ ಮೇಲೆ ನಿಂತು ದೀರ್ಘದಂಡ ನಮಸ್ಕಾರವನ್ನು ಸಲ್ಲಿಸುತ್ತಾರೆ. ಶ್ರೀ ದೊಡ್ಡ ವೀರಭದ್ರೇಶ್ವರ ದೇವಸ್ಥಾನಕ್ಕೆ ಹೋಗಿ ಅಲ್ಲಿಂದ ಮರಳಿ ಬರುತ್ತಾರೆ. ನಂತರ ಶ್ರೀ ಸಣ್ಣ ವೀರಭದ್ರೇಶ್ವರ ದೇವಸ್ಥಾನ ಸುತ್ತುವರೆಯುತ್ತಾರೆ. ಅಲ್ಲಿಯೇ ಸ್ನಾನ ಮಾಡಿಸಿ ಹೊಸ ಬಟ್ಟೆಕೊಟ್ಟು ಉಡಿದುಂಬಿ ಮುಹೂರ್ತ ಮಾಡಿಸಿ, ಬಳುವಳಿ ಕೊಟ್ಟು, ಮಂಗಳ ವಾದ್ಯ ಸಮೇತ ಮರಳಿ ಮನೆಗೆ ಬಂರುತ್ತಾರೆ. ಗುರುಲಿಂಗ ಜಂಗಮರಿಗೆ ತೃಪ್ತಿಪಡಿಸಿ ಬಂಧು-ಭಗಿನಿಯರಿಗೆ ಅರಿಶಿಣ, ಕುಂಕುಮ ಕೊಟ್ಟು ಹಿರಿಯರಿಗೆ ನಮಸ್ಕರಿಸಿ ಆಶೀರ್ವಾದ ಪಡೆದುಕೊಂಡು ಆಚರಿಸುವ ಈ ಕ್ರಮಕ್ಕೆ ದೀರ್ಘದಂಡ ನಮಸ್ಕಾರವೆಂದು ಕರೆಯುತ್ತಾರೆ.

ಈ ರೀತಿ ಕಾರ್ಯಕ್ರಮಗಳು ಅವಿರತವಾಗಿ ಮರಿ ಪರುಷೆಯ ದಿನ ಸಾಯಂಕಾಲದವರೆಗೂ ತಪ್ಪದೇ ನಡೆಯುತ್ತಿರುತ್ತವೆ. ಮರಿ ಪರಿಷೆಯ ದಿನ ಸುಮಾರು ಬೆಳಿಗ್ಗೆ ೧೦ ಗಂಟೆಯ ಸಮಯಕ್ಕೆ ಪರ ಊರಿನಿಂದ, ಬೇರೆ ಬೇರೆ ನಗರದಿಂದ ಬರುವ ವಾಹನಗಳು ಹೆಚ್ಚಾಗಿ ಬರುತ್ತವೆ. ಮಧ್ಯಾಹ್ನ ೧೨ಗಂಟೆಯ ಸುಮಾರಿಗೆ ಜನಭರಿತವಾದ ಜಾತ್ರೆ ನಡೆಯುತ್ತದೆ. ಆ ಸಮಯಕ್ಕೆ ಡೊಳ್ಳು, ಮಜಲು, ಕೋಲಾಟದವರು, ಠಗರಿನ ಕಾಳಗದವರು, ಮಲುಕಿನ ಕೋಲಿನವರು ವಿವಿಧ ಭಂಗಿಯ ಕುಣಿತದವರು, ಡೊಂಬರು, ಸರ್ಕಸ್ಸಿನವರು, ಹಾವಾಡಿಗರು, ಕಪಿ ಆಡಿಸುವವರು, ಕರಡಿ ಆಡಿಸುವವರು, ಹಗಲು ವೇಷಧಾರಿಗಳು, ಏಕಪಾತ್ರಾಭಿನಯದವರು, ಕರ್ಪಲ್ ಲೆಕ್ಕದಂತೆ ಹೆಸರು ಹೇಳುವವರು, ಜೋಗತಿಯರು ವಿವಿಧ ಭಂಗಿಯ ನಟನೆ ಮಾಡುವ ಜನರನ್ನು ಈ ಜಾತ್ರೆಯಲ್ಲಿ ಕಾಣಬಹುದು. ಸುಮಾರು ೨ ಗಂಟೆ ಸಂಧಿಸುವ ಸಮಯಕ್ಕೆ ಇಡೀ ಗ್ರಾಮದ ಓಣಿ, ಕೇರಿ, ಬಜಾರ ಕಿಕ್ಕಿರಿದ ಜನ ಅಗಣಿತವಾದ ಸಂಖ್ಯೆಯಲ್ಲಿ ಜನಸ್ತೋಮ ಸೇರಿ ಜನ ಜಾತ್ರೆಯ ದೃಷ್ಠಿ ಹರಿಯುವವರೆಗೂ ನೋಡಬಹುದಾಗಿದೆ. ಎತ್ತಿನಗಾಡಿ, ಜಟಕಾಬಂಡಿ, ಮೋಟಾರು ಸೈಕಲ್, ಟೆಂಪೋ, ಟ್ರಾಕ್ಟರ್, ಕಾಸಗಿ ಹಾಗೂ ಸರ್ಕಾರಿ ಬಸ್ಸುಗಳ ಮೂಲಕ ಜನ ಸಂಚಾರ ಕರೆತಂದು, ಕರೆದೊಯ್ಯುವ ಎಡೆಬಿಡದೆ ಕೆಲಸ ನಡೆದೇ ಇರುತ್ತದೆ. ಅಲ್ಲದೆ ರಾಷ್ಟ್ರೀಯ ಹೆದ್ದಾರಿ ೧೩ರಿಂದ ವಿಶೇಷವಾಗಿ ಲಾರಿಗಳಲ್ಲಿ ಬಂದು ಹೋಗುವ ಜನರೇ ಹೆಚ್ಚು ಕಂಡುಬರುತ್ತದೆ. ಸಾಯಂಕಾಲದವರೆಗೂ ಸುಮಾರು ರಾತ್ರಿ ೮ ಗಂಟೆಯವರೆಗೆ ಕೋಲು ಮೇಳದವರ ವಾದ, ಪ್ರತಿವಾದದ ಕೋಲಿನ ಪದಗಳ ವಾದಿ, ಕೋಲಾಟಗಳಿಂದ ನಿಂತು ನೆರೆದು ನೋಡುವ ಜನ ಕದಲದೇ ಇರುತ್ತಾರೆ.

ಅಂದು ಮರಿಪರಿಷೆಯ ದಿನ ಸಾಯಂಕಾಲ ಪಲ್ಲಕ್ಕಿ ಉತ್ಸವಕ್ಕೆ ಪೂರ್ವಭಾವಿ ಸಿದ್ಧತೆಗಳು ಶೃಂಗಾರಕ್ಕೆ ತಯಾರಿ ನಡೆಯುತ್ತದೆ. ಬೆಳ್ಳಿಯ ಪಂಚ ಕಳಶ, ಸಿಂಹದ ಮುಖ, ವಿಧ ವಿಧವಾದ ಚಿಕ್ಕ ದೊಡ್ಡ ರೇಶ್ಮೆ ಝುರಿಯ ಗೊಂಡೆಗಳಿಂದ ಅಲಂಕೃತವಾದ ರಾಜ ಗೊಂಡವು ಈ ತಡಿ ನಾನಾ

ಚಿತ್ತಾರವಾದ ಹೊದಿಕೆ ಹಾಸಿಗೆ ಮಡಿಗಳಿಂದ ಅಲಂಕೃತವಾಗಿ ಅನೇಕ ವಿಧವಿಧವಾದ ಹೂ ಸರ ಮಾಲೆ, ಪುಷ್ಪಗುಚ್ಛಗಳಿಂದ ಬಲ್ಲಂತ ಹೂವಿನ ಹಾರ ಕಟ್ಟಿ ಅಲಂಕಾರ ಮಾಡುವವರು ಬಂದಿರುತ್ತಾರೆ. ಇದರಿಂದ ಶೃಂಗರಿಸಲ್ಪಟ್ಟ ಪಲ್ಲಕ್ಕಿಯಲ್ಲಿ ಶ್ರೀ ವೀರಭದ್ರೇಶ್ವರ ಸ್ವಾಮಿಯನ್ನು ಮೆರವಣಿಗೆಗೆ ಕರೆತರಲು ಪೂರ್ವಭಾವಿ ಮೊದಲಿನ ಸಿದ್ಧತೆಯಂತೆ. ಅಂದರೆ ಹಿಂದಿನ ದಿನ ರಾತ್ರಿ ಪೂಜೆ ಕಟ್ಟಿದ, ಒಡವೆ, ಮಡಿ ಬಟ್ಟೆ, ಉಡುಗೆ-ತೊಡುಗೆ ಪೂರ್ಣ ಬದಲಾಯಿಸುತ್ತಾರೆ.

ಕೊಬ್ಬರಿ ಸುಡುವ ಪದ್ಧತಿ :

ಶ್ರೀ ದೊಡ್ಡ ವೀರಭದ್ರೇಶ್ವರ ದೇವಸ್ಥಾನದಲ್ಲಿ ಪಲ್ಲಕ್ಕಿಯನ್ನು ಇಳಿಸಲು ರಂಗು ರಂಗಿನ ರಂಗಾದ ಮಂಟಪ ಮಾಡಿರುತ್ತಾರೆ. ಈ ಗುಡಿಯ ಅಂಗಳದಲ್ಲಿ ಭಕ್ತರಿಂದ ಶೃಂಗಾರ ಭರಿತವಾಗಿ ಬಂಧಿಸುವ ರಂಗ ಮಂಟಪವನ್ನು ನಿರ್ಮಿಸಲ್ಪಟ್ಟಿರುತ್ತಾರೆ. ಹೂವಿನ ಅಲಂಕಾರದೊಂದಿಗೆ ಹೂವಿನ ಹಂದರದಡಿಯಲ್ಲಿ ಹೂ ಮಾಲೆಯಿಂದ ಅಲಂಕೃತವಾದ ಶ್ರೀ ವೀರೇಶನ ಪಲ್ಲಕ್ಕಿಯನ್ನು ಶ್ರೀ ಗುರುಗಳು ಭಕ್ತರಾಧಿಯಾಗಿ ನಾನಾ ವಿಧವಾದ ವಾದ್ಯಗೋಷ್ಠಿಯೊಂದಿಗೆ ಪಲ್ಲಕ್ಕಿಯನ್ನು ತಂದು, ದೊಡ್ಡ ವೀರಭದ್ರೇಶ್ವರ ದೇವಸ್ಥಾನದಲ್ಲಿ ಶ್ರೀ ಸ್ವಾಮಿಯ ಮುಹೂರ್ತ ಮಾಡಿಸಿ ಎಡೆ ಬಿಡದೆ ಒಡಬು ಹೇಳುತ್ತಾ ಕುಣಿದು ಕುಪ್ಪಳಿಸುತ್ತಾರೆ. ಪ್ರಶಸ್ತಿ ವಿಜೇತ ಚಲುವಾದಿ ಚೌಡಪ್ಪ ವೀರಪ್ಪ ಇವರ ಸನಾಯಿ ವಾದನ, ವಿವಿಧ ಗ್ರಾಮಗಳಿಂದ, ಪೇಟೆ, ಕೋಟೆಗಳಿಂದ ಬಂದಿರುವ ಸಮ್ಮಾಳ, ನಂದಿಧ್ವಜ ಕುಣಿತದವರ ಆರ್ಭಟ ನಡೆದಿರುತ್ತದೆ. ಮಧ್ಯ ಮಧ್ಯ ಜೋಗತಿಯರ ಪ್ರವೇಶ. ಇದರಿಂದ ಲೌಕಿಕ ಹುಡುಗರ ಗುಂಪು ನೂಕು ನುಗ್ಗಲಿನಿಂದ ಕೇಕೆಹಾಕಿ, ದೀವಟಿಗೆಯ ಅಂದರೆ ಕೊಬ್ಬರಿ ಸುಡುವ ಜಾಗದಲ್ಲಿ ನೆಲಸಾರಣೆ ಮಾಡಿ ದೀವಟಿಗೆ ಹಚ್ಚಿ, ಪದ್ಧತಿಯ ಪ್ರಕಾರ ಕೊಬ್ಬರಿ ಸುಡುವ ವಾಡಿಕೆ. ಇದು ರಾತ್ರಿ ಸುಮಾರು ೯ರಿಂದ ಪ್ರಾರಂಭವಾಗಿ ಬೆಳಿಗ್ಗೆ ೯ರ ಸುಮಾರಿಗೆ ಮುಗಿಯುತ್ತದೆ. ಶ್ರೀ ಸ್ವಾಮಿಯ ಗುಡಿದುಂಬುವವರೆಗೂ ಅವಿರತವಾಗಿ ನಡೆದೇ ಇರುತ್ತದೆ. ಈ ಸುಟ್ಟ ಕೊಬ್ಬರಿಯನ್ನು ಬಂದ ಭಕ್ತರು ಅಂಗಾರ-ಬಂಗಾರವೆಂದು ತೆಗೆದುಕೊಂಡು ಶ್ರೀ ಸ್ವಾಮಿಯ ರಕ್ಷಾಧನ್ಮಂತರಿ ಎಂದು ತೆಗೆದುಕೊಂಡು ಮನೆಗಳಿಗೆ ಒಯ್ಯುವುದುಂಟು. ತೆಗೆದುಕೊಂಡು ಹೋದ ಈ ಅಂಗಾರವನ್ನು ಮೂರ್ಚೆ ಬಂದವರಿಗೆ, ಜ್ವರದ ಭಾದೆಯಿಂದ ಬಳಲುವವರಿಗೆ, ಗ್ರಹ ಪೀಡೆ, ಚೇಷ್ಠೆ ಬರುವವರಿಗೆ ಇದನ್ನು ಹಚ್ಚಿದರೆ ಎಲ್ಲವೂ ಪರಿಹಾರವೆಂಬ ನಂಬಿಗೆಯಿಂದ ಒಯ್ಯುವುದುಂಟು. ಇದನ್ನೇ 'ನಂಬುಗೆಯಲಿ ಶಂಭುವಿನ ಒಲುಮೆ' ಎನ್ನುವುದುಂಟು.

ನಂತರ ಮಧ್ಯ ಮಧ್ಯ ಒಡಬು ಹೇಳುವುದು ಕುದುರೆ ಕುಣಿಸುವುದು, ವೀರಗಾಸೆಯವರ ಕುಣಿತ ನಡೆಯುತ್ತಲೇ ಇರುತ್ತದೆ. ಸುಮಾರು ಮೂರು ಗಂಟೆಯ ಸಮಯದಿಂದ ಬಂದ ಭಕ್ತರು ಸ್ನಾನ, ಪೂಜೆ, ದೈನಂದಿನ ಕಾರ್ಯಕ್ರಮಗಳನ್ನು ತೀರಿಸಿಕೊಂಡು ದೇವಸ್ಥಾನದ ಆವರಣದಲ್ಲಿ ಜಮಾಯಿಸುವುದು ಜಾಸ್ತಿ. ಅಲ್ಲಿಂದ ಹೆಚ್ಚಿನ ಕಳೆಬಂದು ಮತ್ತೆ ಮದಾಲ್ಸಿಯ ಆರ್ಭಟ, ಕಹಳೆಯ ಧ್ವನಿ, ವೇದ ಘೋಷದ ಧ್ವನಿ ನಡದೇ ಇರುತ್ತದೆ. ವಿಧವಿಧದ ವಿದ್ಯುತ್ ಅಲಂಕಾರದ ವಿದ್ಯುದೀಪಗಳ

ಸ್ವಾಗತ, ಪಲ್ಲಕ್ಕಿ, ನವಿಲು, ಹಂಸವಾಹನ, ರಾಷ್ಟ್ರಪಕ್ಷಿ, ಹೂಜಿಗಳ ಹೂವಿ ನಿಂದ ಅಲಂಕೃತವಾದ, ವಿದ್ಯುತ್ ದ್ವೀಪದಿಂದ ಅಲಂಕೃತವಾದ ಗುಡಿಗೋಪುರ ನೋಡಲು ಮನೋಹರ. ತೇರು ಕಲಶಗಳ ಸೌಂದರ್ಯದ ಸೊಬಗು ಬಹು ವರ್ಣ ರಂಜಿತವಾಗಿ ಪ್ರತಿಬಿಂಬಿಸುತ್ತದೆ. ಈ ರೀತಿಯಾಗಿ ದೃಶ್ಯ ನೋಡುತ್ತಾ ನೋಡುತ್ತಾ ಕೂಡ್ಲಿಗಿ ಕುಪ್ಪನಕೇರಿಯ ಗೌಡ ಮನೆತನದವರು ಇಡೀ ರಾತ್ರಿ ಶ್ರೀ ಸ್ವಾಮಿಯ ದರ್ಶನ ಭಕ್ತಿಭಾವನೆಯಲ್ಲಿ ತಲ್ಲೀನರಾಗಿ ಸೂರ್ಯೋದಯಕ್ಕೆ ಸುಚಿಭೂತರಾಗಿ ಹಣ್ಣು ಕಾಯಿ ಕರ್ಪೂರಾಧಿಗಳನ್ನು ಸಮರ್ಪಿಸುತ್ತಾರೆ.

ಸ್ವಲ್ಪ ವಿರಾಮದ ನಂತರ ವಾದ್ಯಗೋಷ್ಠಿಯವರಿಗೆ ಉಪಾಹಾರ, ಪೇಯಗಳನ್ನು ಕೊಡಿಸಿ, ಸಕಲ ಸದ್ಭಕ್ತರು, ಗ್ರಾಮದ ಗಣ್ಯರು, ಸಮಸ್ತ ಆಯಗಾರರೆಲ್ಲರೂ ಸೇರಿ ಕಾಯಿ, ಕರ್ಪೂರ, ಧೂಪ, ದೀಪ ನೈವೇದ್ಯ ಸಮರ್ಪಿಸಿ ಮಂಗಳಾರತಿ ಹಾಡಿ, ಮಂಗಳಾರತಿ ಬೆಳಗುತ್ತಾರೆ. ಶುಭೋದಯದ, ಸೂರ್ಯೋದಯವಾಗುವ ನಂತರ ಶ್ರೀ ಸ್ವಾಮಿಯನ್ನು ನಡೆನುಡಿಯ ಮೇಲೆ ಜಯಘೋಷದೊಂದಿಗೆ 'ದಕ್ಷನ ಶಿರಕಡಿದ ವೀರೇಶ ದೊರೆಯೇ ನಿನಗಾರು ಸರಿಯೇ? ಸರಿ ಸರಿ ಎಂದವರ ಹಲ್ಲು ಮುರಿಯೇ ಬಹು ಪರಾಕ್' ಎಂದು ಹೇಳುತ್ತಾ, ಮುಂದೆ ಮುಂದೆ ಸಾಗುತ್ತಾ ನಡೆದು ಭಕ್ತರಿಂದ ಕೊಡಲ್ಪಡುವ ಹಣ್ಣು, ಕಾಯಿ, ಕರ್ಪೂರ, ತೆಗೆದುಕೊಂಡು ಮಂಗಳಾರತಿ ಮಾಡುವರು. ಶ್ರೀ ಸ್ವಾಮಿಯ ದರ್ಶನವನ್ನು ಮಾಡಿಸುತ್ತಾ ಮುನ್ನಡೆದು ಗುಡಿದುಂಬಿಸಿ, ದಿನದಂತೆ ಸಕಲ ಗ್ರಾಮದ ಪೂಜ್ಯನಿಯರಿಗೂ, ಶೆಟ್ಟಿ ಶಾನಭೋಗ, ತಳವಾರ, ಓಲೆಕಾರ, ವಾಲೀಕಾರ, ಬಾರಿಕ, ಬಣಕಾರ, ಇನ್ನು ಮುಂತಾದ ಜನರಿಗೆ ಗೌರವಾರ್ಥವಾಗಿ, ಶ್ರೀ ಸ್ವಾಮಿಯ ಪಲ್ಲಕ್ಕಿಯಲ್ಲಿ ಬಿದ್ದ ಪಳಾರವನ್ನು ರಾಶಿ ಮಾಡಿ ಪ್ರತಿಯೊಬ್ಬರಿಗೂ ಕೊಟ್ಟು ಕಳಿಸುವ ಪದ್ಧತಿ ಪೂಜಾರಿಯದು. ಇದು ಹಿಂದಿನಿಂದಲೂ ನಡೆದುಕೊಂಡು ಬಂದ ರೀತಿ. ಇದು ಇಂದು ನಿನ್ನೆಯದಲ್ಲ. ಇದೇ ರೀತಿ ಮುಂದೆಯೂ ನಡೆಸಿಕೊಂಡು ಹೋಗುವ ಪದ್ಧತಿ ಇದೆ. ತೇರಿನ ದಿನ ಅಥವಾ ಮುಂಚಿತವಾಗಿ ರಥೋತ್ಸವಕ್ಕೆ ಬಂದವರು ರಥೋತ್ಸವ ಸಾಗಿದ ಕೂಡಲೆ ಗ್ರಾಮಗಳಿಗೆ ತೆರಳಿದರೆ ಬಳಿತು ಇಲ್ಲವಾದರೆ ಇಂದು ಅಂದರೆ ಮರು ಪರಿಷೆಯ ಆದಮೇಲೆ ಹೊರಡುವ ವಾಡಿಕೆ.

<u>ಮೂಣ್ಣ ಪರುಶೆ :</u>

ಈ ಪರಿಶೆಯ ದಿನ ದೇವತಾ ಕಾರ್ಯ ಯಾವುದೂ ಇಲ್ಲ. ಇಂದಿನ ದಿನ ಅಕ್ಕಪಕ್ಕದ ಗ್ರಾಮ, ಪೇಟೆ, ಹಳ್ಳಿ, ಸ್ವಗ್ರಾಮದವರೂ ಸೇರಿ ಜಾತ್ರೆಗೆ ಬಂದಿರುವ ಜಾತ್ರಾತ್ರಿಗಳಿಗೆ ತಮ್ಮ ಬಂಧು ಬಳಗದವರಿಗೆ ವಿಭೂತಿ, ಅರಿಶಿಣ, ಕುಂಕುಮ, ಬಳೆ, ಪಳಹಾರ ಇತರೆ ಬಳಕೆಯ ವಸ್ತು, ಮಕ್ಕಳಾಟಿಕೆ ಸಾಮಾಗ್ರಿಗಳನ್ನು ಕೊಡಿಸಿ ತಾವು ತೆಗೆದುಕೊಳ್ಳುವ ಪದ್ಧತಿ ಇದೆ. ಈ ದಿನದಲ್ಲಿ ವ್ಯಾಪಾರಸ್ಥರಿಗೆ ಬೆಳಗಿನಿಂದ ಹಿಡಿದು ರಾತ್ರಿ ೧೦ ಗಂಟೆಯವರೆಗೂ ಪುರುಸೊತ್ತಿಲ್ಲದ ವ್ಯವಹಾರ ನಡೆಯುತ್ತದೆ. ಇದು ಈ ಜಾತ್ರೆಯ ವಿಶೇಷ ಎಂದು ಭಾವಿಸಬಹುದು. ಈ ನಾಲ್ಕನೇ ದಿನದಲ್ಲಿ ೫ನೇ ದಿನಕ್ಕೆ ಬೇಕಾಗುವ ಕಾಯಿ-ಕರ್ಪೂರ, ಹಣ್ಣು-ಹೂ ಖರ್ಚಾಗುವುದು ಜಾಸ್ತಿ.

ಈ ದಿನ ಬೆಳಿಗ್ಗೆ ೧೦ ರಿಂದ ೧೨ರ ಒಳಗೆ ತೇರಿನ ಕಂಕಣ ಬಿಚ್ಚಿ, ತೇರಿನ ಮುಟ್ಟು ಗಾಲಿ ಸಮೇತ ಒಳಗೆ ಹಾಕುತ್ತಾರೆ. ಇಂದಿನವರೆವಿಗೂ ಅಂದು ಕಟ್ಟಿದ ಕಂಕಣ ಬಿಚ್ಚುವುದಿಲ್ಲ. ಇದಕ್ಕೆ ಕಂಕಣ ಬಿಚ್ಚುವುದು ಎಂದು ಕರೆಯುತ್ತಾರೆ.

ಗುಡಿ ತೊಳೆಯುವ ಪದ್ಧತಿ :

ಶ್ರೀ ವೀರಭದ್ರೇಶ್ವರ ದೇವರಿಗೆ ಎಲ್ಲಾ ಮನೆಯಿಂದ ಎಡೆ ಮಾಡುವುದು ವಾಡಿಕೆ. ತೊಗೆ ಕಡುಬು, ಬಿಳಿ ಹುಗ್ಗಿ ಹೀಗೆ ವಿವಿಧ ಬಗೆಯ ತಿನಿಸುಗಳನ್ನು ನೈವೇದ್ಯ ಮಾಡುವುದುಂಟು. ಜಾತ್ರೆಗೆ ಬಂದ ಬೀಗರಿಗೆ ತೊಗೆ ಬಾನ ನೀಡುವ ಪದ್ಧತಿ ಇತ್ತು. ಆದರೀಗ ಆದರ ಬದಲಿಯಾಗಿ ಕಾಲ ಬದಲಾದಂತೆ ಜನ ಬದಲಾವಣೆಯಾಗಿ ಲಾಡು, ಚಿರೋಟಿ, ಜಿಲೇಬಿ, ಖರ್ಜಿಕಾಯಿ ಹೀಗೆ ನಾನಾ ವಿಧವಾದ ಅಡಿಗೆಗಳನ್ನು ಕಾಣಬಹುದಾಗಿದೆ. ಇದು ಈಗಿನ ಪದ್ಧತಿ.

ಗುಡಿ ತೊಳೆಯುವುದೆಂದರೆ ಸಾಮೂಹಿಕವಾಗಿ ಜಾತ್ರೆಗೆ ಬಂದ ಭಕ್ತರೆಲ್ಲರೂ ಮಡಿ ಮೈಲಿಗೆಯಿಂದ ನಡೆದುಕೊಂಡು ಶ್ರೀ ವೀರಭದ್ರೇಶ್ವರನ ಕಟ್ಟಳೆಯೇ ಘಟ್ಟಿತರವಾದದ್ದು. ಈ ಕಟ್ಟಳೆಗೆ ಒಳಪಟ್ಟು ರಥೋತ್ಸವವಾದ ಐದನೇ ದಿನದಲ್ಲಿ ಗ್ರಾಮದ ಪ್ರತಿ ಮನೆಯವರು ಶುಚೀರ್ಭೂತರಾಗಿ ಕಳಶ ಕನ್ನಡಿ ಹಿಡಿದು ಶುದ್ಧಾಚಾರದಿಂದ ಮೃತ್ತಿಕೆಯ ಕುಂಭಗಳನ್ನು ತೆಗೆದುಕೊಂಡು , ಅದಕ್ಕೆ ಹಾಲು, ತುಪ್ಪ ಹಾಕಿ, ಪೂಜೆಗೈದು ವಾದ್ಯದವರೊಡನೆ ಕರೆಯಲು ಬಂದಾಗ, ಅಂದರೆ ಸುಮಾರು ಮಧ್ಯಾಹ್ನ ೨ ಗಂಟೆಗೆ ಹೊರಟು ಗಂಗಾ ದೇವತೆಯನ್ನು ನೂರೊಂದು ಕೊಡಗಳಲ್ಲಿ ತರುವರು. ಪ್ರತಿ ಕೊಡಕ್ಕೂ , ಪ್ರತೀ ಭಕ್ತನಿಗೂ ಕಂಕಣ ಕಟ್ಟಿ ಆ ನೀರನ್ನು ಶ್ರೀ ಸ್ವಾಮಿಯ ದೇವಸ್ಥಾನಗಳಿಗೆ ಹಾಕುವರು. ಸ್ವಾಮಿಯಿಂದ ಹಿಡಿದು ಇಡೀ ದೇವಸ್ಥಾನದ ಒಳಗಡೆ ನೀರೆರಚಿ ತೊಳೆದು ಸ್ವಚ್ಛತೆ ಮಾಡಿ ಗುರುಗಳನ್ನು ಮುಹೂರ್ತ ಮಾಡಿಸಿ, ಪಾದೋದಕ ಕ್ರಿಯಾ ದೀಕ್ಷೆ ಕೊಟ್ಟು ಹೊಸ ಉಡುಗೆ ಉಡಿಸಿ, ಸಾಮಾನು ಧರಿಸಿ, ಬಂದ ಭಕ್ತರು ತಂದ ಅಂದಿನ ಹೋಳಿಗೆ ಎಡೆ ಮಾಡುವ ಪದ್ಧತಿ. ಇದಕ್ಕೆ ಪ್ರತಿ ಮನೆಯಲ್ಲಿ ಹೋಳಿಗೆ ಎಡೆ ಇಂದಿನ ವಿಶೇಷ.

ಮಹಾಶಿವರಾತ್ರಿ :

ಮಹಾಶಿವರಾತ್ರಿ ದಿನದಂದು ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ರುದ್ರಾಭಿಷೇಕ, ಪಂಚಾಮೃತಾ ಭಿಷೇಕ, ಸಹಸ್ರನಾಮ, ಶಿವ ಪುರಾಣ, ಶಿವ ಕೀರ್ತನೆ, ಶಿವ ಚಿಂತನೆ, ಶಿವ ಭಜನೆ ಕಾರ್ಯಕ್ರಮಗಳು ವೈಭವಪೂರ್ಣವಾಗಿ ನಡೆಯುವವು.

ನಾಗರ ಅಮವಾಸೆ :

ನಾಗರ ಅಮವಾಸೆ ಪ್ರಾರಂಭದಿಂದ ಪಾಡ್ಯದವರೆಗೆ ವಿಶೇಷ ರೀತಿಯಲ್ಲಿ ನಿತ್ಯ ರುದ್ರಾಭಿಷೇಕ. ಇಡೀ ಶ್ರಾವಣ ಮಾಸ ರುದ್ರಾಭಿಷೇಕ ಪೂರ್ತಿ ಜರುಗುವುದು. ಪ್ರತಿ ಶ್ರಾವಣ ನಿತ್ಯ ಒಂದು ತಿಂಗಳು ಪರಿಯಂತೆ ನಿತ್ಯ ದಾಸೋಹ ಕಾರ್ಯಕ್ರಮ ವೈಭವ ಪೂರ್ಣವಾಗಿ ತಪ್ಪದೇ ನಡೆದುಕೊಂಡು ಬರುತ್ತದೆ. ಅಲ್ಲದೆ ಪ್ರತಿ ಅಮವಾಸೆ, ಹುಣ್ಣಿಮೆ ಶುಭದಿನ ಶ್ರೀ ಸ್ವಾಮಿಗೆ ಪಂಚಾಮೃತಾಭಿಷೇಕ, ಜವಳ, ದೀರ್ಘ ದಂಡ ನಮಸ್ಕಾರ ಕಾರ್ಯಕ್ರಮಗಳು ಜರಗುವುದುಂಟು.

ದಸರಾ :

ದಸರಾ ನವರಾತ್ರಿಯಲ್ಲಿ ಅಮವಾಸೆ ಪಾಡ್ಯದಿಂದ ನವ ದುರ್ಗಿಯರ ಪೂಜೆಗೈದು ದಶಮಿಯ ದಿನ ಶ್ರೀ ಸ್ವಾಮಿಯ ಉತ್ಸವವನ್ನು ಹೊರಡಿಸಿ ಬನ್ನಿ ಮಹಾಂಕಾಳಿಯ ಅಂದರೆ ಗ್ರಾಮದ ಈಶಾನ್ಯ ದಿಕ್ಕಿನಲ್ಲಿರುವ ಕಾಳಿಕಾಂಬೆಯ ಗುಡಿಯ ಹತ್ತಿರ ಹೋಗಿ ಬನ್ನಿ ಮುಡಿದು 'ಬನ್ನಿ ಬಂಗಾರವನ್ನು' ಸರ್ವರೂ ತೆಗೆದುಕೊಳ್ಳುತ್ತಾ ಶ್ರೀ ಸ್ವಾಮಿಯನ್ನು ಗುಡಿದುಂಬಿಸಿ ಬನ್ನಿ ಕೊಡುವ ಪದ್ಧತಿ. ಅಂದಿನ ಕುದುರೆ ಪೂಜೆ ವೈಶಿಷ್ಟ್ಯ. ಪೂಜೆಯನ್ನು ಈ ದಶಮಿಯ ಯಾವ ವಾರ ಬನ್ನಿ ಮುಡಿಯುತ್ತವೋ ಅಂದೇ ಪುಷ್ಯ ಮಾಸದ ಪಂಚಮಿಯ ದಿನ ಶ್ರೀ ವೀರಭದ್ರೇಶ್ವರ ರಥೋತ್ಸವವು.

ಕಾರ್ತೀಕಮಾಸದ ಅಮವಾಸೆಯಾದ ಮೊದಲ ಮಂಗಳವಾರವೇ ಈತನ ಮೊದಲ ಕಾರ್ತೀಕ. ಅಂದಿನಿಂದ ಪ್ರಾರಂಭವಾದ ಕಾರ್ತೀಕ ಪ್ರತಿ ಮಂಗಳವಾರವು, ಭಕ್ತರಿಂದ ಬಹು ವೈಭವ ಪೂರ್ಣವಾಗಿ ನಡೆಯುವುದು. ಪ್ರತಿ ಮಂಗಳವಾರ ಕಾರ್ತೀಕ ಮಾಸದಲ್ಲಿ ಕಾರ್ತೀಕವು ಪ್ರಾರಂಭಗೊಂಡು ಪುಷ್ಯ ಮಾಸದ ಪಂಚಮಿಯ ಚತುರ್ಥಿ ನಾಲ್ಕನೇ ದಿನದವರೆಗೂ ನಡೆಯುವುದು.

ಮಾಗ ಮಾಸದಲ್ಲಿನ ವಿಶೇಷತೆ :

ಮಾಗ ಮಾಸದಲ್ಲಿ ಅಮವಾಸ್ಯೆಆಗಿ ೭ನೇ ದಿನದ ಅಂದರೆ ರಥಸಪ್ತಮಿಯ ದಿನ ಶ್ರೀ ವೀರಭದ್ರಸ್ವಾಮಿಯ ಉತ್ಸವ ಮೂರ್ತಿ ಹೊರಡಿಸುವರು. ನಿಯಮದ ಪ್ರಕಾರ ರೊಟ್ಟಿಬುತ್ತಿ, ಪಲ್ಲೆ ಎಡೆಮಾಡಿ, ಬೇಟೆ ಮಾರ್ಗಕ್ಕೆ ಕಳುಹಿಸಿ ಬರುತ್ತಾರೆ. ನಂತರ ಏಳುದಿನಗಳು ಕಳೆದು, ಭರತ ಹುಣ್ಣಿಮೆಯ ದಿನ ಶ್ರೀ ಸ್ವಾಮಿಯನ್ನು ಏಳು ವಾರ ಅಗಸಿ ಬಾಗಿಲುಗಳನ್ನು ದಾಟಿಸಿಕೊಂಡು ಕರೆತರಿವರಿ. ಊರಲ್ಲಿ ಮಠದವರ ಮನೆಯಿಂದ ಬೆಲ್ಲದಾರತಿ, ಭಕ್ತರ ಮನೆಗಳಿಂದ ಮೊಸರನ್ನದ ಆರತಿಯನ್ನು ಉದಯಕ್ಕೆ ಶ್ರೀ ಸ್ವಾಮಿಯ ಸಮ್ಮುಖಕ್ಕೆ ತರುವರು. ಪದ್ಧತಿಯ ಪ್ರಕಾರ ಮೂಗು-ಬಾಯಿಗಳನ್ನು ಕಟ್ಟಿಕೊಂಡು ತರಬೇಕು. ಅಂದರೆ ಇವರ ಉಸಿರು ಎಡೆಗೆ ತಗುಲಬಾರದೆಂದು ಈ ನಿಯಮ. ಉತ್ಸವದಲ್ಲಿ 'ಶ್ರೀ ವೀರಭದ್ರೇಶ್ವರ ಸ್ವಾಮಿ ಸಮ್ಮುಖೇ। ಉಗೇ

ಉಗೇ।' ಎಂದು ನಿವಾಳಿಸಿ ತಂದ ಆರತಿಗಳನ್ನು ಆಯಗಾರರಿಗೆ (ಬಾಬುದಾರರಿಗೆ) ಕೊಡುವ ಪದ್ಧತಿ ಇದೆ. ಏಕೆಂದರೆ ಇವರು ಬೇಟೆ ಮಾರ್ಗಕ್ಕೆ ಹೋಗುವಾಗ ಸಂಕಲ್ಪದಂತೆ ಶ್ರೀ ಸ್ವಾಮಿಯ ಹಿಂಬಾಲಕರಾಗಿ ಅಂತ್ಯದವರೆಗೂ ಜೊತೆಗೂಡಿ, ಜೊತೆಯಾಗಿ ಬಂದು ಕಾರ್ಯಪೂರ್ಣ ಗೊಳಿಸಿಕೊಟ್ಟಿರುತ್ತಾರೆ. ಶುಭ ಹಾರ್ರೈಕೆಗಾಗಿ ಅಂದಿನ ದಿನ ಇಡೀ ಗ್ರಾಮದವರೆಲ್ಲಾ ಹುರುಳಿ ಹೂರ್ಣ ಎಡೆ ಮಾಡಿ ಪ್ರಸಾದ ತೆಗೆದುಕೊಳ್ಳುವ ಪದ್ಧತಿ ಇದೆ. ಇದು ರಥೋತ್ಸವದ ಅರ್ಧ ವೈಭವವಿರುತ್ತದೆ. ನಂತರ ಸ್ವಾಮಿಯನ್ನು ಗುಡಿದುಂಡಿಸಿ, ಆರತಿ ಬೆಳಗಿಸಿ ಬಂದ ಸುಮಂಗಲೆಯರಿಗೆ ಆಶೀರ್ವಾದದ ರೂಪದಲ್ಲಿ ಗುಗ್ಗರಿ ಪ್ರಸಾದ ಹಂಚಲಾಗುವುದು. ಬಂದ ಭಕ್ತರಿಗೂ ಕೂಡ ಪ್ರಸಾದವನ್ನು ಹಂಚಲಾಗುವುದು.

ಅಧ್ಯಾಯ - ಐದು

ವೀರಭದ್ರಸ್ವಾಮಿ ಮತ್ತು ಇತರ ದೈವದ ಸಂಬಂಧ

೫.೧. : ಮುಪ್ಪಿನಪ್ಪ (ವಿಘ್ನೇಶ್ವರ)
೫.೨. : ಪತ್ರಿ ಬಸವೇಶ್ವರ
೫.೩. : ಧರ್ಮಪ್ಪ
೫.೪. : ಪಾದಗಟ್ಟಿ ಬಸವೇಶ್ವರ
೫.೫. : ಹನುಮಪ್ಪ
೫.೬. : ಪೇಟೆ ಹನುಮಪ್ಪ
೫.೭. : ಶಾಂತ ಮಲ್ಲೇಶ್ವರ
೫.೮. : ದುರ್ಗಾಂಬಿಕ
೫.೯. : ಉಡುಸಲಮ್ಮ
೫.೧೦.: ಯಲ್ಲಮ್ಮ, ಮೈಲಮ್ಮ, ದುರುಗಮ್ಮ
೫.೧೧.: ಹಟ್ಟಿ ಮಾರೆಮ್ಮ
೫.೧೨.: ಕೊಲ್ಲಾರಮ್ಮ
೫.೧೩.: ರಂಗಸ್ವಾಮಿ
೫.೧೪.: ಪಕ್ಕೀರಸ್ವಾಮಿ (ಮುಸ್ಲಿರ ದೈವ)

ಅಧ್ಯಾಯ - ೫

ಶ್ರೀ ವೀರಭದ್ರಸ್ವಾಮಿ ಮತ್ತು ಇತರ ದೈವದ ಸಂಬಂಧ

ಮೊರಬ ಗ್ರಾಮದಲ್ಲಿ ಶ್ರೀ ವೀರಭದ್ರೇಶ್ವರನೇ ಪ್ರಧಾನ ದೈವ. ಆದರೆ ಆತನೊಬ್ಬನೇ ಇಲ್ಲಿ ದೈವವಲ್ಲ. ಆತನೊಂದಿಗೆ ಇನ್ನು ಹಲವಾರು ದೇವರುಗಳು ಇವೆ. ಶ್ರೇಣೀಕರಣದ ದೃಷ್ಟಿಯಿಂದ ನೋಡಿದರೆ ಶ್ರೀ ವೀರಭದ್ರ ಎಲ್ಲಕ್ಕಿಂತ ಹೆಚ್ಚು ಪೂಜೆಗೆ ಒಳಗಾಗುವ ದೇವರು. ಅನಂತರ ಇತರೇ ದೇವರುಗಳು. ಜಾತ್ರೆಯಲ್ಲಿ ಶ್ರೀ ವೀರಭದ್ರನಿಗೆ ಪ್ರಧಾನ ಸ್ಥಾನ ನೀಡಿದರೂ ಉಳಿದ ದೈವಗಳಿಗೂ ಜನರು ಸೇವೆ ಸಲ್ಲಿಸುತ್ತಾರೆ. ಈ ಗ್ರಾಮದಲ್ಲಿರುವ ಇತರ ದೇವರೆಂದರೆ; ಮುಪ್ಪಿನಪ್ಪ, ಪತ್ರಿ ಬಸವೇಶ್ವರ, ಭರ್ಮಪ್ಪ, ಪಾದಗಟ್ಟಿ ಬಸವೇಶ್ವರ, ಹನುಮಪ್ಪ, ಪೇಟೆ ಹನುಮಪ್ಪ, ಶಾಂತ ಮಲ್ಲೇಶ್ವರ, ಗ್ರಾಮ ದೇವತೆ ಶ್ರೀ ದುರ್ಗಾಂಬಿಕೆ, ಉಡುಸಲಮ್ಮ, ಹರಿಜನಕೇರಿಯ ಯಲ್ಲಮ್ಮ, ಗಲ್ಲಿ ದುರುಗಮ್ಮ, ಹಟ್ಟಿ ಮಾರೆಮ್ಮ, ಕೊಲ್ಲಾರಮ್ಮ, ರಂಗಸ್ವಾಮಿ, ಮುಸ್ಲಿಂ ಪಕ್ಕೀರಸ್ವಾಮಿ. ಈ ದೈವಗಳಿಗೆ ಒಂದೊಂದು ಸ್ಥಾನವಿದೆ.

೫.೧. ಮುಪ್ಪಿನಪ್ಪ (ವಿಘ್ನೇಶ್ವರ) :

ಮೊರಬದ ಶ್ರೀ ದೊಡ್ಡ ವೀರಭದ್ರೇಶ್ವರ ದೇವಸ್ಥಾನದಲ್ಲಿ ಪಶ್ಚಿಮ ದಿಕ್ಕಿನ ಕಡೆಗೆ ಸ್ನಾನದ ನೀರು ಹರಿಯುವ ಜಾಗದಲ್ಲಿ ಒಂದು ವಿಘ್ನೇಶ್ವರನ ಮೂರ್ತಿ ಇದೆ. ಈ ಮೂರ್ತಿಯು ಕಲ್ಲಿನಿಂದ ಕೆತ್ತಲ್ಪಟ್ಟಿದ್ದು. ಸುಂದರವಾದ ಈ ವಿಗ್ರಹ ಆದಿ ಪೂಜಿತ ಶ್ರೀ ವಿಘ್ನೇಶ್ವರ ಎಂದು ವಾಡಿಕೆ ಮತ್ತು ರೂಢಿ. ಆದರೆ ಈ ವಿಗ್ರಹವನ್ನು ಹಿಂದಿಟ್ಟು ಪೂಜೆಗೊಳ್ಳುತ್ತದೆ. ಇದು ತಿಳಿಯಲಾರದ ವಿಷಯವಾಗಿದ್ದರೂ ಶ್ರೀ ಮುಪ್ಪಿನಸ್ವಾಮಿ ಎಂದು ಕರೆಯುತ್ತಾರೆ. ಕೆಲ ಜನರು ಮುಪ್ಪನಪ್ಪ, ಮುಪ್ಪಿನಸ್ವಾಮಿ ಎಂದು ಕರೆಯುವ ವಾಡಿಕೆ ಇದೆ. ವೀರಣ್ಣನ ಜಾತ್ರೆಯಲ್ಲಿ ಈತನಿಗೂ ಪೂಜೆ ಸಲ್ಲಿಸುವರು.

೫.೨. ಪತ್ರಿ ಬಸವೇ

ಪತ್ರಿ ಬಸವೇಶ್ವರ
ಒಂದು ನೂರು ವರ್ಷದ
ಹೊಸ ಮರದಂತೆ ಚಿಗು
ದ್ದರಿಂದ ಕಾಶೀ ಪತ್ರಿ
ಉಪಯೋಗಿಸುತ್ತಾರೆ.

ಪಾದಗಟ್ಟಿಗೆ ಶ್ರೀ ವೀರಭದ್ರೇಶ್ವರ ರಥೋತ್ಸವವು ಬಂದು, ಮಂಗಳಾರತಿ ಮಾಡಿ ಓಂದಿರುಗಿ ಹೋಗುತ್ತದೆ. ಈ ಆಲದ ಮರದ ಪೂರ್ವೋತ್ತರವಾಗಿ ಹರಿದು ಬೇರಿಗೆ ಶನಿವಾರ, ಸೋಮವಾರ, ಅಮವಾಸೆಯ ದಿನ ಅಭಿಷೇಕ ಮಾಡಿ ಕೃಷ್ಣಾಷ್ಟೋತ್ತರ ಮಾಡಿ ಭಕ್ತಿಯಿಂದ ಪ್ರದಕ್ಷಣೆ ಹಾಕಿದರೆ ಅನೇಕ ಜನ್ಮದ ಪಾಪ ಹರಿಹಾರವೆಂತಲು, ಸಂತಾನ ಹೀನರಿಗೆ ಸಂತಾನ ಭಾಗ್ಯ ಸಿಗುವುದೆಂತಲೂ, ದೌರ್ಭಾಗ್ಯರಿಗೆ ಭಾಗ್ಯ ದೊರೆಯುವ ಯೋಗ ಸಿಗುವುದೆಂತಲೂ ಭಾವಿಸಲಾಗುತ್ತದೆ. ಆದುದರಿಂದ ಈ ಪಾದಗಟ್ಟಿ ಪವಿತ್ರವಾದುದೆಂದು ಪೂಜೆಗೈಯುತ್ತಿದ್ದಾರೆ.

೫.೫ ಹನುಮಪ್ಪ :

'ಊರು ಸುಟ್ಟರೂ ಹನುಮಪ್ಪ ಹೊರಗೆ' ಎನ್ನುವಂತೆ, ಹನುಮ ದಿಕ್ಕಿಗೆ ಹನುಮ ಬಾಗಿಲು ಅಂದರೆ, ದಕ್ಷಿಣದ ಕಡೆಗೆ ಮುಖಬೀರುವುದಕ್ಕೆ ಹನುಮನ ಬಾಗಿಲು ಎಂದು ಕರೆಯುವ ವಾಡಿಕೆ. ಈತ ಶ್ರೀ ವೀರಭದ್ರೇಶ್ವರನಿಂದ ಲಿಂಗಧಾರಣೆ ಮಾಡಿಸಿಕೊಂಡವ. ತ್ರಿಕಾಲ ಲಿಂಗ ಪೂಜಿತ, ಈತ ದೇವ ಲೋಕದಲ್ಲಿ ಗಾನಗಂಧರ್ವನೆಂಬ ಬಿರುದು ಪಡೆದಾತ. ಆಗಲೇ ಕೈಲಾಸದಲ್ಲಿ ಶಿವನಿಂದ ೧ ರೋಮಕ್ಕೆ ೩ ಕೋಟಿ ಶಿವಲಿಂಗಗಳು ಎನ್ನುವ ವರಪಡೆದಾತ. ಭೀಮ ದ್ರೌಪದಿಗೆ ಸೌಗಂಧಿಕಾ ಪುಷ್ಪ ತರಲು ಹೋಗುವಾಗ ದಾರಿಗಡ್ಡವಾಗಿ ಹನುಮ ಕುಳಿತಿರುವುದನ್ನು ನೋಡಿ, ಭೀಮನು ' ಏ ಕಪಿಯೇ ನಾನು ಬಂದಿದ್ದೇನೆ,ದಾರಿಗೆ ಅಡ್ಡ ಹಾಕಿರುವ ಬಾಲ ಸೆಳೆದುಕೊ ಎಂದು ಗರ್ವದಿಂದ ನುಡಿದ. ಅಪ್ಪಾ! ನಾನು ಮುದಿಯ ಬಾಲ ಎತ್ತಲಾರೆ, ಬಾಲವನ್ನು ಸರಿಸಿ ನೀನೇ ಮುನ್ನಡೆ ಎಂದು ತಿಳಿಸಿದ. ಅದರಂತೆ ಭೀಮನು ಬಲವಾದ ಗದೆಯಿಂದ ತನ್ನ ಸೊಕ್ಕಿನ ಬಲವನ್ನು ಪ್ರಯೋಗ ಮಾಡಿ ದೂಡಲು ಬಾಲ ಸ್ವಲ್ಪವೂ ಅಲುಗಾಡಲಿಲ್ಲ. ಆಗ ನೊಂದು ಭೀಮನು ದೈನ್ಯದಿಂದ ಮಹಾನುಭಾವ ನೀನಾರು? ಹೀಗೇಕೆ ಮಾಡಿದೆ. ಎಂದು ಕೇಳಿದಾಗ, ನಾನು ವಾಯುಪುತ್ರ ಹನುಮಂತ ಎಂದನು. ಭೀಮನು ವಾಯುಪುತ್ರನೇ ಇಬ್ಬರು ಸಹೋದರರಾದ ಕಾರಣ ಅನುಕಂಪ ಬಂದು ಆಲಿಂಗನ ಮಾಡಿಕೊಂಡು ಆನಂದ ಬಾಷ್ಪ ಸುರಿಸಿದನು.

ಯಾವ ಕಾರ್ಯಾರ್ತ್ರವಾಗಿ ಎಂದು ಕೇಳಿದಾಗ ಸೌಗಂಧಿಕಾ ಪುಷ್ಪ ತರಲು ಹೊರಟಿರುವೆನೆಂದು ತಿಳಿಸಿದ. ಅದಕ್ಕೆ ಮಾರುತಿಯು ನೀನು ಹೋಗಿ ತರುವುದು ಅಸಾಧ್ಯವಾದ ಕೆಲಸ. ಏಕೆಂದರೆ ದೇವತೆಗಳು ಜಲಕ್ರೀಡೆಯಾಡುವ ಮಾನಸ ಸರೋವರದಲ್ಲಿ ಈ ಪುಷ್ಪಗಳು ಅರಳುತ್ತವೆ. ಅಲ್ಲಿ ಒಂದು ಶಿವಲಿಂಗವಿದೆ. ಈ ಶಿವಲಿಂಗಕ್ಕೆ ನಿತ್ಯವೂ ಒಂದು ಹೂ ಕಡಿಮೆಯಾಗದಂತೆ ಅರ್ಪಿಸುವ ಕಾರ್ಯಕ್ರಮ. ಇದಕ್ಕೆ ಖಡ್ಗಮೃಗದ ಕಾವಲು. ಈ ಖಡ್ಗಮೃಗಕ್ಕೆ ಶಿವಲಿಂಗವೆಂದರೆ ಅತೀ ಭಯ, ಭಕ್ತಿ ಒಂದು ಹೂ ಕಡಿಮೆಯಾದರೂ ಸಹಿಸದು. ಅದಕ್ಕಾಗಿ ನಾ ಕೊಡುವ ಮೂರು ರೋಮಗಳನ್ನು ತೆಗೆದುಕೊಂಡು ಹೋಗು. ಸರೋವರದ ಹತ್ತಿರ ಹೋದಾಗ ಸೌಗಂಧಿಕಾ ಪುಷ್ಪ ಕೀಳುವಾಗ ಖಡ್ಗಮೃಗ ನಿನ್ನನ್ನು ಹಿಡಿಯಲು ಬರುತ್ತದೆ. ಆಗ ಒಂದು ರೋಮ ಚಲ್ಲು. ಆಗ ಮೂರು ಕೋಟಿ ಶಿವಲಿಂಗಗಳಾಗುತ್ತವೆ. ಲಿಂಗ ಕಂಡ ಖಡ್ಗಮೃಗವು ಪ್ರದಕ್ಷಣೆ ಮಾಡಲು ಪ್ರಾರಂಭಿಸುತ್ತದೆ. ಆ

ವೇಳೆಯಲ್ಲಿ ನೀನು ಬಹುದೂರ ದಾರಿ ಕ್ರಮಿಸಬಹುದು. ನಂತರ ಖಡ್ಗಮೃಗವು ನಿನ್ನನ್ನು ಹಿಡಿಯಲು ಬರುತ್ತದೆ. ಆಗ ಮತ್ತೊಮ್ಮೆ ಇನ್ನೊಂದು ರೋಮ ಚಲ್ಲು ಮೊದಲಿನಂತೆ ಪ್ರದಕ್ಷಣೆ ಹಾಕುವುದನ್ನು ಕಂಡು ಮುನ್ನಡೆ. ಆಗಲೂ ಇದೇ ರೀತಿ ಮಾಡು. ಈ ರೀತಿ ಮೂರು ಬಾರಿ ಮಾಡಿದರು ಖಡ್ಗಮೃಗವು ಇನ್ನೇನು ಭೀಮನನ್ನು ಹಿಡಿದೇ ಬಿಡುತ್ತೇನೆಂದು ಸಮೀಪಿಸಿತು. ಆಗ ಹನುಮಂತನ ಸುತ್ತುವರೆಯಲು ಭೀಮನು ಪ್ರಾರಂಭಿಸಿದ ಇದನ್ನು ಕಂಡ ಖಡ್ಗಮೃಗವು ಲಿಂಗಮಯ ಶರೀರಿಯಾದ ಮಾರುತಿಯನ್ನು ನೋಡಿ ಸುತ್ತುತ್ತಲೇ ಇತ್ತು ಕೊನೆಗೂ ಸೋತು ಶರಣಾಗತವಾಯಿತು. ಆಗ ಸೌಗಂಧಿಕಾ ಪುಷ್ಪ ತಗೆದುಕೊಂಡು ದ್ರೌಪದಿಗೆ ಮುಟ್ಟಿಸಿದ.

೫.೬. ಪೇಟೆ ಹನುಮಪ್ಪ :

ಹಿಂದೆ ನಾಯಕರ ಕಾಲದ ಆಳ್ವಿಕೆಯಲ್ಲಿ ಪೇಟೆಯ ಸಂತೆ ಸ್ಥಳವಾಗಿದ್ದ ಜಾಗದಲ್ಲಿ ನಾಯಕರ ಆರಾಧ್ಯ ದೈವವಾದ ಶ್ರೀ ಹನುಮಂತ (ಆಂಜನೇಯ)ಗೆ ಮೊದಲು ನಮಸ್ಕರಿಸಿ, ಯಾವ ಕಾರ್ಯವನ್ನು ಆರಂಭಿಸುತ್ತಾರೆ. ಆಗಲೂ ಕೂಡ ತಮಗೆ ನಮಸ್ಕರಿಸಲು ಯೋಗ್ಯವಾದ ಮೂರ್ತಿ ಬೇಕೆಂದು ಸಂತೆ ನಡೆಯುವ ಜಾಗದಲ್ಲಿ ಪಾಳೇಗಾರರು ಓಡಾಡುವ ದಾರಿಯಲ್ಲಿ ಇಟ್ಟಿದ್ದಾರೆ.

೫.೭. ಶಾಂತ ಮಲ್ಲೇಶ್ವರ :

ಶಾಂತಮಲ್ಲೇಶ ಹಳೇಪೇಟೆಯ ವಾಸ. ಶ್ರೀ ಶಾಂತ ಮಲ್ಲೇಶ ಕಟ್ಟೆಯ ದಡದಲ್ಲಿ ಮರಡಿಯ ಅಡಿಯಲ್ಲಿ ಒಡೆದು ಕುಳಿತಿರುವ ಶ್ರೀ ಶಾಂತಮಲ್ಲೇಶನ ಮೂರ್ತಿಯು ಒಂಭತ್ತು ಕಲ್ಲುಗಳಲ್ಲಿ ಇರುವುದು. ಊರು ಬಿಟ್ಟು ಸುಮಾರು ಒಂದು ಕಿಲೋಮೀಟರ್ ದೂರದ ಅಡವಿಯಲ್ಲಿದೆ. ಮೊರಬದ ಜನರು ಈ ಶಾಂತ ಮಲ್ಲೇಶನ ಮೇಲೆ ಬಹಳ ಭಕ್ತಿ ಇಟ್ಟಿದ್ದಾರೆ. ಮತ್ತು ಭಕ್ತರು ಕೆಲವು ಹರಕೆಗಳನ್ನು ಹೊರುತ್ತಾರೆ. ಅವರ ಪ್ರಕಾರ ವರ ಕೊಟ್ಟರೆ ಶಾಂತ ಮಲ್ಲೇಶನಿಗೆ ಹರಕೆಗಳನ್ನು ಒಪ್ಪಿಸುತ್ತಾರೆ. ಶಾಂತ ಮಲ್ಲೇಶನ ಮೇಲೆ ಬಹಳ ಭಕ್ತಿಯಿಟ್ಟಿದ್ದಾರೆ. ಮತ್ತು ಭಕ್ತರು ಕೆಲವು ಹರಕೆಗಳನ್ನು ಹೊರುತ್ತಾರೆ. ಅವರ ಪ್ರಕಾರ ವರ ಕೊಟ್ಟರೆ ಶಾಂತ ಮಲ್ಲೇಶನಿಗೆ ಹರಕೆಗಳನ್ನು ಒಪ್ಪಿಸುತ್ತಾರೆ. ಶಾಂತಮಲ್ಲೇಶ್ವರನ ಮೂರ್ತಿಯ ಹತ್ತಿರ ಕೆಲವು ಸಣ್ಣ ದುಂಡಾಕಾರದ ಕಲ್ಲುಗಳಿವೆ. ಜನರು ಅಲ್ಲಿಗೆ ಹೋಗಿ ಮಳೆ ಬಾರದಿದ್ದಾಗ ಆ ದುಂಡಾಕಾರದ ಕಲ್ಲನ್ನು ಎತ್ತಿ ಹಿಡಿದರೆ, ಅಂದರೆ ಆ ಕಲ್ಲು ಸುಲಭವಾಗಿ ಮೇಲೆದ್ದರೆ ಜನರು ಬೇಡಿಕೊಂಡ ಅನಿಸಿಕೆಯು ಈಡೇರುತ್ತದೆ. ಆ ಕಲ್ಲು ಮೇಲೇರದಿದ್ದರೆ ಅವರು ಬೇಡಿಕೊಂಡ ವರವು ಈಡೇರುವುದಿಲ್ಲವೆಂದು ತಿಳಿಯಲಾಗುತ್ತದೆ. ಈ ರೀತಿಯಾಗಿ ಈ ದೇವರನ್ನು ಪೂಜಿಸುವ ವಾಡಿಕೆ ಇದೆ. ಈರಣ್ಣನ ಜಾತ್ರೆಯ ಸಂದರ್ಭದಲ್ಲಿ ದೇವಸ್ಥಾನದ ವತಿಯಿಂದ ಹಣ್ಣುಕಾಯಿ ಮಾಡಿಸುವರು.

೫.೮ ದುರ್ಗಾಂಬಿಕೆ :

ಈ ದೇವಿಯ ವಿಗ್ರಹವು ಮರದ ಪ್ರಭಾವಳಿಯಿಂದ, ಸಿಂಹ ಮುಖದಿಂದ, ಸಿಂಹವಾಹಿನಿಯಾಗಿ, ರಕ್ತದಂತಿಕೆಯಾಗಿ ರಕ್ತಾಂಬರಿಯಾಗಿ, ರಕ್ತಲೋಚನೆಯಾಗಿ, ರಕ್ತ ಕುಂಕುಮಧಾರೆಯಾಗಿ, ರಕ್ತ ಬೀಜನ ಸಂಹಾರಿಯಾಗಿ ಗ್ರಾಮ ರಕ್ಷಿಸುವ ರಕ್ಷಿಣಿಯಾಗಿ ಶ್ರೀ ದುರ್ಗಾಂಬೆ ನೆಲಸಿಹಳು. ಇಲ್ಲಿ ಈ ತಾಯಿ ವಾರ ಮಂಗಳವಾರ. ವಿಧಾನೋಕ್ತ ಪೂಜೆ, ಆಚಾರ-ವಿಚಾರ ನೀತಿ ನಿಯಮಗಳು ಕ್ರಮ ಬದ್ಧವಾಗಿ ಜರುಗುವವು ಊರ ಬಡಿಗೇರರು ಪೂಜಾರಿಗಳು ಮೂರು ವರ್ಷಕ್ಕೊಂದಾವರ್ತಿ ಗ್ರಾಮ ದೇವತೆಯ ಶಾಂತಿಗಾಗಿ ಆಚರಣೆಯನ್ನು ನೆರವೇರಿಸುವರು. ಈ ತಾಯಿಯನ್ನು ಗಂಗಾ ದೇವತೆಗೆ (ಹೊಳೆಗೆ) ಪದ್ಧತಿ ಪ್ರಕಾರ ಹೊಸದಾದ ಉಡುಗೆ ತೊಡುಗೆ, ಹಣ್ಣು, ಕಾಯಿ , ಕರ್ಪೂರ, ಹೂ, ಅರಿಶಿಣ, ಕುಂಕುಮ ನಿವಾಳಿಸಿ, ಕುರಿ ಕೋಣ, ಮೇಕೆಗಳ ಬಲಿ ಕೊಡುವುದುಂಟು. ಇದನ್ನು ಊರಿನ ಯಾದವರು (ಕುರುಬರು) ಮರಿ ಕೊಡಬೇಕು. ನಿಗದಿಪಡಿಸಿದ ಸ್ಥಳದಲ್ಲಿ ಬಲಿಗೊಟ್ಟು ಬಾಬುದಾರರು ತೆಗೆದುಕೊಳ್ಳಬೇಕು. ಇದು ರೂಢಿ.

೫.೯. ಉಡುಸಲಮ್ಮ :

ಊರ ಪೂರ್ವ ಭಾಗಕ್ಕೆ ಕೆರೆಯ ಅಂಚಿನಲ್ಲಿ ಎರಡು ಬೃಹದಾಕಾರದ ಆಲದ ಮರದ ನೆರಳಿನಲ್ಲಿ ಒಂದು ದೇವಾಲಯವಿದೆ. ಇದರ ಒಳಗೆ ಕಪ್ಪು ಶಿಲೆಯಿಂದ ಕೆತ್ತಿದ ಸುಂದರವಾದ ಅಂದವಾದ ಕಡಿಮೆಯ ತರವುಳ್ಳ ಒಂದು ಶಿಲಾ ಮೂರ್ತಿಯಿದೆ. ಇದು ನಿಂತ ವಿಗ್ರಹವಿದ್ದು, ವಿವಿಧ ಆಯುಧ ಹೂ, ಬಾಣ, ಛತ್ತಳಿಕೆಯಿಂದ ಕೆತ್ತಿದ ಗದ್ದುಗೆಯ ಮೇಲಿದೆ. ಇದು ಹುಲಿಸಿನಮ್ಮ ಎಂದು ಹೆಸರು ಪಡೆದಿದ್ದು, ರೂಢಿಯಲ್ಲಿ ಉಡುಸಲಮ್ಮ ಎಂದು ಸಹ ಕರೆಯಲ್ಪಟ್ಟಿದೆ ಎಂದು ಹೇಳಬಹುದು.

ಹಿಂದೆ ದೇವರು ಮಾಡುವಾಗ ಹಿರೇಹಾಳು ಗ್ರಾಮದ ಒಬ್ಬ ಬೇಡರ ಭಕ್ತನು ಆವೇಶ ಭರಿತನಾಗಿ ನಾನು ಹುಲುಸು ಒಯ್ಯುವೆನೆಂದು ಗ್ರಾಮದ ಮುಖಂಡರನ್ನು ಅವಾಚ್ಯ ಶಬ್ದಗಳಿಂದ ಅವರಿಗೆ ನೋವಾಗುವಂತೆ ಕೆಲವು ಮಾತುಗಳನ್ನು ಆಡುವಾಗ ಅವರಿಗೆ ಸಿಟ್ಟು ಬಂದು ಹಿಡೀ, ಹೊಡಿ, ಬಡಿ ಎಂದು ಹಿಂಬಾಲಿಸಿದರು. ಆಗ ಅವನು ಯಾರ ಕೈಗೂ ಸಿಗದೇ ಗಾಳಿಯಂತೆ ಓಡೋಡಿ ಹೋದನು. ಕೊನೆಗೆ ಹಿರೇಹಾಳು ಗ್ರಾಮದ ಸರಹದ್ದಿನ ಹಂಚಿನಲ್ಲಿ ಸಿಕ್ಕನು. ಈತನು ಸಿಕ್ಕಾಗ ಒಂದು ಲೆಕ್ಕಿ ಪೊದೆಯಲ್ಲಿ ಕತ್ತರಿಸಲಾಯಿತು. ಆಗ ಇಲ್ಲಿಂದ ತೆಗೆದುಕೊಂಡು ಹೋದ ಹುಲುಸು ಅಲ್ಲಿಯೇ ಉಳಿದಿದೆ ಎಂದು ಹಿರಿಯರಿಂದ ತಿಳಿದುಬಂದ ವಿಷಯ. ಈಗ ಮೂರು-ನಾಲ್ಕು ತಲೆಮಾರಾಗಿರ ಬಹುದು. ದೇವರು ಜಾತ್ರೆ ಸಾಗಿಲ್ಲವೆಂದು ಹೇಳುತ್ತಾರೆ.

೫.೧೦. ಯಲ್ಲಮ್ಮ, ಮೈಲಮ್ಮ, ದುರುಗಮ್ಮ :

ಹರಿಜನ ಕೇರಿಯಲ್ಲಿ ಎರಡು ಬಾಬುವಾರರಿದ್ದು, ಒಬ್ಬರು ಯಲ್ಲಮ್ಮನ ಬಣಕ್ಕೆ ಸೇರಿದವರು ಇನ್ನೊಬ್ಬರು ಮೈಲಮ್ಮನ ಗುಡಿಗೆ ಸೇರಿದವರು. ಯಲ್ಲಮ್ಮನ ಗುಡಿಯ ಬಣದವರು ಹಣ ಸಂಗ್ರಹ ಮಾಡಿ ಬೇಟಿ ವ್ಯವಹಾರದಲ್ಲಿ ತೊಡಗಿಸಿ ಹಣ ಊರ್ಜಿತಗೊಳಿಸಿಕೊಂಡಿದ್ದಾರೆ. ಇದರಿಂದ (ಬಂದ ಹಣದಿಂದ) ಗುಡಿ ಕಟ್ಟಿಸಿ, ಮೂರು ವರ್ಷಕ್ಕೊಂದು ಆವರ್ತಿಗೆ ಹೊರಡಿಸಿ, ಕುರಿಕೋಣ ಬಲಿಕೊಟ್ಟು, ಅರಿಶಿಣ, ಕುಂಕುಮ, ಹಣ್ಣು, ಹೂವು ಕೊಟ್ಟು ಪೂಜಾ, ಭಜನ ಕಾರ್ಯಕ್ರಮ ಇಟ್ಟು ಹಣ ವಸೂಲಿ ಮಾಡಿ ಹಣ ಹೆಚ್ಚಿಗೆ ಮಾಡಿಕೊಳ್ಳುತ್ತಾರೆ. ಮಂಗಳವಾರ, ಶುಕ್ರವಾರ ಪೂಜೆ ಮಾಡುವರು.

ಗಲ್ಲಿ ದುರುಗಮ್ಮ ಊರ ಕೇರಿಯಲ್ಲಿ ಇರುವಂತೆ ಈ ಊರಿನ ಕೇರಿಯಲ್ಲಿ, ಗಲ್ಲಿ ಇದೆ. ಕೆಲವರು ಯಾವುದೇ ಒಂದು ಅಹಿತಕರ ಘಟನೆ ಘಟಿಸಿದಾಗ ಮಾಟ, ಮರವಿ, ಮದ್ದು ಯಾರಾದರೂ ಲೋಪದೋಷ ತಿಳಿಸಿದರೆ ಆ ಗಲ್ಲಿಗೆ ಹಣ್ಣು ಕಾಯಿ, ಹೂ ಕೊಟ್ಟು ಈ ಗಲ್ಲಿಯ ನೀರು ತಂದು ಪ್ರೋಕ್ಷಿಸಿದಾಗ ಪರಿಹಾರ ಎಂಬ ರೂಢಿ ಈಗಲೂ ಪ್ರತಿ ಗ್ರಾಮದಲ್ಲಿ ಕಂಡು ಕೇಳುತ್ತಿದ್ದೇವೆ.

೫.೧೧. ಹಟ್ಟಿ ಮಾರೆಮ್ಮ :

ಈ ಗ್ರಾಮದ ಯಾದವ ಜನಾಂಗದ ದೇವರು. ಇವರು ಕೃಷ್ಣನ ವಂಶಸ್ಥರು. ಯದು ವಂಶ ಸಂಸ್ಥಾಪಕರಾದ ಕಾರಣ ಇವರು ಮಾರೆಮ್ಮ, ಮಧ್ಯಾಹ್ನ ಮಾರೆಮ್ಮ, ಅಳಲು ಮಾರೆಮ್ಮ ಎಂದು ಕರೆಯುವುದುಂಟು. ಬಾಧ್ರಪದ ಮಾಸದ ಅಮವಾಸ್ಯೆಯ ದಿನ ಜೋಕುಮಾರ ಹುಟ್ಟಿ ಏಳು ದಿನ ಸತ್ತ ಏಳು ದಿನದವರೆಗೆ ಅಳಲು ಎಂದು ಕರೆಯುತ್ತಾರೆ. ಈ ದಿನಗಳಲ್ಲಿ ಒಳ್ಳೆಯ ಕಾರ್ಯಗಳನ್ನು ಮಾಡುವುದಿಲ್ಲ. ಹೊಲಗದ್ದೆಗಳಲ್ಲಿ ಕಸಕಟ್ಟಿಗೆಗಳನ್ನು ತೆಗೆಯುವುದಿಲ್ಲ. ಅತ್ತೆಯ ಮನೆಯಲ್ಲಿ ಹೊಸದಾಗಿ ಮದುವೆಯಾದ ಸೊಸೆಯಂದಿರಿರುವುದಿಲ್ಲ. ಈ ದಿನಗಳಲ್ಲಿ ಈ ಜನಾಂಗದವರು ಈ ಹದಿನಾಲ್ಕು ದಿನಗಳಲ್ಲಿ ಈ ಹಟ್ಟಿ ಮಾರೆಮ್ಮ ಅಳಲು, ಮಾರೆಮ್ಮ, ಮಧ್ಯಾಹ್ನ ಮಾರೆಮ್ಮನನ್ನು ಸಂದರ್ಭಕ್ಕನುಗುಣವಾಗಿ ಅಳಲಿನಲ್ಲಿ ಮಾಡಿ ಮುಗಿಸುವ ಪದ್ಧತಿಗೆ ಮಾರೆಮ್ಮ ಎಂದು ಕರೆಯುತ್ತಾರೆ.

೫.೧೨. ರಂಗಪ್ಪಸ್ವಾಮಿ :

ಯಾದವ ಜನಾಂಗದ ರಂಗ ಗೋವಿಂದ ಶ್ರೀ ಕೃಷ್ಣನ ನಾಮಾವಳಿಯ ವಿಠ್ಠಲ ಎಂದು ಈ ರಂಗಪ್ಪನನ್ನು, ಪಾಳೆಯಪ್ಪ, ಎಂಜೇರಪ್ಪ ಎಂದು ಕರೆಯುವುದುಂಟು. ಈ ಜನಾಂಗದಲ್ಲಿ ಒಬ್ಬನನ್ನು ಪೂಜಾರಿ ಮಾಡಿರುತ್ತಾರೆ. ಆ ಪೂಜಾರಿಯು ಬೇರೆಯವರ ಅನ್ನ ಸೇವಿಸುವುದಿಲ್ಲ. ಪರ ಊರಿಗೆ ಹೋದರೂ ಕೂಡ ಬುತ್ತಿ ತೆಗೆದುಕೊಂಡು ಹೋಗುತ್ತಾನೆ. ತಡವಾದರೆ ಉಪವಾಸ ಇದ್ದು

ಬರುತ್ತಾನೆ. ಸ್ವಹಸ್ತದಿಂದ ಅಡುಗೆ ಮಾಡಿಕೊಂಡು ಊಟ ಮಾಡುತ್ತಾನೆ. ಈ ರಂಗಪ್ಪಸ್ವಾಮಿಯ ವಾರ ಶನಿವಾರ. ಶಂಖ, ಜಾಗಟೆ, ಗಂಟೆ ಬಾರಿಸುತ್ತ ಮೂಗು ಮುಸುಡಿ ಕಟ್ಟಿಕೊಂಡು ಆರತಿ ಮಾಡುತ್ತಾರೆ. ವಾರ ಹಬ್ಬ ಹರಿದಿನಗಳಲ್ಲಿ ಈತನನ್ನು ಮನೆಗಳಿಗೆ ಕರೆದೊಯ್ದು ಕಳಿಸುತ್ತಾರೆ.

೫.೧೪. ಪಕ್ಕೀರ ಸ್ವಾಮಿ :

ಊರಿನಲ್ಲಿರುವ ಇನ್ನೊಂದು ಪ್ರಮುಖ ಜನಾಂಗವೆಂದರೆ ಮುಸ್ಲಿಂರು. ಪಕ್ಕೀರಸ್ವಾಮಿಯ ಈ ಮಸೀದಿಗೆ ಹಿಂದೂ ಮತ್ತು ಮುಸ್ಲಿಂರು ನಡೆದುಕೊಳ್ಳುವುದರ ಜೊತೆಗೆ ಭಾವೈಕ್ಯತೆಯ ಪ್ರತೀಕವಾಗಿದೆ. ಹಳ್ಳಿವಾಸಿ ಹಿಂದೂಗಳು ಮುಸ್ಲಿಂರ ಆಚರಣೆ ಪ್ರಭಾವಕ್ಕೆ ಒಳಗಾಗಿರುವುದು ಸತ್ಯ. ಹಾಗೆಯೇ ಮುಸ್ಲಿಂರು ಸಹ ಯುಗಾದಿ, ನಾಗರಪಂಚಮಿ ಮತ್ತು ದಸರಾದಂತಹ ಹಬ್ಬದ ದಿನಗಳಲ್ಲಿ ಪಾಲ್ಗೊಳ್ಳುವುದುಂಟು. ಮುಸ್ಲಿಂರು ಸಹ ಹಬ್ಬಗಳಲ್ಲಿ ಶ್ರೀ ವೀರಭದ್ರೇಶ್ವರನ ಗುಡಿಗೆ ಬರುತ್ತಾರೆ. ಆದರೆ ನೈವೇದ್ಯ, ಹಣ್ಣು-ಕಾಯಿಗಳನ್ನು ತರುವುದಿಲ್ಲ. ಜಾತ್ರೆಯ ದಿನ ಮನೆಯಲ್ಲಿ ಎಲ್ಲರೂ ಹಬ್ಬವನ್ನು ಮಾಡುತ್ತಾರೆ. ರಥೋತ್ಸವ ಸಂದರ್ಭದಲ್ಲಿ ಮುಸ್ಲಿಂ ಜನಾಂಗದವರು ಸ್ವಾಮಿಯ ವಿವಿಧ ಸೇವೆಯನ್ನು ಮಾಡುತ್ತಾರೆ. ಊರಲ್ಲಿ ಮುಸ್ಲಿಂ ಜನಾಂಗದ ಹಬ್ಬಗಳಿಗೆ ಹಿಂದುಗಳು, ಹಿಂದುಗಳ ಹಬ್ಬಗಳಿಗೆ ಮುಸ್ಲಿಂರು ಹಣವನ್ನು ಪಟ್ಟಿಯ ಮುಖಾಂತರ ಕೊಡುತ್ತಾರೆ.

ಮುಸ್ಲಿಂರ ಮೊಹರಂ ಹಬ್ಬವನ್ನು ಊರಲ್ಲಿ ಬೇರೆ ಜಾತಿಯವರು ಸಹ ಆಚರಿಸುತ್ತಾರೆ. ದೇವರಿಗೆ ನೈವೇದ್ಯ ಮಾಡಿಸಿಕೊಂಡು ಬರುತ್ತಾರೆ. ಅವುಗಳಲ್ಲಿ ಪ್ರಮುಖವಾದುದು. ಈ ಹಬ್ಬದಲ್ಲಿ ಹಲವಾರು ವೇಷಗಳನ್ನು ಹಾಕುವರು. ಹಿಂದೂಗಳು ಮತ್ತು ಮುಸ್ಲಿಂರು ಸೇರಿಯೇ ಈ ಹಬ್ಬವನ್ನು ಆಚರಿಸುತ್ತಾರೆ. ಮುಸ್ಲಿಂರ ಹಬ್ಬಗಳಲ್ಲಿ ಸವಾಲು ಪದ ಹೇಳುವುದು ಕಾಣಬಹುದು. ಮುಸ್ಲಿಂರು ಇಲ್ಲದ ಊರುಗಳಲ್ಲಿಯೂ ಸಹ ಹಿಂದೂಗಳು ಮೊಹರಾಂ ಹಬ್ಬ ಆಚರಿಸುವುದನ್ನು ಕಾಣಬಹುದು. ಹೀಗಾಗಿ ನಾವು ಬಹುತೇಕ ಹಳ್ಳಿಗಳಲ್ಲಿ ಹಿಂದೂ ಮುಸ್ಲಿಂರ ಭಾವೈಕ್ಯತೆಯನ್ನು ಇಂದಿಗೂ ಕಾಣಬಹುದಾಗಿದೆ.

ಹೀಗೆ ಶ್ರೀ ವೀರಭದ್ರೇಶ್ವರಸ್ವಾಮಿಯೊಂದಿಗೆ ಊರಿನ ಇತರ ದೈವಗಳ ಸಂಬಂಧವನ್ನು ಕಾಣಬಹುದು. ಊರಿನ ಎಲ್ಲಾ ದೈವಗಳ ಹಬ್ಬಗಳನ್ನು ಜನರು ಒಂದಾಗಿ ಆಚರಿಸುವುದರಿಂದ ಭಾವೈಕ್ಯತೆಯನ್ನು ಕಾಣಲು ಸಾಧ್ಯ. ಇಲ್ಲದಿದ್ದರೆ ಜಾತಿ ಹಲಹಕ್ಕೆ ಕಾರಣವಾಗುತ್ತದೆ.

ಅಧ್ಯಾಯ - ಆರು

ವೀರಭದ್ರೇಶ್ವರಸ್ವಾಮಿಯ ಕುರಿತು ನಂಬಿಕೆ ಮತ್ತು ಹರಕೆಗಳು

ಅಧ್ಯಾಯ - ಆರು

ವೀರಭದ್ರೇಶ್ವರಸ್ವಾಮಿಯ ಕುರಿತು ನಂಬಿಕೆ ಮತ್ತು ಹರಕೆಗಳು

ನಂಬಿಕೆಗಳು :

ಒಂದು ವಸ್ತುವಿನ ಅಥವಾ ವಿಷಯದ ಮೇಲೆ ವಿಶ್ವಾಸವಿಟ್ಟು, ಆ ಬಗೆಗೆ ಹೇಳುವ ಮಾತನ್ನು ನಂಬಿಕೆ ಎನ್ನಬಹುದು. ಸತ್ಯ ಸಂಗತಿಯಾಗಿರುವ ವಾಸ್ತುವಿಕತೆಯು ನಂಬಿಕೆ ಎನಿಸುವುದಿಲ್ಲ ಎಂಬ ಮಾತುಗಳಲ್ಲಿ ನಂಬಿಕೆಯ ಬಗೆಗಿನ ಸಂಪೂರ್ಣ ವಿವರ ಸೇರಿಕೊಂಡಿದೆ. ನಂಬಿಕೆ ವ್ಯಕ್ತಿ ಮತ್ತು ಸಮಾಜವು ಪರಂಪರಾಗತವಾಗಿ ಒಪ್ಪಕೊಂಡು ಅನುಸರಿಸುತ್ತಾ ಬರುತ್ತಿರುವ ವರ್ತನಗಳನ್ನು ನಾವು ನಂಬಿಕೆಗಳೆಂದು ಕರೆಯುತ್ತೇವೆ. ವೈಚಾರಿಕ ದೃಷ್ಟಿಗಿಂತ ಭಾವುಕ ದೃಷ್ಟಿ ಹೆಚ್ಚು ಇರುವಲ್ಲಿ ನಂಬಿಕೆಗಳು ಪ್ರಬಲವಾಗಿರುತ್ತವೆ.

ನಂಬಿಕೆಗಳು ಮಾನವನ ಜೀವನದಲ್ಲಿ ಅತೀ ಮುಖ್ಯವಾದ ಪಾತ್ರವನ್ನು ವಹಿಸುತ್ತವೆ. ಮನುಷ್ಯನ ಜೀವನ ನಡೆಯುವುದೇ ನಂಬಿಕೆಗಳಿಂದ ಈ ನಂಬಿಕೆಗಳು ಹಲವಾರು ರೀತಿಯಲ್ಲಿ ಪೂರಕವೂ, ಸಹಾಯಕವೂ ಆಗುತ್ತವೆ. ನಮ್ಮ ಜನಪದರಲ್ಲಿ ನಂಬಿಕೆಯೇ ಪ್ರಧಾನ. ನಂಬಿಕೆಯೇ ಸರ್ವಸ್ವವನ್ನು ಸ್ವೀಕರಿಸುತ್ತದೆ. ದೇವರ ಮೇಲಿನ ನಂಬಿಕೆ ಇನ್ನು ಅರ್ಥವಂತಿಕೆಯನ್ನು ಪಡೆದಿರುತ್ತದೆ.

ನಂಬಿಕೆಗಳು ಜನತಾ ಭಾವದ ಅಭಿವ್ಯಕ್ತಿ. ಜನತೆಯ ಪರಂಪಾರಾನುಗತ ಜ್ಞಾನಸುಧೆ, ಸುಸಂಸ್ಕೃತ ಹೃದಯದ ಪರಿಪಕ್ವ ಅನುಭವ ಸಾರವೆನ್ನಬಹುದು. ಭಕ್ತರು ಶ್ರೀ ವೀರಭದ್ರೇಶ್ವರನನ್ನು ಬಹಳ ನಿಷ್ಠೆಯಿಂದ ನಂಬುತ್ತಾರೆ. ಮತ್ತು ನಿತ್ಯವೂ ಪೂಜಿಸುತ್ತಾರೆ. ಈ ದೇವರನ್ನು ನಂಬಿದರೆ ನಮ್ಮ ಕಷ್ಟಗಳನ್ನು ಪರಿಹಾರ ಮಾಡುತ್ತಾನೆ ಎಂದು ಜನಪದರು ನಂಬುತ್ತಾರೆ. ಶ್ರೀ ವೀರಭದ್ರನ ಬಗೆಗೆ ಹಲವಾರು ನಂಬಿಕೆಗಳಿವೆ. ಶ್ರೀ ವೀರಭದ್ರನು ಬಹುಕಾಲದಿಂದಲೂ ಬಂಜೆಯರಿಗೆ ಮಕ್ಕಳನ್ನು ಕೊಡುವ ದೇವರೆಂದು ನಂಬಲಾಗುತ್ತದೆ. ನಮ್ಮಲ್ಲಿ ಕಷ್ಟಗಳು ಬಂದರೆ ಶ್ರೀ ವೀರಭದ್ರನನ್ನು ಬೇಡಿಕೊಂಡರೆ, ಎಲ್ಲಾ ಕಷ್ಟಗಳು ಪರಿಹಾರವಾಗುವವು ಎಂಬ ನಂಬಿಕೆ ಇದೆ.

ತಮ್ಮನ್ನು ಕಾಪಾಡುವ ದೇವತೆಗಾಗಿ ಜನರು ಏನು ತ್ಯಾಗ ಮಾಡಲು ಸಿದ್ಧ, ಯಾವ ಕಷ್ಟ ಅನುಭವಿಸಲೂ ಹಿಂಜರಿಯುವುದಿಲ್ಲ. ಆದಕ್ಕಾಗಿ ನಾನಾ ರೀತಿಯ ಹರಕೆ ಕಟ್ಟಿಕೊಂಡು ನಿಯತ್ತಿನಿಂದ ಹರಕೆ ತೀರಿಸುತ್ತಾರೆ. ಹರಕೆ ತೀರಸದಿದ್ದರೆ ಏನೆಲ್ಲಾ ಕಷ್ಟ ಪ್ರಾಪ್ತವಾಗುತ್ತದೆ ಎಂಬ ಭಯ ಜನರನ್ನು ಆವರಿಸಿದೆ.

ವೀರಭದ್ರೇಶ್ವರನ ಮೇಲೆ ಇಟ್ಟಿರುವ ನಂಬಿಕೆಗಳ ಹಿನ್ನೆಲೆಯಲ್ಲಿ ಭಕ್ತರು ವೀರಭದ್ರೇಶ್ವರನಿಗೆ ಬಗೆಬಗೆಯ ಹರಕೆಗಳನ್ನು ಒಪ್ಪಿಸುತ್ತಾರೆ. ವೈಯಕ್ತಿಕವಾಗಿ ಕಷ್ಟ ಬಂದವರು ಅಂಥ ಕಷ್ಟ ತೀರುವುದಕ್ಕಾಗಿ ದೈವಕ್ಕೆ ಹರಕೆ ಒಪ್ಪಿಸುತ್ತಾರೆ. ವೀರಭದ್ರೇಶ್ವರನಿಗೆ ಒಪ್ಪಿಸುವ ಹರಕೆಗಳನ್ನು ಕೆಳಕಂಡಂತೆ ಪಟ್ಟಿ ಮಾಡಬಹುದು.

೧. ತೆಂಗಿನಕಾಯಿ ಒಡೆಸುವುದು.

೨. ಉರುಳು ಸೇವೆ ಮಾಡುವುದು.

೩. ದೀಡ ನಮಸ್ಕಾರ ಹಾಕುವುದು.

೪. ಉಪವಾಸ ಮಾಡುವುದು.

೫. ದೈವಕ್ಕೆ ಮೀಸಲು ಹಾಕುವುದು.

೬. ಅಭಿಷೇಕ ಮೀಸಲು ಹಾಕುವುದು.

೭. ಹಣವನ್ನು ಕಾಣಿಕೆಯಾಗಿ ಹುಂಡಿಗೆ ಹಾಕುವುದು.

೮. ಕಾರ್ತಿಕ ದೀಪ ಹಚ್ಚುವುದು.

೯. ಶ್ರೀ ವೀರಭದ್ರೇಶ್ವರನ ದರ್ಶನಕ್ಕೆ ಭಕ್ತರು ಬರುವ ರಾಷ್ಟ್ರೀಯ ಹೆದ್ದಾರಿ ೧೩ರ ಕೂಡು ರಸ್ತೆಯಲ್ಲಿ ದುಂಡಾದ ಕಮಾನು ನಿರ್ಮಿಸಿ, ಮೇಲ್ಭಾಗದಲ್ಲಿ ಶ್ರೀ ಕ್ಷೇತ್ರ ವೀರಭದ್ರೇಶ್ವರ ದೇವಸ್ಥಾನ ಎಂದು ಬರೆಸುವುದು.

೧೦. ಕಲ್ಯಾಣ ಮಂಟಪದ ಒಳಗಡೆ ಮಜಾಕ್ ಬಂಡೆ ಹಾಕಿಸುವುದು.

೧೧. ಶ್ರೀ ದೊಡ್ಡ ವೀರಭದ್ರೇಶ್ವರ ದೇವಸ್ಥಾನದ ಗರ್ಭಗುಡಿಯ ಒಳಗಡೆ ಪೂರ್ಣ ಟೈಲ್ಸ್ ಮಾಡಿಸುವುದು. ಹಾಗೂ ಇದೇ ಗರ್ಭಗುಡಿಯ ಬಾಗಿಲಿಗೆ ಹಿತ್ತಾಳೆಯ ಚಿತ್ರದ ತಗಡನ್ನು ಮಾಡಿಸುವುದು.

೧೨. ಶ್ರೀ ವೀರಭದ್ರೇಶ್ವರ ರಥದ ಸಾಮಾನುಗಳನ್ನು ಇಡಲು ಬೇರೊಂದು ಕೋಣೆ ಕಟ್ಟಿಸುವುದು.

೧೩. ಶ್ರೀ ಸ್ವಾಮಿಯ ಪಲ್ಲಕ್ಕಿ ಹಾಗೂ ಇದಕ್ಕೆ ಹಿತ್ತಾಳೆ ಚಿತ್ರದ ತಗಡನ್ನು ಮಾಡಿಸುವುದು.

೧೪. ಶ್ರೀ ವೀರಭದ್ರೇಶ್ವರ ರಥಕ್ಕೆ ಹಿತ್ತಾಳೆಯ ಚಿತ್ರಪಟಗಳನ್ನು ಮಾಡಿಸುವುದು.

೧೫. ಶ್ರೀ ದೊಡ್ಡವೀರಭದ್ರೇಶ್ವರ ಸ್ವಾಮಿಗೆ ಬೆಳ್ಳಿಯ ಕವಚ ಮಾಡಿಸುವುದು ಹಾಗೂ ಬೆಳ್ಳಿಯ ಕುದುರೆ, ಹೆಡೆಯುಳ್ಳ ನಾಗಾಭರಣ ಉತ್ಸವ ಮೂರ್ತಿ, ಪ್ರಭಾವಳಿ, ಬೆಳ್ಳಿಯ ಛತ್ರಿ, ಛಪ್ಪಗೊಡಲಿ, ಡಾಲು, ರುಂಡಮಾಲೆ, ರುದ್ರಾಕ್ಷಿ ಮಾಲೆ, ಉತ್ತಮವಾದ ದೊಡ್ಡದಾದ ರೇಶ್ಮೆಯ ಮಡಿಗಳನ್ನು ನೀಡುವರು.

೧೬. ಸಣ್ಣ ವೀರಭದ್ರೇಶ್ವರ ದೇವಸ್ಥಾನದಲ್ಲಿ ಪೂಜಾ ಮಂಗಳಾರತಿ ಸಮಯದಲ್ಲಿ ಹಾಕುವ ಜಾಗಟೆ, ತಮ್ಮಟೆ, ಗಂಟೆ, ತಾಳಿ, ವಾದ್ಯವಿರುವ ಉಪಕರಣ ಮಾಡಿಸುವುದು, ಜನರೇಟರ್, ಗ್ಯಾಸ್‌ಲೈಟ್ ಹಾಗೂ ನಂದಿಧ್ವಜ ಮಾಡಿಸುವುದು.

ಹೀಗೆ ನಾನಾ ರೀತಿಯ ನಂಬಿಕೆ ಮತ್ತು ಹರಕೆ ಕಟ್ಟಿಕೊಂಡು ಭಯಭಕ್ತಿಯಿಂದ ಪೂರೈಸುತ್ತಾರೆ. ದೈಹಿಕವಾಗಿ ಮಾನಸಿಕವಾಗಿ, ಆರ್ಥಿಕವಾಗಿ ಕಷ್ಟವಾದರೂ ಸಹಿಸಿಕೊಳ್ಳುತ್ತಾರೆ. ಅನುಕೂಲಸ್ಥರು ದುಂದು ವೆಚ್ಚ ಮಾಡುವರು. ದೇವರಿಗೆ ಖರ್ಚು ಮಾಡುವುದಕ್ಕೆ ಜನರು ಜಿಪುಣರಾಗುವುದಿಲ್ಲ. ತಾವು ಹಸಿದಿದ್ದರೂ ಸಾಲ ಮಾಡಿಯಾದರೂ ದೇವರ ಸೇವೆ ಮಾಡುವವರಿದ್ದಾರೆ.

ಅಧ್ಯಾಯ - ಏಳು

ವೀರಭದ್ರೇಶ್ವರ ಸ್ವಾಮಿ ಕುರಿತ ಸಾಹಿತ್ಯ

೭.೧. : ಒಡಬುಗಳು

೭.೨. : ಪರಾಕುಗಳು

೭.೩. : ಸಾಹಿತ್ಯ

೭.೪. : ಪುರಾಣಗಳು

೭.೫. : ಐತಿಹ್ಯ

ಅಧ್ಯಾಯ - ಏಳು

ವೀರಭದ್ರೇಶ್ವರ ಸ್ವಾಮಿ ಕುರಿತ ಸಾಹಿತ್ಯ

ಸಾಹಿತ್ಯ :- ಯಾವ ಬರವಣಿಗೆಯು ನಮ್ಮ ಮನಸ್ಸಿಗೆ ಇಂಪನ್ನು ಕೊಡುತ್ತದೆಯೋ ಅದು ಸಾಹಿತ್ಯ. ಅದು ಮನಸ್ಸಿಗೆ ಇಂಪನ್ನಲ್ಲದೆ, ಮಾಧುರ್ಯ, ಸ್ವಾರಸ್ಯವನ್ನು ಕೊಡುತ್ತದೆ. ಒಂದು ದೇಶದ ರಾಜಕೀಯ ಚರಿತ್ರೆಯನ್ನು ರಾಜರುಗಳು ನಿರ್ಣಯಿಸುವಂತೆ ಸಾಹಿತ್ಯ ಚರಿತ್ರೆಯನ್ನು ಆಯಾ ಕಾಲದ ಕವಿಗಳು ರೂಪಿಸುತ್ತಾರೆ. ಆದುದರಿಂದಲೇ ಸಾಹಿತ್ಯ ಒಂದು ಜನಾಂಗದ ಅಂತರಂಗದ ಜೀವನ ಚರಿತ್ರೆ ಎಂದಾಯ್ತು. ಕವಿಗಳ ಕಾವ್ಯಗಳಿಂದ ಅಂದಿನ ಜನ ಜೀವನ ಚರಿತ್ರೆ ರೂಪಗೊಂಡ ರೀತಿಯನ್ನು ನಾವು ಸಾಹಿತ್ಯ ಚರಿತ್ರೆಯ ಅಭ್ಯಾಸದಿಂದ ತಿಳಿಯಬಹುದು. ವೀರಣ್ಣನನ್ನು ಕುರಿತಂತೆ ಒಡಬುಗಳು, ಮಂಗಳಾರತಿ ಪದಗಳು, ನಾಮಾವಳಿಗಳು ರಚಿತವಾಗಿರುವುದುಂಟು.

೭.೧. ಒಡಬುಗಳು :

'ಒಡಬು'ಗಳನ್ನು ಸಾಮಾನ್ಯವಾಗಿ ಪುರವಂತರು ಹೇಳುತ್ತಾರೆ. ಪುರವಂತರನ್ನು ವೀರಭದ್ರನ ಅವತಾರವೆಂದು ಭಕ್ತರು ಹೇಳುತ್ತಾರೆ. ವೀರಭದ್ರ ದೇವರ ಜಾತ್ರೆಯಂದು ಭವ್ಯವಾದ ಮೆರವಣಿಗೆ ನಡೆದ ಮರುದಿನಬೆಳಿಗ್ಗೆ ಬೆಂಕಿಯ ಮೇಲೆ ಓಡುವ 'ಕೊಂಡ' (ಅಗ್ನಿ) ಎಂಬ ಕಾರ್ಯಕ್ರಮ ನಡೆಯುತ್ತದೆ. ಆ ದಿವಸ ಸಾಮಾನ್ಯವಾಗಿ ಪುರವಂತರು ಕಾವಿ ಅಂಗಿ ತೊಟ್ಟು, ಅದಕ್ಕೆ ಬಿಗಿಯಾದ ಕಾಸೆಯನ್ನು ಕಟ್ಟಿ ತಲೆಗೆ ರೇಶ್ಮೆ ರುಮಾಲು ಬಿಗಿದು, ಕೊರಳಿಗೆ ರುದ್ರಾಕ್ಷಿ ಮಾಲೆ, ಒಂದು ಕೈಯಲ್ಲಿ ತ್ರಿಶೂಲ ಅಥವಾ ಕತ್ತಿ ಹಿಡಿದುಕೊಂಡು, ವೀರಾವೇಶದಿಂದ ಕುಣಿಯುತ್ತಾರೆ. ಹಾಗೆ ಕುಣಿಯುವಾಗ ಒಡಬುಗಳನ್ನು ಹೇಳುತ್ತಾರೆ. ಉದಾಹರಣೆಗೆ ಅವರು ಸಾಮಾನ್ಯವಾಗಿ ಹೇಳುವ ಒಡಬೊಂದು ಇಂತಿದೆ.

'ಅಹಹಾ ರುದ್ರ, ಶ್ರೀ ವೀರಭದ್ರನು ದಕ್ಷನ ಯಜ್ಞಕ್ಕೆ ಬಂದಾಗ, ಸೂರ್ಯನಂತೆ ಹೊಳೆಯುತ್ತಿದ್ದನು. ಸಾವಿರ ಶಿರಸ್ಸುಳ್ಳವನಾಗಿದ್ದನು. ಅವನ ಕೆಂಡದಂತಹ ಕಣ್ಣುಗಳು ಕೆಂಡವನ್ನು ಕಾರುತ್ತಿದ್ದವು. ಅರವತ್ತಾರು ಕೋಟಿ ರಾಕ್ಷಸರನ್ನು ಕೆಂಗಣ್ಣುಗಳಿಂದ ಸುಟ್ಟು ಬೂದಿ ಮಾಡಿದನು. ಆ

ಬೂದಿಯನ್ನು ದಿಗಂತಕ್ಕೆ ಹುಸೆ ಎಂದು ಉಸಿರು ಬಿಟ್ಟು ಹಾರಿಸಿದನು. ದಿಗಂತದಲ್ಲಿ ಸುತ್ತಿ, ಸೂರ್ಯದೇವರು ಮರೆಯಾದನು. ಜನವೆಲ್ಲ ಕತ್ತಲಲ್ಲಿ ಮುಳುಗಿತು.. ಅಹಹಾ ವೀರ.... ಅಹಹಾ ರುದ್ರ... . ಹೀಗೆ ಒಡಬುಗಳು ಸುದೀರ್ಘವಾಗಿ ಮುಂದುವರೆಯುತ್ತವೆ. ಈ ಒಡಬುಗಳಲ್ಲಿ ವೀರಭದ್ರ ದೇವರ ವಿರಾಟ್ ಸ್ವರೂಪ, ಪರಾಕ್ರಮ, ಉಗ್ರತೆ ಮತ್ತಿತರ ವಿಚಾರಗಳನ್ನು ವಿವರಿಸಲಾಗಿದೆ.

ವೀರೇಶ ಜನನ

ಆಹಾ ರುದ್ರ, ಆಹಾ ವೀರೇಶ್ವರನೇ, ವೀರ ಶಿಶುವಿನ
ಅವತಾರ ಎಂತೆಂದು ಕೇಳಿರೈ ನೀವು -
ದೇವಾನು ದೇವತೆಗಳ ಮಾವನಾದ ದಕ್ಷ ಬ್ರಹ್ಮನು ಶಿವನಿಗಿಂತ
ತಾಬಾಗಿಲೆಂದು ಬಗೆದ । ಕೈಲಾಸ ಪದವಿ ಬೇಕೆಂದ । ಅಂಥ ಪದವಿಗೋ
ಸುಗ ಯಜ್ಞವನೆ ಹೂಡಿದ । ಶಿವನಿಲ್ಲದಾಯಜ್ಞ - ದಧೀಚಿಗೆ
ಸಿಟ್ಟನ್ನೇ ತಂದಿತು । ಶಿವ ಯಜ್ಞ ಕುಂಡದಿ ಬೀಳೇ ಈ ಸುದ್ಧಿ ಶಿವ
ಕೇಳಿ । ಕಂಡು ಭಯಂಕರ ರುದ್ರನಾದ । ಹಣೆಗಣ್ಣ ಕಿಚ್ಚಿ ನುರಿಯಲ್ಲಿ
ಶ್ರೀ ವೀರೇಶ ಜನಿಸಿದ । ಗುಡುಗುಡಿಸಿ ಆರ್ಭಟಿಸಿ । ಪೊಡವಿನಡು
ಗುವಂತೆ ಕೇಕೆ ಹಾಕಿದ । ಏನಪ್ಪಣೆ ಎವೆ । ದಕ್ಷನ ಶಿರವ ಹರಿಯಂದು
ಶಿವ ಆಜ್ಞೆಯನಿತ್ತ । ಯಜ್ಞ ಧ್ವಂಸ ಮಾಡಿ । ಶರಣೆಂದಪಗೆ
ಕಾಯ್ದನಯ್ಯ ನಮ್ಮ ಕರಿ ವೀರಭದ್ರ ಕಡೆ ಕಡೆ।.

ಅಹಹಾ ವೀರ । ಅಹಹಾ ಭದ್ರ। ಶರಭ ರೂಪಿಯಾದ ನಿನ್ನ
ಮಹಿಮೆಯೆಂ ಪೇಳ್ವೆ । ಋಷಿಗಳಿಗೆ ವಿಪರೀತನಾದ ಅರಣ್ಯ
ಕಶ್ಯಪನ ಗರ್ವ ಮಿತಿ ಮೀರಿತು । ಶಂಕರನಾದೇಶದಂತೆ ಶ್ರೀ ವಿಷ್ಣು
ನರಸಿಂಹವಾಗಿ ಕಶ್ಯಪನನ್ನು ಕೊಂದು ಅವನ ರಕ್ತ ಕುಡಿದು ।
ಮದೋನ್ಮತ್ತನಾದ । ಆ ನರಸಿಂಹ ರಕ್ಕಸನಂತೆ ದೇವಾನು ದೇವತೆಗಳಿಗೆ
ಮಾರಕನಾಗಿ ವರ್ತಿಸೆ । ಶಿವ ವೀರಭದ್ರನನ್ನು ಕರೆದು - ನರಸಿಂಹನ
ಗರ್ವಭಂಗ ಮಾಡೆಂದ ಕೂಡಲೇ । ಶರಭಾವತಾರನಾಗಿ ನರಸಿಂಹನ
ಚರ್ಮ ಸುಲಿದು । ಶಿಷ್ಟರ ರಕ್ಷಣೆ ಮಾಡಿದನ್ಯ ಶ್ರೀ ವೀರಭದ್ರದೇವ ।
ಕಡೆ। ಕಡೆ ।.

ದಕ್ಷ ಸಂಹಾರ

ಅಹಹಾ ರುದ್ರ, ಅಹಹಾ ಭದ್ರಾ, ನಮ್ಮ ಶ್ರೀ ವೀರೇಶ್ವರರು
ಹೋಗಿರ್ದರಯ್ಯಾ ಪ್ರಳಯ ಕಾಲದ ಅಗ್ನಿ ಮೂರ್ತಿಗೊಂಡಂತೆ
ಕಿಡಿಯನುಗುಳವ ನೇತ್ರ । ಹಣೆಯಲ್ಲಿ ವಿಭೂತಿ ।
ಕೈಯಲ್ಲಿ ಮಸೆದ ಕತ್ತಿ, ರಣಚೂರಿ, ಕಠಾರಿ । ವೀರ ಬಾಣ ಹೊಗೆ ಬಾಣ
ವಜ್ರಬಾಣ, ರನ್ನಗತ್ತಿ । ಉರಲಿನ ಹಗ್ಗ ಎಂಬೀ ಆಯುಧಗಳನ್ನು
ಧರಿಸಿ - ಭೋ ಎಂದು ಆರ್ಭಟಿಸಿ,
ದಕ್ಷನ ಯಜ್ಞ ಭೂಮಿಯನ್ನು ಹೊಕ್ಕು । ಅಲ್ಲಿ ಸೇರಿದ
ಕೋಟ್ಯಾನು ಕೋಟಿ ದೇವತೆಗಳನ್ನು ಕಂಡು । ಬದ್ಧ ಬ್ರಕುಟಿಯಾಗಿ
ಉರಿದೆದ್ದನಯ್ಯಾ, ಇದರಿಂದ ಸೂರ್ಯ, ಚಂದ್ರ, ವಿಷ್ಣು, ಬ್ರಹ್ಮರ ಎದೆ
ಯೊಡೆದು ನೀರಾಯಿತಯ್ಯ । ಇಂಥ ರುದ್ರ ರೂಪಿ ವೀರಭದ್ರರು । ಶಿವ
ದ್ರೋಹಿಯಾದ ದಕ್ಷ ಬ್ರಹ್ಮನನ್ನು ಹಿಡಿದೆಳೆದು । ತಲೆಕಡಿದನಯ್ಯಾ
ದಕ್ಷನ ಮಡದಿ ಪ್ರಸೂತಿ ವೀರಭದ್ರ ದೇವರಿಗೆ - '' ಎನ್ನಯ್ಯಾ ನಿನ್ನಡಿಗೆರ
ಗಿ ಬೇಡುವೆ ಮಾಂಗಲ್ಯ ಕಾಯಿ'' ಎಂದೊಡೆ ದಕ್ಷನಿಗೆ ಕುಂದಲೆಯಿಟ್ಟು ।
ಪ್ರಾಣ ದಾನ ಮಾಡಿದ - ಚನ್ನಿಗ ಚನ್ನ ವೀರಭದ್ರ । ಕರುಣಾ ಕೃಪಾಲ
ಕಡೆ...ಕಡೆ...

ಮೂರು ಲೋಕದ ಗಂಡ ಶ್ರೀ ವೀರಭದ್ರ :

ಮತ್ತು ಕುತ್ತಿನ ಗಂಡಾ । ಕೆರೆ ಕೋಡಿಯಲ್ಲಿರುವ ಕಿರುಕುಳ ದೇವರ ಗಂಡಾ ।
ಮಾಡಲನಾಡಿನ ಮೂಕ ಚವಡಿಯ ಗಂಡಾ, ದ್ರೋಹಿ ನಿಂದಕರ ಗಂಡಾ ।
ನಾಸ್ತಿಕ ಪಾಪಿ ತಂಡಾಲರ ಮಿಂಡೆ। ಹರಿಯುವ ಹಾವಿನ ಗಂಡಾ ;
ಎರಿವೆ ಕಿಚ್ಚಿನ ಗಂಡಾ , ಮರುಳ ದುಷ್ಪಾಪಿಗಳ ಗಂಡಾ.
ಶ್ರೀ ವೀರಭದ್ರ ಕಡೆ ಕಡೆ ।

ಜೋಗುಳ ಹಾಡು ಶ್ರೀ ವೀರಭದ್ರೇಶ್ವರ

ಲಾಲೀ ಶ್ರೀ ವೀರಭದ್ರೇಶ್ವರನೇ ಲಾಲೀ ಶ್ರೀ ಶಿವಕುಮಾರ ಸುತನೇ ಲಾಲೀ ಜೋ-ಜೋ ಸನ್ಮುನಿ ಪಂಡಿತನೇ ಲಾಲೀ ಶಿವ ಮಾತೆ ಗಿರಿಜಯ ಹರಣವ ಕಾಯ್ದವನೇ ಲಾಲೀ ॥ ಪ ॥
ಕನಕ ರತ್ನಗಳ ಕಾಲ್ಗಳನೇ ಹೂಡೀ ನಾಲ್ಕು ವೇದಗಳನ್ನು ಸರಪಳಿಯ ಮಾಡೀ ಅನೇಕ ಭೂಮಂಡಲದ ಹಲಗೆಯನೇ ಮಾಡಿ ಆಶ್ಚರ್ಯ ಜನಕವಾಗಿ ನಿರ್ಮಿಗದ, ಪಚ್ಚೆಯ ತೊಟ್ಟಿಲ್ಲಿ ಶ್ರೀ ವೀರಭದ್ರೇಶ್ವರನಾ ತೂಗಿದರು ಲಾಲೀ ನಿರ್ಮಲ ಚರಿತ್ರನೆಂದು ವೀರಧರ್ಮ ಸಂಸ್ಥಾಪಕರನೆಂದು ಮರ್ಮಧರ್ಮಗಳ ಹಾಡಿ ತೂಗಿದರು.

೧॥ ಗೌರೀ ಶಾರದೆ ಲಕುಮಿಯರೆ ಸೋಮಶೇಖರ ಸುತನೆಂದು ನೇಮದಿಂದಲಿ ಹಾಡುತ ತೂಗಿದರೂ ವೃದ್ಧನಾರಿಯರೆಲ್ಲರೂ ಜಗದೊಳಗೆ ಪ್ರಸಿದ್ಧನಿವನೆಂದ ಶುದ್ಧಾನುರಾಗದಿಂದ ಹಾಡಿ ತೂಗಿದರು ಲಾಲೀ

೨॥ ದೇವಾದಿ ದೇವನೆಂದು ಈ ಶಿಶುವು ಭಾವನಾತೀತನೆಂದು ದೇವಗಂದರ್ವರಾಡಿ ತೂಗಿದರು ಲಾಲೀಲೀಲಾ ಮೂಲಾ ಕಾರಣ ಜೋ ಜೋ ಲೀಲೆಯ ಕೋಲಾಹಲ ಗೈದವನೇ ಜೋ ಜೋ ಭಕ್ತರ ಚಿತಾಮಣಿಯೇ ಜೋ ಜೋ ಶುಭಗಣಂಗಳ ಮಹಾಖಣಿಯೇ ವೀರಭದ್ರೇಶ್ವರನೇ ಸರ್ವ ದೇವೋತ್ತಮ ನಾದವನೇ ಜೋ ಜೋ ಸರ್ವಭಕ್ತರ ಪೊರವ ವೀರಭದ್ರೇಶ್ವರನೇ ಜೋ ಜೋ ಕಾಮಿತ ಜನರಿಗೆ ಕಾಮಿತಾರ್ಥವ ಪ್ರೇಮದಿಂದಲಿ ಕೊಡುವ ಸ್ವಾಮಿ ವೀರಣ್ಣನೇ ಜೋ ಜೋ.

೧ ಮೊರಬದಾ ವಾಸಿಯನು ಕಾಳಿಕಾಂಬೆಯೊಡೆಯನನು
ಶ್ರೀ ವೀರಭದ್ರೇಶ್ವರನನು ಬೇಡಿಕೊಂಡೆ
ನಡೆಸಿ ಹೋಗಲಿ ನಮ್ಮ ಪಾಪಕರ್ಮಗಳೆಲ್ಲಾ
ಸತತ ಪೊರೆಯೋ ನಮ್ಮ ಶ್ರೀ ವೀರಭದ್ರೇಶ್ವರನೇ

೨ ಕರ್ಮಗಳು ಹೆಚ್ಚಾಗಿ ಧರ್ಮಕುಗ್ಗಿಹುದೀಗ
ಬಳಲಿ ಚಂಡಾಗಿಹರು ಜನ ಬಹುವಿಧದೊಳು
ಶ್ರೀ ವೀವ ಭದ್ರೇಶ್ವರ ನಡಿಯ ಭಜಿಸುವುದಿದಕೆ ಮೊಕ್ಷವೆನೆ
ನುಡಿಯುತಿಹೆ ನೀನಾಡಿಸಿದಂತೆ ಶ್ರೀ ವೀರೇಶನೇ

೩ ವೀರಾಧಿವೀರಾ ನಡುಗಣ್ಣನಾ ಸುತನೇ
ಅಡಿಗಣ್ಣ ಶ್ರೀ ವೀರಭದ್ರೇಶ್ವರನೇ ನಿನ್ನಾರ್ಭಟವ ಕಂಡ
ಹೆದರಿದಾ ಜನ ಭಯಭಕ್ತಿಯಿಂದ ನಿಂದಿಹರು ದೂರ
ವೆಂದಿಸುತ ದಯೆ ತೋರೋ ವೀರೇಶನೇ

೪ ಮೂಡಲರಿದಿಹುದು ಮುಂಬಳಗಾಗಿಹುದು
ಸುತ್ತಲೂ ವೇದ ಮಂತ್ರ ಕೇಳುತಿಹುದು
ತ್ರಿನೇತ್ರ ಪುತ್ರನೇ ಶ್ರೀ ವೀರ ಭದ್ರೇಶ್ವರನೇ ನಿದೇ
ಗತಿಯೆಂದು ಸುತ್ತಿಸುವೆನು ನಾನತಿ ವಿನೆಯದಲಿ

ಮಂಗಳಾರತಿ

೧. ಕರ್ಪೂರಾರತಿ ಬೆಳಗಿರಿ ಕರಿವೀರಗೆ ಗಂಭೀರಗೇ
ನೀಲಕಂದರನಿಗಮಗೋಚರ । ಬಾಲ ಚಂದ್ರಾಭರಣಗೆ
ಪ್ರಳಯ ಕಾಲದ ಅಗ್ನಿಗಣ್ಣಲಿ ಜನಿಸಿದಾ ಶ್ರೀ ವೀರಗೇ
ವಾರಿಜೋದ್ಭವ ಶಿರವ ಹರಿದನು । ಮೊರಹರ ಮಗ ವೀರಗೆ
ಘೋರ ಪಾಪವ ದೂರ ಮಾಡುವ ಶೂರ ವೀರಭದ್ರಗೆ
ಶರಣ ಜನಕೆ ವರವನಿತ್ತ ಪರಮ ಪಾರ್ವತಿ ಪುತ್ರಗೆ
ಧರೆಯೊಳಧಿಕ ಮೊರಬಕಾ ಶ್ರೀ ವೀರಭದ್ರ ದೇವಗೇ.

೨. ಜಯಮಂಗಳಂ ನಿತ್ಯ ಶುಭ ಮಂಗಳಂ ।
ಜಯಜಯತು ಜಗಜ್ಜವನಿ ಬಗಳಾಂಬಗೆ ॥ಪಲ್ಲವಿ॥
ಕಾಳಿಕೆಯು ಎನಿಸುತಲಿ ಕೀಳು ಮಧುವೆಂಬುವನ ।
ಖೂಳ ಕೈಟಭವನೆಂಬು ವಸುರರುಗಳಾ ॥
ತಾಳಿ ಪುರುತ್ವವನು ಸೀಳುತಲಿ ಮಸ್ತಕವ ।
ಹೋಳು ಸಹಸ್ರ ಮಾಡಿದ ಪಾಲಾಕ್ಷಿಗೇ ।೧॥

ದುಷ್ಟಮಹಿಷಾಸುರನು ಅಷ್ಟದಿಕ್ಪಾಲಕರ ।
ಪಟ್ಟಣಕೆ ದೊರೆಯೊಗ ದೇವರೊಳೊ ಕಷ್ಟಪರಿಹರಿಸೆನುತ
ನಿಷ್ಠೆಯಿಂ ಮೊರೆಯಿಡಲು
ಕುಟ್ಟಿ ಮಹಿಷನ ಕೊಂದ ಮಾಹಾಲಕ್ಷ್ಮಿಗೇ ।೨॥

ಹಿರಿಯೆ ಶುಂಭನು ತಾನು ಕಿರಿಯ ನಿಶಂಭನು
ಸುರರ ಭಾದಿಸಲವರು ಮೊರೆಯಿಡುತಿರೇ ॥
ದುರುಳ ದೈತ್ಯರ ಶಿರವ ಹರಿದು ಹರುಷವಾ ತಾಳ್ದೆ ।
ಗುರು ಚಿದಾನಂದ ಭಾರತೀ ದೇವಿಗೇ ।೩॥

-ಶ್ರೀ ಚಿದಾನಂದ ಅವದೂತರು

೩ ಜ್ಯೋತಿ ಬೆಳಗುತಿದೆ ವಿಮಲ ಪರಂ ।
ಜ್ಯೋತಿ ಬೆಳಗುತಿದೆ
ಮಾತು ಮನಂಗಳಿಂದತ್ತತ್ತ ಮೀರಿದ
ಸಾತಿಶಯದ ನಿರುಪಾದಿಕ ನಿರ್ಮಲ ॥ ಪ ॥

ಶಿವ ಧರ್ಮನಾಳವೆಂತೆಂಬ ಕಂಬದ ಮೇಲೆ
ಸುವಿವೇಕ ಹೃದಯೊಬ್ಬ ಪ್ರಣತೆಯೊಳು ।
ಸವಯದ ಸದ್ಭಕ್ತಿ ರಸತೈಲ ಲೇಬಿದ
ಪ್ರವಿಮಲ ಕಳೆಯಂಬ ವೆತ್ತಿ ವಿಡಿದು ದಿವ್ಯ

ಮುಸುಕಿದ ವಿಷಯ ಪತಂಗ ಬಿದ್ದುರುಳೆ ತಾ
ಮಸ ಬುದ್ದಿ ಯೆಂಬ ಕತ್ತಲೆಯಳಿಯ ।
ಮಸಗಿ ಸುಜ್ಞಾನವೆಂಬಂತೆಂಬ ಮಹಾ ಪ್ರಭೆ
ಪಸರಿಸಿ ಮಾಯಾ ಕಾಳಿಕೆ ಪೂರ್ದದನುಪಮ ।೨॥

ಪ್ರಣವಾಕಾರದ ಗುಣ ಮೂರು ಮಟ್ಟದ
ಗಣನೆಗೆತಲೆತಾರ್ಥವನೆ ತೋರುವ ।
ಅಣು ಮಾತ್ರ ಚಲನೆಯಿಲ್ಲದ ಮೋಕ್ಷ ಚಿಂತಾ
ಮಣಿಯನಿಸುವ ಶಂಭುಲಿಂಗವೆ ತಾನಾದ ॥೩॥

- ಶ್ರೀ ನಿಜಗುಣ ಶಿವಲಿಂಗ ಯೋಗಿಗಳು

೧. ಮೊರಭದಾ ವಾಸಿಯನು ಕಾಳಿಕಾಂಬೆಯೊಡೆಯನು
ಶ್ರೀ ವೀರಭದ್ರೇಶ್ವರನನು ಬೇಡಿಕೊಂಡು
ನಶಿಸಿ ಹೋಗಲಿ ನಮ್ಮ ಪಾಪ ಕರ್ಮಗಳೆಲ್ಲ
ಸತತ ಪೊರೆಯೋ ನಮ್ಮ ಶ್ರೀ ವೀರಭದ್ರೇಶ್ವರನೇ

೨. ಕರ್ಮಗಳು ಹೆಚ್ಚಾಗಿ ದಮರ ಕುಗ್ಗಿ ಹುದೀಗ
ಬಳಲಿ ಬೆಂಡಾಗಿಹರು ಜನ ಬಹು ವಿಧದೊಳು
ಶ್ರೀ ವೀರಭದ್ರೇಶ್ವರ ನಡಯು ಭಜಿಸುವುದಿದಕೆ ದೊಷಬೆನೆ
ನುಡಿಯುತಿಹೆ ನೀನಾಡಿಸಿದಂತೆ ಶ್ರೀ ವೀರೇಶನೇ.

೩. ವೀರಾಧಿ ವೀರಾ ನಡುಗಣ್ಣನಾ ಸುತನೇ
ಅಡಿಗಣ್ಣ ಶ್ರೀ ವೀರಭದ್ರೇಶ್ವರನೇ ನಿನ್ನಾರ್ಭಟವ ಕಂಡ
ಹೆದರಿದಾ ಜನ ಭಯ ಭಕ್ತಿಯಿಂದ ನಿಂದಿಹರು ಗಣರ
ವಂದಿಸುತ ದಯೆ ತೋರೋ ವೀರೇಶನೇ !!!

೪. ಮೂಡಲರಿದಿಹುದು ಮುಂಬೆಳಗಾಗಿಹುದು
ಸುತ್ತಲೂ ವೇದಮಂತ್ರ ಕೇಳುತಿಹುದೂ
ತ್ರಿ ನೇತ್ರ ಪುತ್ರನೇ ಶ್ರೀ ವೀರಬದ್ರೇಶ್ವರನೇ ನೀನೇ
ಗತಿಯೆಂದು ಸ್ತುತಿಸುವೆನು ನಾನತಿ ವಿನಯದಲಿ

೫. ಏಳು ಮೊರಬದ ಗ್ರೀ ಸರನೇ ಏಳು ವೀರಭದ್ರೇಶ್ವರನೇ
ಏಳು ಕಾಳಿಕಾಂಬಾ ರಮಣನೇ ನೀನೇಳು
ಏಳು ವೀರೇಶ್ವರನೇ ಏಳುರುದ್ರೇಶ್ವರನೇ ಏಳು
ಏಳು ನಮ್ಮ ರಕ್ಷಸಿ ಪೊರೆಯಲು ಏಳಯ್ಯ ಏಳು

೬. ಶಿವನ ಸತಿ ಪಾರ್ವತಿಯು ಕರದೊಳಗೆ ಬಿಲ್ವದಳ
ಸರವಿಡಿದು ನಿನ್ನದರುಶನಕೆ ಬಂದಿಹಳು
ಕರೆವಳೊ ಕಾಳಿಕಾಂಬೆ ವೀರೇಶ್ವರ ನೆದ್ದನೇ ಎಂದು
ಕರೆದರೆ ಬರುವ ವೀರಭದ್ರೇಶ್ವರನೇ ಏಳಯ್ಯ ಏಳು

೭. ಶ್ರೀ ಗಣೇಶ ಷಣ್ಮುಖ ವೃಷಭ ನಂದೀಶರಾದಿಯಾಗಿ
ಸಂತೋಷದಿಂದಿಲ್ಲಿ ಬಂದು ನಿಂದಿಹರು ಅಂದ
ಚಂದದ ಪುಷ್ಪಗಳನು ಒಂದಾಗಿ ಧರಿಸಲು ತಂದಿಹರು
ಸುದ ರಾಂಗನೆ ನೀನೇಳು ಬೆಳಗಾಯಿತು

೮. ಹನುಮನ ಹೆಗಲ ಮೇಲೊಪ್ಪುವ ಉಮೆ ಶವಹೇಳು
ಲಿಂಗನೇಮಕ ಭಂಗವಾಗುವುದೆಂದು ಸಂದೇಹದಿ ನೋಡಲ
ಲಿಂಗತನ್ನಂಗಲಿ ತೋರದಿರಲು ಲಿಂಗವಿಲ್ಲದಮಗ ಏನಗೆಕೆಂದು
ವಾಯ ಬಾಗದಲ್ಲಿ ನಿಂತಿಹ ಹನುಮಗೆ ಲಿಂಗತೋರಿದ ಮಹಿಮನೇಳು

೯. ಮೊರಬದಾ ಮಠದ ಜಂಗಮರು ವೇದ ಘೋಷಿಸುತಿಹರು
ಅರಿದ ಪೂಜಾರಿಯು ಹಾಲು ಪಾತ್ರೆಯ ನಿಡಿದು ನಿಂತಿಹನು
ಹಾಲು ಮರ್ಜುನಕಾಗಿ ಭಕ್ತರು ಬಂದಿಹರು ಸಾಲಾಗಿ
ಮೇಲಾದ ಭಕ್ತರ ಪೊರೆಯಲು ವೀರೇಶ್ವರನೇ ಏಳೂ

೧೦. ಮೂಡಲರಿಯುವ ಮುನ್ನ ನೂರು ಜನ ನಾರಿಯರು
ನೂರು ಕುಂಭಗಳ ನಿಡಿದು ಊರಜನ ರೊಡಗೂಡಿ
ಅಡಿಗಡಿಗೆ ವೀರೇಶನೆಗಾರು ಸರಿಯೆಂದು ನುಡುಯುತ
ಹಾರೈಸಿ ನೀರ ನಿನಗೆರೆಯಲು ಬಂದಿಗರು ಏಳಯ್ಯ ಬೆಳಗಾಯಿತು

೧೧. ಸುರಗಿ ಸೇವಂತಿಗೆಯ ಮರುಗ ಬಕುಳ ಚಂಪಕ
ಮಲ್ಲಿಗಿ ವರಬಿಲ್ವದಳ ಪತ್ರಿ ಪುಷ್ಪಗಳ ನಿಡಿದು
ಸಹಸ್ರ ನಾಮಾವಳಿಯ ಶೃತಿ ಮಾಡಲು
ಸರ್ವ ಭಕ್ತರೊಂದಾಗಿ ಬಂದಿಹರು ಏಳಯ್ಯ ! ಏಳು !

೧೨. ಊರ ನಾರಿಯರೆಲ್ಲ ಮತ್ತೆ ವಾರಗಿತ್ತಿಯ ರಲ್ಲದತಿ
ಕೇರಿ ಕೇರಿಯ ಭಕ್ತ ಮಾಹೇಶ್ವರರೆಲ್ಲ ರೊಡಗೂಡಿ
ಕಲಶ ಕನ್ನಡಿ ಹಿಡಿದು ತಾಳ ಮೇಳ ವಾಧ್ಯಗಳೊಡನೆ
ಬಂದಿಹರು ದರುಶನಕೆ ನೀ ಏಳು ಬೆಳಗಾಯಿತು.

೧೩. ನಾನಾವಿಧಧ ಪರಿಮಳ ಪುಷ್ಪಗಳ ಸರಗಳನು
ಬಿರಿದ ಮಲ್ಲಿಗೆಯ ಬಿಡಿಹೂಗಳ ಶ್ರೀ ವೀರಭದ್ರೇಶ್ವರನಡಿಗೆ
ಅರ್ಪಿಸಲು ಅನತೀ ದೂರದಿಂದ ವನಿತೆಯರು ಹಾಡುತ
ಬಂದಿಹರು ತಡಮಾಡದತಿ ವೀರಭದ್ರೇಶ್ವರನೆ ಏಳು ಬೆಳಗಾಯಯಿತು

೧೪. ಅರಿತ ಪೂಜಾರಿಯು ಮರೆತಿರುವನೆಂದು ಮಂತ್ರಯಿಂದರಿತು
ಪರಿಂಸಲು ಶೋಮಶೇಖರ ರಾಜ ಗುಡಿಗೆ ಬಂದು
ನಿನ್ನಡಿಗೆರಗಿ ಭಯದಿಂ ನಡುಗಿ ತನ್ನ ತಪ್ಪನ್ನೊಪ್ಪಿ
ಶೀಮೆಯಾ ಭೂಮಿ ಕೊಡಲು ಶೋಮಶೇಖರ ರಾಜ ಬಂದಿಗನೇಳು

೧೫. ಸೋಮಶೇಖರರಾಜ ನಿನ್ನ ಪೂಜಿಸಿ ಮತ್ತೆ
ಶೀಮೆಯಾ ರಾಜನಾದ ಸವಿನೆನಪಿಗೆ
ಸ್ವಾಮಿ ವೀರಭದ್ರೇಶ್ವರ ನಿನ್ನ ದರುಶನಕೆ
ನೇಮಕದಿಂದಲಿ ಬಂದಿಹನು ವೀರ ಭದ್ರೇಶ್ವರ ನೀ ಏಳು !

೧೬. ನವರತ್ನ ಹಾರಗಳ ಕೇಯೂರು ಮುಕುಟಗಳ
ಕರದ ಕಂಕಣದ ಕಣರಕುಂಡಲಾಭರಣಗಳ
ಕರದ ಕಿರುಗತ್ತಿ ನಿನಗರ್ಪಿಸಲು ತ್ವರದಿ ತಂದಿಹನು
ಸೋಮ ಶೇಖರ ರಾಜ ವೀರಭದ್ರೇಶ್ವರ ನೀ ಏಳಯ್ಯ ಏಳು

೧೭. ಉಕ್ಕಡದಾ ಭಕ್ತರು ದಿಕ್ಕಡಿದು ಬರುತಿಹರು
ಹಚ್ಚಡಾಸಿಗೆಯ ತಡಿ ದಿಂಬು ಮೇಲಾದ ಹೊದಿಕೆಗಳ
ಚೊಕ್ಕ ರೇಷ್ಮೆಯ ಚಿಕ್ಕ ಝುರಿ ಧಡಿಯ ಕೆಂಪಾದ ಮಡಿಯ
ಅಕ್ಕರದಿಂದಲಿ ತಂದಿಹರು ತಂಪಾಗಿ ನೀ ಏಳು ಬೆಳಗಾಯಿತು

೧೮. ಕೂಡ್ಲಿಗಿ ಕೊಟ್ಟೂರು ಹರಿಹರ ಹರಪನಹಳ್ಳಿ
ಬಳ್ಳಾರಿ ಬೆಂಗಳೂರು ದಾವಣಗೆರೆ ದುರ್ಗದಾ
ಬಲವಂತ ರೈಶಿರಿಯ ನಿನಗಾಗಿ ತಂದಿಹರು
ಚಲುವಂತ ಧೀರ ವೀರೇಶ ನೇಳು ಬೆಳಗಾಯಿತು.

೧೯. ಶೈವ ವೀರಶೈವ ವೈಷ್ಣವ ವಾಲ್ಮೀಕಿ
ಯಾದ ವಿಶ್ವಕರ್ಮರಾದಿಯಾಗಿ ಬಂದು
ಭಾವ ಭೇಧವನಳಿದು ನಿನ್ನ ಸೇವೆಗೈ ಬಂದಿಹರು
ಗಾಮಧಾನದಿ ನೀ ಏಳಯ್ಯ ಏಳು

೨೦. ಎಲ್ಲ ಜಾತಿಯ ಜನರು ಬಸವೇಶ ಧರ್ಮಪ್ಪ
ರಲ್ಲದತಿ ಮಾರು ತೇಶ ಮುಪೋಶ ವೀರೇಶನೇ
ಸಲ್ಲಿಸುತ ವಂದನೆಯಲ್ಲಿ ಗಲ್ಲಿಗೆ ನಿನ್ನ ಪೂಜಿಸಲೆಂದು
ಸೋಜಿಗ ದೆಂದಲಿ ಜಾಜಿಮಲ್ಲಿಗೆ ತಂದಿಹರು ಬೇಗನೇಳು ಬೆಳಗಾಯಿತು

೨೧. ಚರ್ಮದಾ ವ್ಯಾಪಾರಿ ಮರ್ಮನರಿಯದಲೆ ಕುದುರೆಯನೇರಿ
ಕರ್ಮಾನು ಸಾರದಲಿ ಮುಗ್ಗರಿಸಿದಾ ಕುದುರೆ ಗದ್ದರ ಸ್ವರದಿತಾನು
ತಮ್ಮ ಭಾಷೆಯಲಿ "ದುರೆಬಾ ದುರೆಬಾ ದುರೆಬಾ"
ಎಂದಾಗಲೇ ಮೊದಲಾಯ್ತು
ಮೊರಬಿದಾ ಎಂಬೆಸರು ಪಸರಿಸಲು ಏಳು ಬೆಳಗಾಯತು

೨೨. ಮಂದಮತಿ ಕುದುರೆಯ ನೇರಿ ಮಂದುಗಕೆ ಆಯ್ತೆಂದು ಶಿಕ್ಷೆ
ಬಂದ ಜನರಾಡಿಕೊಂಡರು ವಂದಿಸಿಕೋ ಬಂದ ಭವಣೆಯ ಬಿಡಿಸೆಂದು
ಬಂದಂತಾದರೆ ಮಾಡಿಸೆಳೆಸುವೆನು ಹೊಸದೊಂದು ತೇರ
ನೆಂದು ಅಂದಾಗ ಅಂಧತ್ವ ಕಳೆದ ವೀರಭದ್ರೇಶ್ವರ ನೇಳು ಬೆಳಗಾಯಿತು

೨೩. ವಾಲಿಗದವರು ಸಮ್ಮೇಳ ನಾದರೊಳು ದೇವಾ
ವೀರಭದ್ರೇಶ್ವರ ನಿನಗಾರು ಸರಿಯಿಲ್ಲವೆಂದು ಬಾರಿಸುತ
ಹಾರಾಡುತಿಹರಿಲ್ಲ ಕಾಲ್ಗೆಜ್ಜೆ ಗಿಲ್ಲೆನಲು
ಆಶೀರ್ವದಿಸಲು ನೀನೇಳು ಬೆಳಗಾಯಿತು

೨೪. ಕಾಶಿಯಾ ಧರಿಸಿದವರು ಊರ ಪುರವಂತದವರು
ಅಂದ ಚಂದದ ವಾಧ್ಯವೃಂದ ದವರೊಡನೆ
ವೀರನಾಟ್ಯವ ಮಾಡುತ್ತ ನಿಂದಿಹರು ಬಂದು
ವೀರಭದ್ರೇಶ್ವರನೇ ಚಂದದಿಂದಲಿ ನೀ ಏಳು ಬೆಳಗಾಯಿತು

೨೫. ವಾರಿ ಜೋದ್ಭವ ಶಿರಹರಿದ ಶವ ಪುತ್ರ ವೀರಭಧ್ರೇಶ್ವರ
ನಿನಗಾರಾರು ಸರಿಯಿಲ್ಲವೆಂದು

೨೬. ತಾಳದವರು ಮೇಳದವರು ಮೇಲಾದ ನಂದಿ ಧ್ವಜ ಹೊತ್ತವರು
ತಾಳಲಾರದೆ ಸಮ್ಮೇಳನಾದದೊಳು ತಕ್ಕ ತಕ ಧಿನ್ನ ಧಿನ್ನೆತ್ತ
ಧಣಿದು ಕುಣಿದು ನೆಗೆರು ಹಾರಾಡುತಿಹರಿಲ್ಲಿ
ಸೊಲ್ಲು ಸೊಲ್ಲಿಗೆ ಸಲ್ಲಿಸುವರು ವಂದನೆಯ ಏಳು ಬೆಳಗಾಯಿತು

೨೭. ಶೃತಿ ತತ್ವಶಾಸ್ತ್ರಗಳ ಅರಿತಿದ್ದು ದುರ್ಮತಿ ದೃಷ್ಠ
ಚಿಂತೆಗೆ ಎಳೆಯುತಿಹ ಮಾನವರ ಮನ ಇದಬಿಟ್ಟು
ಪ್ರತಿನಿತ್ಯ ಪರಮಪಾವನ ಗುಣಪೂಣರನ ಶ್ರೀ ವೀರಭದ್ರೇಶ್ವರ
ತಪ್ಪದಲೆ ನಿನ್ನ ನೆನೆಸುವಂತೆ ಮಾಡಲೇಳಯ್ಯಾ ಏಳು.

೨೮. ಮಂದ ಮತಿಯನನಿ ಬಿಟ್ಟು ಚಂದ ಜ್ಞಾನವನಿತ್ತು
ಸಂದೇಹ ಮಾಡದಲೆ ಸಲಹು ತ್ರಿಜಗವಂದಿತನಾದ ವೀರೇಶನೇ
ಬಂದ ವಿಘ್ನವನು ಪರಿಹರಿಸಲು ನಮಿಸುವೆವು
ಅಂದ ದಿಂದಲಿ ಭಂಧನವ ಬಿಡಿಸಲೇಳಯ್ಯ ಬೆಳಗಾಯಿತು

೨೯. ನಮ್ಮ ಗುಣ ದೋಷಗಳ ನೆಣಸದಲೆ ನಿನ್ನ
ಬಿರುದು ಆಪತ್ ರಕ್ಷದನೆಂದು ಬಂದಿಹೆವು
ಅನ್ಯದಾ ಶರಣಂ ನಾಸ್ತಿ ಅನಾಥ ರಕ್ಷನೇ ರಕ್ಷಿಸೋ
ಭಿಕ್ಷೆ ಬೇಡುತ ನಿಂದಿಹರು ರಕ್ಷಸೇಳಯ್ಯಾ ಬೆಳಗಾಯಿತು

೩೦. ತಾಪತ್ರಯ ವೆಂಬ ದಾವ್ಹಾನಲದಿಂದ ತಾಪ ಪಡುವ
ಪಾಪರ ಸಂಗವೆಂಬ ವಿಷವೃಕ್ಷದಿಂದ ಕಾಫ ಥವೆಂಬ
ಬಹು ತಪ್ಪು ಗತಿಗಳಿಂದ ಕೋಪವಂಬಟ್ಟುವ ಕಾಳೋರಗೆ
ದಿಂದ ಈ ಮಾನವರ ಭವ ಬಿಡಿಸಲು ಏಳಯ್ಯ ಬೆಳಗಾಯಿತು

೩೧. ತಿಂದು ತೇಗುವ ಬಂಧು ಬಳಗೆಲ್ಲ ಕೈಬಿಡುವರು
ಮುಂದೆ ಯಮದೂತರು ಬಂದು ನಿಂದಾಗ ವಮ್ಮೆ
ಎಂದಿಗಾದರೂ ಅರಿತು ಶ್ರೀ ವೀರಭದ್ರೇಶ್ವರ ನೆಂದು
ನೆನೆದವರ ಮನದಂತೆ ಬಿಡಿಸಲೇಳಯ್ಯಾ ಬೆಳಗಾಯಿತು

೩೧. ಅಡ್ಡ ಬರುವವರ ನಾ ದೊಡ್ಡವ ರೆಂಬುವವರ
ಅಡ್ಡ ದಾರಿಕಾರರ ಅಡ್ಡಾಡದಂತೆ ಬೊಡ್ಡೆಯನು
ಅಡಗಿಸಿದ ಶ್ರೀ ದೊಡ್ಡ ವೀರಭದ್ರೇಶ್ವನೇ ನೀ
ಅಡ್ಡ ಬಿದ್ದು ಬರುವ ದಡ್ಡರನು ಉದ್ದರಿಸಲು ಏಳಯ್ಯ ಏಳು

೩೨. ಪ್ರತಿಮಂಗಳ ಶನಿವಾರ ಅಮವಾಸಿ ಹಬ್ಬಗಳಲಿ
ಪತ್ರಿ ಪುಷ್ಪ ಹಣ್ಣುಕಾಯಿ ಕರ್ರೂಪರ ತಪ್ಪಿಯಲ್ಲಿ ತಪ್ಪದಲೆ
ಗೌಡರಿಡಿದು ಓಡೋಡಿ ಬರುತಿಹರು ಭಯ ಭಕ್ತಿಯಲಿ
ನಾಡಿಗೊಡೆಯ ಬೇಡಿದೊರವ ನೀಡಲು ಏಳು ಬೆಳಗಾಯಿತು

ಮೃಡನಗ್ನಿ ನೇತ್ರದಿ ಘುಡಿಘುಡಿಸುತ ನೀ ಹುಟ್ಟಿ
ಮೃಡನ ವೈರಿಗಳನು ಹೊಡೆಯುತಿಹ ಧೀರ
ಮೃಡನ ಕುಮಾರ ಖಡುಗ ಹಲಗೆ ಧನುಶರವ ಹಿಡಿದು
ಮೃಡನಾಜ್ಞೆಯಲಿ ದಕ್ಷನ ಶಿರಗಡಿದ ವೀರೇಶಾ ಏಳು.

೩೪. ತುತ್ತೂರಿ ಕೊಂಬು ಕಹಳೆ ಘಂಟ ಜಾಗಟೆಯಿಂದ
ಮೊತ್ತದ ಸರಿಮೇಳನಾದದಲಿ ಧತ್ತೊ ಕಿಟ ಎಂದು
ತತ್ತೊಂತಕತಕ ಝುಣ ತೋಂ ಎನ್ನುತ
ತಕಥೊಂ ಧತ್ತೈಕಿಟ ಎಂದು ಕುಣಿಯುತಿಹರಿಲ್ಲ ಏಳು.

೩೫. ತಾರ ಮಂದರ ಮಧ್ಯ ಮೂರರ ಮಧುರವು
ಸೇರಿಹ ಬಹುರಾಗದಲಿ ಶ್ರೀ ವೀರಭದ್ರೇಶ್ವರ ಕಿವಿ
ಭೊರೈಸುವಂತೆ ಭಕ್ತರಾಡುತಿಹರಿಲ್ಲಿ ಮೊರಬದಲಿ
ಘೋರ ರೂಪನೆ ನೀ ಏಳಯ್ಯ ಬೇಗನೇಳು.

೩೬. ಕಡೆಗಣ್ಣಿನಿಂ ನೋಡುತ ಕುಡಿಹುಟ್ಟಿನಲುಗಿಸುತ
ಕಡು ಕೋಪದಿಂ ನಡದಾಡಿ ನಡು ಬಗ್ಗಿ ವಂದಿಸುತ
ನಡುನೆತ್ತಿ ಕಿವಿಮೂಗು ನಡುಗಿಸಿ ಮೋರೆಯ ಮುರುಕಿಸಿ
ಬಿಡದೆ ವಡಬು ಹೇಳುತ ಸಡಗರದಿ ನಿಂದಿಹಳೇಳಯ್ಯ ಏಳು.

೩೭. ಮಾಯಾ ಕೋಲಾಹಲ ಮಾಯಾ ಮಸ್ತಕ ಶೂಲ
ಮಾಯಾ ಮರ್ಧನ ಮಾಯಾ ಭಂಗ
ಮಾಯಾ ಹರನೆ ಮಾಯಾ ಪಾಶಕ್ಕೆ ಸಿಕ್ಕಿದ ನಮ್ಮ
ಮಾಯೆಯ ಬಿಡಿಸಲು ಬೇಗನೇಳಯ್ಯ ವೀರೇಶನೇ.

೩೮. ಶಂಬೋ ಶಂಕರ ಸುತನೆ ನಿನ್ನ ಪಾದ ಪೂಜಿಸಲು
ಸಂಬ್ರಮದಿ ಬಂದಿಹೆವು ಬೆಂಬಿಡದೆ ಸಲಹೋ (ನಮ್ಮ)
ಅಂಬರ ಮಾರ್ಗದಿ ಕಂಡು ಕಂಬಿನಿಯೊಳಗಿರುವ ನಮ್ಮ
ಭರದಿಂ ಬಂದು ರಕ್ಷಿಸಲು ಸಡಗರದಿ ಏಳಯ್ಯ ಬೆಳಗಾಯಿತು.

೩೯. ಮಕ್ಕಳಿಲ್ಲದಾ ವನಿತೆಯರು ಅತಿದುಃಖದಿಂದಲಿ ಬಂದು
ಮಕ್ಕಳಾ ಫಲವ ಬೇಡಲು ಉಕ್ಕಿ ವಂದಿಸುತಿಹರು
ಮಕ್ಕಳಾ ಫಲವ ಬಿಟ್ಟು ಮಿಕ್ಕಾವ ವರವನು ಬೇಡವೆನುತ
ಇಕ್ಕೆರಗಳ ಮುಗಿದು ನಿಂದಿಹರು ಚಂದ್ರಧರ ಸುತ ನೇಳಯ್ಯ.

೪೦. ನೇತ್ರ ಮೂರುಳನ ಸುತನೆ ಪುತ್ರ ಸಂತಾನಕೆ
ನೇತ್ರಾರಾಧನೆ ಕೊಡುವರ ಎಮಗೆನುತ ಧಾತ್ರಿಗೆ
ಮೈಯನಿಕ್ಕುತ ಶರಣೆನೆ ಪುಣ್ಯಗಾತ್ರನೆ
ಮೈದೋರಿ ವರಕೊಡಲು ಭರದಿ ಏಳು ಬೆಳಗಾಯಿತು.

೪೧. ಸತಿಪತಿಗಳೊಂದಾಗಿ ಬಂದು ಇಕ್ಕೆಲಗಳಲಿ ನಿಂದು
ಮಕ್ಕಳ ಫಲಗಳನು ಅಕ್ಕರದಿಂದಲಿ ಕೊಟ್ಟು
ಕಕ್ಕುಲತೆಯ ಬಡಿಸೆಂದು ಬಿಕ್ಕಳಿಸುತಿರುವಾಗ
ತಕ್ಕ ಮಕ್ಕಳ ಕೊಟ್ಟ ಚಿಕ್ಕ ವೀರೇಶ ನೇಳಯ್ಯ ಏಳು.

೪೨. ಗುಡುದಾರ ವೀರಜ್ಜನು ಹುಡುದಾರ ಕಟ್ಟುವ ಮಗನ ಬೇಡಿ
ನಡುದಾರಿಯಲ್ಲಿ ಎಡೆಮಾಡಿ ಬೇಡಿಕೊಂಡು ಮಗುವಾದಾಗ
ಕಡುಬೆಳ್ಳಿಯ ಕಡುಬೆಳ್ಳಿಯ ಕಿರೀಟವ ತಂದೊಂಪ್ಪಿಸಲು
ತಡವರಿಸಿ ನಿಂತಿಹನು ಬಿಡದೆ ರಕ್ಷಿಸಲು ಏಳಯ್ಯ ಬೆಳಗಾಗಿಯಿತು

೪೩. ಜವಳಿಯಾ ಬಂಧುಗಳು ಆವಳಿ ಮಕ್ಕಳ ಕೊಡುನೀ
ಜವಳವ ಮಾಡಿಸುವೆವೆಂದು ಭವಳಿಸಿ ನಿಂದಿಹರು ಬಾಗಿಲೊಳು
ತಂದಿಹರು ಹೊಸ ಚಿತ್ರದಾ ತಗಡ ನಿನ್ನ ಗುಡಿ ಬಾಗಿಲಿಗೆ ನೀಲಮ್ಮ
ನಿಜಗುಣ ಶಿವಯೋಗಿಯರು ಬೇಗನಾಶೀರ್ವದಿಸಲು ಏಳು ಬೆಳಗಾಯಿತು.

೪೪. ಕೊಳಚಿಯ ಭಕ್ತನೊಬ್ಬ ಬಿಡದೆ ವಡಬು ಸೇವೆಯಿಂದಲಿ
ಅಡಿಗಡಿಗೆ ನುಡಿಯುತ ಫರಾಕುಗಳನು ನಿನ್ನ ಮಂದಿರದ
ಬಾಗಿಲಿಗೆ ತಂದಿಹನು ಹೊಸ ತಗಡ ಹಿರೇಪೂಜೆಯಲಿ
ಸರಸವಾಡುತ ಬಂದು ಹರುಷದಲಿ ಏಳಯ್ಯ ವೀರೇಶನೇ.

೪೫. ನರಸಾಪುರದ ನೌಕರರು ನಾಡಿನಾ ದಿನ ಮಾಡಿದಾ ನೆನಪಿಗೆ
ವರುಷಾ ಒಂದರಂತೆ ಬೀರು ಭಾಂಡೆಗಳ ಆಡಿದಾ ಮಾತಿನಲಿ
ಹರುಷದಿಂದಲಿ ತಂದು ಕೊಡಲು ಬರುತಿಹರು ಭಯದಿಂದ
ಅಭಯವನು ನೀಡಲು ನೀನೇಳು ಬೆಳಗಾಯಿತು (ಭವಭಯ ಹರನೆ).

೪೬. ಅಷ್ಟಪುತ್ರರ ಕೊಟ್ಟು ಸೃಷ್ಟಿಯಲಿ ಸಲಹಿದಕೆ
ಶತದಷ್ಟ ದೀಪದ ಅಂದವಾದೊಂದು ಹಕ್ಕು ತಂದು
ತಮ್ಮಿಷ್ಟದಾ ವೀರಭದ್ರೇಶ್ವರ ನಿನ್ನ ಗುಡಿಯ ಬಾಗಿಲಲಿ
ತಮ್ಮಿಷ್ಟು ಬಳಗದೊಂದಿಗೆ ಬಂದಿಹರು ಮೂಲೆ ಮನೆ ಬಂಧುಗಳು ಏಳು.

೪೭. ಹೂರಿಗೆ ಗಾರಿಗೆ ಮೇಲಂಗರ್ಹೋಳಿಗೆ ಗಳಲ್ಲದಲೆ
ಸಾರವುಳ್ಳ ಹಣ್ಣುಗಳನು ವಾರಿಜಾಷಿಯರು ತಂದು
ಮುರಾರಿ ಗರ್ಜಿಸಲು ಊರ ನಾರಿಯರೆಲ್ಲ ದಾರಿಬಿಡಿರೆಂದು
ಮಂದಿರದ ಬಳಿ ಚಂದ್ರಶೇಖರ ಸುತನೇ ಏಳು ಬೆಳಗಾಯಿತು.

೪೮. ಧೀರ ವೀರಭದ್ರೇಶ್ವರನ ನೋಡಿರೆ, ಕರುಣಾಕರನ
ಭಾರಿ ಶೃತಿ ಮಾಡಿ ಪಾಡಿರೈ ನೀನೇ ಗತಿ ಮುಕುತಿಗೆಂದು
ಆನಂತ ಜನುಮಗಳಲಿ ಆನೇ ನರಿಯೇ ಮುಕ್ತಿಯತ ಮಾರ್ಗವನು
ಆನಂತ ಮಾರ್ಗವ ತೋರಲು ವೀರೇಶ್ವರನೇಳು ಏಳಯ್ಯ.

೪೯. ಭಾವಿಕಟ್ಟಿ ವೀರಣ್ಣನಾ ಸತಿ ಸರೋಜಮ್ಮನ ಭಕ್ತಿಗೆ ಮೆಚ್ಚಿ
ಬೇಡಿದುದ ನೀಡಿದುದಕೆ ಈಡಾದ ಟ್ರಜರಿಯ ತಂದು, ನಿನ್ನ ಗುಡಿ
ಬಾಗಿಲಲಿ ಚಂದವಾದ ನೆಲಗಟ್ಟು ಮಾಡಿಸುತ, ಆರತಿಯ ತಂಗ
ಬಾರೀ ಜನರಿಗೆ ಭೋಜನವ ಮಾಡಿಸಲು ಬಂದಿಹರು ಭರದಿ ಏಳಯ್ಯ ವೀರೇಶನೇ.

೫೦. ಆಡಿಪ್ರಾಸ ಗಣನೇಮಗಳನು ಒಂದು
ಅರಿಯದನುಭವಿ ಸರಳ ಮಾರ್ಗದಲಿ ಸುಲಭ
ಶಬ್ಧಗಳಲಿ ಬರೆದಿರುವ ಈ ಕೃತಿಯು ತಪ್ಪಾರೆನ್ನ
ತಿದ್ದಿ ಪೊರೆಯಲು ಸಾಷ್ಟಾಂಗವೆರಗುವೆನು ಏಳಯ್ಯ ವೀರೇಶನೇ.

೭.೨. ಪರಾಕುಗಳು :

ಕಾಶಿಕಟ್ಟಿದ ಕರವೀರಭದ್ರ ಬಹು ಪರಾಕ ॥
ದೊರೆಯೇ ನಿನಗಾರು ಸರಿಯೇ ಸರಿಯೆಂದವರ ಹಲ್ಲು ಮುರಿಯೇ ಬಹು ಪರಾಕ ॥

ಇಂದಿಗೆ ವರವುಂಟು ನಾಳೆಗೆ ವರವಿಲ್ಲವೆಂಬ ಜಂಗುಳಿ ದೈವದ ಗಂಡ ಬಹು ಪರಾಕ ॥
ಕಾಂಚನಗಿರಿ ಕೈಲಾಸಗಿರಿ ಮಹಾಂತ ಮಲ್ಲಯ್ಯ ಉಘೆ ಉಘೆ॥

ಶ್ರೀಮತ್ಪರಮ ಪಾವನ ಚರಿತ ಚಾರುತರ ಸಮ್ಮೋಹನಾಂಗ। ಮದನ ಮರ್ದನ ಮಾಯಾ ಕೋಲಾಹಲ। ನಿತ್ಯ ನಿರಂಜನ ನಿಗಮಗೋಚರ। ಸಚ್ಚಿದಾನಂದ ನಿತ್ಯ ಪರಿಪೂರ್ಣ। ಹೃದಯ ಜಗದ್ವಿಸ್ತಾರ ಮೂಲಸ್ತಂಭಾಯಮಾನ। ಪರಶಿವನ ಮೋಹದ ಕುಮಾರ ಶ್ರೀ ವೀರಭದ್ರನೇ ಬಹು ಪರಾಕ॥

ನವಭತ್ ಭಜನ ಕಿಲಲವಾಲಗ ಭಜಂತ್ರಿ। ಕರಡಿ ಸಂಬಾಳ ಭೇರಿ ತಮ್ಮಟ। ವಾದ್ಯ। ಅತಿ ರಭಸದಿಂದ ಎದ್ದು ಓಡಿ ಬರುವ ಬೆಟಗೇರಿ ಶ್ರೀ ವೀರಭದ್ರನೇ ಬಹು ಪರಾಕ॥

ಭಪ್ಪರೆ ಭಲೆರೆ ದೇವರಗಂಡ । ಜಗದೊಳಗೆ ಅತಿ ಉದ್ದಂಡ। ಹಾರಿಸಿದನು ದಕ್ಷನ ರುಂಡ। ಇಂತಪ್ಪ ಕೆಂಜೆಡೆಯ ನಂಜುಂಡೇಶ್ವರನ । ಉರಿ ನೇತ್ರದಿಂದ ಉದ್ಭವಿಸಿದ। ಶ್ರೀ ವೀರಭದ್ರನೇ ಬಹು ಪರಾಕ॥

ಸಿಂಹದ ಮೊಲೆಹಾಲು ಸಿಂಹದ ಮರಿಗಲ್ಲದೆ ಸೀಳು ನಾಯಿಗೆ ಸಲ್ಲುವದೇನಯ್ಯ। ನಾಯಿಯ ಮೊಲೆ ಹಾಲು ನಾಯಿಗಲ್ಲದೆ ಪಂಚಾಮೃತಕ್ಕೆ ಸಲ್ಲುವದೇನಯ್ಯ। ಶಿವನ ಪ್ರಸಾದವು ಶಿವಶರಣರಿಗಲ್ಲದೆ ಅನ್ಯರಿಗೆ ಸಲ್ಲುವದೇನಯ್ಯ ಅಖಂಡೇಶ್ವರ।

ಎಚ್ಚರವಿರಬೇಕು। ನಡೆನುಡಿಯಲ್ಲಿ। ಮತ್ಸರವಿರಬೇಕು ।ಭವಸಾಗರದಲ್ಲಿ। ಮನವು ಅಚ್ಚೊತ್ತಿದಂತಿರಬೇಕು ಲಿಂಗದಲ್ಲಿ। ಜನರ ।ಕಣ್ಣಿನಲ್ಲಿ । ಹುಚ್ಚನಾಗಿರಬೇಕು। ಅಂತರಂಗದಲ್ಲಿ ಜ್ಞಾನಿಯಾಗಿರಬೇಕು। ಇಂತಪ್ಪ ಗುಣವುಳ್ಳಾತನೆ ಅಚ್ಚ ಶರಣನೋಡಾ ಅಖಂಡೇಶ್ವರ । ಟೆಂಟನಿಸುವ ವೈರಿಯ ಗಂಟಲ ಗಾಣಕ್ಕೆಲ್ಲ। ಪ್ರಚಂಡ ಶ್ರೀಮತ್ ವೀರೇಶ ಶಿಖಾಮಣಿಯಾದ। ಶ್ರೀ ವೀರೇಶ ಸಾಂದ್ರಯತಿ ಕುಲಚಂದ್ರ ಬಹು ಪರಾಕ । ಕಡೆಗೀಲಿಲ್ಲದ ಬಂಡಿ ಹೊಡೆಗೆಡೆಯದೆ ಮಾಣ್ಬುದೆ ಕಡಿಗೀಲು ಬಂಡಿಗಾಧಾರ ಕಡುದರ್ಪವನೇರಿದ ಒಡಲೆಂಬ ಬಂಡಿಗೆ ಮೃಢಭಕ್ತರ ನುಡಿಗಡಣವೆ ಕಡೆಗೀಲು ಕಾಣಾ ರಾಮನಾಥ।

ಇಳೆ ನಿಮ್ಮ ದಾನ ಬೆಳೆ ನಿಮ್ಮ ದಾನ ಸುಳಿದು ಸೂಸುವ ಗಾಳಿ ನಿಮ್ಮ ದಾನ ನಿಮ್ಮ ದಾನವನುಂಡು ಅನ್ಯರ ಹೊಗಳುವ ಕುನ್ನಿಗಳನೇನೆಂಬೆ ಹೇಳೋ ರಾಮನಾಥ। ಓಂ ನಮೋ ಭಗವತಿ। ಮಹಾಕಾಳಿ। ಸುರಸುಂದರಿ। ಪ್ರಾಣ ನಾಯಕಿ। ಸರ್ವೇಶ್ವರಿ। ಸರ್ವ ಪೀಡಾ ಹರಿಹಾರಿಣಿ। ಪರಮ ನಂದಿ। ಶತೃ ಸಂಹಾರಿಣಿ। ಸರ್ವಗೃಹ ದೋಷನಾಶಿನಿ। ಸರ್ವ ಕಾರ್ಯ ಫಲಕಾರಿಣಿ। ಸರ್ವ ಕಾಲ ರಕ್ಷಿಣಿ। ಓಂ ಪಟ ಪಟ ಸ್ವಃ ಆಹಾ ವೀರಾ । ಆಹಾ ಶರಭಾ । ಅಸ್ಯ ಶ್ರೀ ವೀರಭದ್ರ ಮಂತ್ರಸ್ಯ। ಅನುಷ್ಟಪ ಛಂದಃ ಅಘೋರ ಮುಖ ಶ್ರೀ ವೀರಭದ್ರ। ಆದಿಶಕ್ತಿಃ ಕಲಾಗ್ನಿ ರುದ್ರಾಯ ದುರಿಂತಿ ಕ್ಷಯಾರ್ದಂ ಸರ್ವಭೂತ ಪ್ರೇತ ನಿವಾರಣಾರ್ಥ ಚೋರೆ ಭಯ ನಿವಾರಣಾಯ ಸರ್ವ ದುಷ್ಟಗ್ರಹ ನಿವಾರಣಾಯ ಓಂ ಪಟ ಪಟ ಸ್ವಃ । ಓಂ ಅಸ್ಯಶ್ರೀ ವೀರಭದ್ರ ಸ್ತೋತ್ರ ಮಂತ್ರಸ್ಯ ದಕ್ಷ ಕೋಲಾಹಲ। ಗರ್ಜಿತ। ಮೇಘ ಸಂಹಾರ। ನವಬ್ರಹ್ಮ ಶಿರಚ್ಛೇದನ। ನರಸಿಂಹಾವತಾರ। ಕಲಾಗ್ನಿ ನೇತ್ರ। ಕಪಟ ನಾಟಕ ಸೂತ್ರ। ರೌದ್ರಾವತಾರ। ಕಲಾಗ್ನಿ ಭೈರವ। ಬ್ರಹ್ಮ ಕುಷಿಧರ ಕಾಲ ಕರ್ಪೂರ ಸಂಹಾರ। ಸರಸ್ವತಿ ನಾಸಿಕಚ್ಛೇದನ ಶ್ರೀಪಾರ್ವತಿ ರೂಪ ಕಡೆ ಕಡೆ .... (ಶಂಕ್ರಪ್ಪ ಬಸಪ್ಪ ತೊಂಡಿಹಾಳ, ೨೦೦೦,೪೦).

೭.೩. ಸಾಹಿತ್ಯ :

ಜನಪದರಲ್ಲಿ ವೀರಭದ್ರನ ಸಂಸ್ಕೃತಿ ಮಹತ್ವ ಪಡೆಯುವುದರ ಜೊತೆಗೆ ಶಿಷ್ಟ ಸಾಹಿತಿಗಳು ಸಹ ವೀರಭದ್ರನ ಅವತಾರ, ಆಚರಣೆ, ಗುಗ್ಗುಳ ಆಚರಣೆ ಮುಂತಾದವುಗಳನ್ನು ಕುರಿತಂತೆ ಸಾಹಿತ್ಯ ರಚಿಸಿರುವುದನ್ನು ಕಾಣಬಹುದು. ರಾಘವಾಂಕನು ರಚಿಸಿರುವ 'ವೀರೇಶ ಚರಿತೆ' ಯಲ್ಲಿ ವೀರಭದ್ರನ ಚರಿತ್ರೆಯನ್ನು ಸವಿಸ್ತಾರವಾಗಿ ಹೇಳುತ್ತಾನೆ. ಈ ಚರಿತೆಗೆ ಮಹಾಕವಿ ಹರೀಶ್ವರನ ರಘಟಾ ಪ್ರಬಂಧದಲ್ಲಿರುವ ವೀರಭದ್ರ ದೇವರ ರಗಳೆ ಅತೀ ಮುಖ್ಯವಾದ ಆಧಾರ ಗ್ರಂಥ. ಮಹಾಕವಿ ರಾಘವಾಂಕನು ಬರೆದ ವೀರೇಶ ಚರಿತೆಯಲ್ಲಿ ವೀರಭದ್ರನನ್ನು ವೀರ ಕುಲಾಧೀಶ್ವರ. ಹಲಗೆಯ ಗಂಡುಗಲಿ, ನಡುನೆತ್ತಿಯಲಿಂಗ ಎಂದು ಬಣ್ಣಿಸಿದ್ದಾನೆ. ಚನ್ನಬಸವ ಪುರಾಣದಲ್ಲಿ ವೀರಭದ್ರನಿಗೆ ಸಾವಿರ ಮುಖ, ಎರಡು ಸಾವಿರ ಹಸ್ತ, ಮೂರು ಸಾವಿರ ನೇತ್ರಗಳ ಬಗ್ಗೆ ಹೇಳಿದೆ. ಕೆಲವು ಕಡೆ ಏಕಮುಖ, ಚತುರ್ಭುಜ, ಏಕಮುಖ, ಮೂವತ್ತೆರಡು ಭುಜ ಹಾಗೂ ಪಂಚಮುಖ, ಸಹಸ್ರಭುಜ ಎಂದು ಹೇಳಿದೆ. ಇದಲ್ಲದೆ ಕೂರ್ಮ ಪುರಾಣ, ವರಹಾ ಪುರಾಣ, ಭಗವತ ಪುರಾಣದಲ್ಲಿ ವಿವರಿಸಲಾಗಿದೆ. ಹಂಪೆಯ ಸ್ಥಳ ಪುರಾಣವಾದ ಪಂಪಾ ಮಹಾತ್ಮೆಯಲ್ಲಿ, ಪಂಪಾ ಕ್ಷೇತ್ರ ನಿವಾಸದಲ್ಲಿ ಅಸುರರ ಉಪಟಳದಿಂದ ತಮ್ಮನ್ನು ರಕ್ಷಿಸಬೇಕೆಂದು ಶಿವನನ್ನು ಪ್ರಾರ್ಥಿಸಿದಾಗ ಶಿವನು ವೀರಭದ್ರ ಮತ್ತು ಭದ್ರ ಕಾಳಿಯರಿಗೆ ಅಸುರರನ್ನು ಶಿಕ್ಷಿಸಿ ನಂತರ ಪಂಪಾ ಕ್ಷೇತ್ರದ ದಕ್ಷಿಣ ದಿಕ್ಕಿನಲ್ಲಿ ನೆಲೆಸಲು ಆಜ್ಞಾಪಿಸಿದನೆಂಬ ವೃತ್ತಾಂತವಿದೆ.

ಈ ಮೇಲೆ ಹೇಳಿದ ಸಾಹಿತ್ಯ ಕೃತಿ ಹಾಗೂ ಪುರಾಣಗಳಲ್ಲಿ ವೀರಭದ್ರನ ವಿಚಾರವು ಈ ರೀತಿಯಾಗಿದೆ. ಮಹಾಕವಿ ರಾಘವಾಂಕನು ವಿರಚಿಸಿದ 'ವೀರೇಶ ಚರಿತೆ'ಯಲ್ಲಿ ವೀರಭದ್ರನ ಚರಿತ್ರೆಯನ್ನು ಸವಿಸ್ತಾರವಾಗಿಹೇಳುತ್ತಾನೆ. ಈ ಚರಿತೆಗೆ ಮಹಾಕವಿ ಹರೀಶ್ವರನ ರಘಟಾ ಪ್ರಬಂಧದಲ್ಲಿರುವ '' ವೀರಭದ್ರ ದೇವರ ರಗಳೆ'' ಅತಿ ಮುಖ್ಯವಾದ ಆಧಾರ ಗ್ರಂಥ. ರಾಘವಾಂಕನ ಗುರುವಾದ ಹರಿಹರನು ವೀರಭದ್ರ ದೇವರ ರಗಳೆಯನ್ನು ಲಲಿತ ರಗಳೆಯಲ್ಲಿ ಬರೆದರೆ, ರಾಘವಾಂಕನು ವೀರಭದ್ರ ಚರಿತ್ರೆಯನ್ನು ಉದ್ದಂಡ ಷಟ್ಪದಿಯಲ್ಲಿಬರೆದಿದ್ದಾನೆ. ಈ ಕಾವ್ಯದಲ್ಲಿ ೧೨೭ ಪದ್ಯಗಳಿಂದ ಕೂಡಿದೆ, ೨ ಸಂದಿಗಳಿವೆ. ವೀರಭದ್ರ ದೇವರ ರಗಳೆಯನ್ನು ಉದ್ದಂಡ ಷಟ್ಪದಿಯಲ್ಲಿ ಬರೆದಿದ್ದಾನೆ. ಶಿವ ದ್ವೇಶಿಯಾಗಿ ಯಾಗವನ್ನು ನಡೆಸುತ್ತಿದ್ದ ದಕ್ಷಬ್ರಹ್ಮನನ್ನು ಶಿವನ ಹಣೆಗಣ್ಣಿನಲ್ಲಿ ಹುಟ್ಟಿದ ವೀರಭದ್ರನು ನಾಶಮಾಡಿದ ಕಥೆ ಇಲ್ಲಿ ಚಿತ್ರಿತವಾಗಿದೆ. ಈ ಕಥೆಯು ಸ್ಕಂದ ಪುರಾಣ, ಶಿವ ಪುರಾಣ, ವಾಯು ಪುರಾಣ, ಲಿಂಗ ಪುರಾಣದಲ್ಲಿ ಅಭಿವರ್ಣಿತವಾಗಿದೆ.

ಮೊದಲು ಈ ವೀರಭದ್ರನ ಚರಿತ್ರೆಯನ್ನು ಕನ್ನಡದಲ್ಲಿ ಬರೆದವನು ಹರಿಹರನು. ಅನಂತರ ಇದನ್ನು ಷಟ್ಪದಿಯ ಶೈಲಿಯಲ್ಲಿ ರಾಘವಾಂಕ, ಮುಂದೆ ಕವಿ ವೀರಭದ್ರ ರಾಜನು ಕ್ರಿ.ಶ. ೧೫೩೦ರಲ್ಲಿ ''ವೀರಭದ್ರ ವಿಜಯ' ಎಂಬ ಗ್ರಂಥವನ್ನು ಚಂಪೂ ಶೈಲಿಯಲ್ಲಿ ರಚಿಸಿರುವುದು ತಿಳಿದುಬರುತ್ತದೆ. ಮಹಾ ಕವಿ ಷಡಕ್ಷರ ದೇವನು ಕ್ರಿ.ಶ. ೧೬೫೫ರಲ್ಲಿ ''ವೀರಭದ್ರದಂಡಕ'' ಎಂದು ಬರೆದಿರುವನು. ಹಾಗೆಯೇ ತೆಲುಗಿನಲ್ಲಿ ಒಮ್ಮೆರ ಪೊತನಾಮತ್ಯನೆಂಬ ಮಹಾಕವಿಯು ''ವೀರಭದ್ರ ವಿಜಯಮು'' ಎಂಬ ಚಂಪೂ ಗ್ರಂಥವನ್ನು ಬರೆದಿದ್ದಾನೆ. ಇದು ಆಂಧ್ರ ಸಾಹಿತ್ಯದಲ್ಲಿ ಸುಪ್ರಸಿದ್ಧವಾಗಿದೆ. ವೀರೇಶ ಚರಿತೆಯು ವೀರರಸದ ದೇವತೆಯಾದ ವೀರಭದ್ರನಿಗೆ ಅನುಗುಣವಾದ ಶೈಲಿಯಿಂದ ಮತ್ತು ಗ್ರಂಥಕ್ಕೆ 'ಮೀಸಲು ಕವಿತೆ'' ಎಂಬ ಮತ್ತೊಂದು ಹೆಸರಿಸುತ್ತಾನೆ. ಈ ಗ್ರಂಥದ ಪದ್ಯಗಳನ್ನು ಓದುವಾಗ ಒಂದು ಬಗೆಯ ಗತಿಯ ಆವೇಶವು, ಸ್ಪೂರ್ತಿಯು ಉಂಟಾಗುತ್ತದೆ. ಅಲ್ಲದೆ ಈ ಚರಿತೆಯ ಛಂದಸ್ಸಿಗೆ ದಂಡಿನ ಶಿಬಿರದ ಪ್ರತಿಯಲ್ಲಿ ''ಮೀಸಲು ಕವಿತೆ'' ಎಂದು ಹೇಳಿದೆ. ವೀರೇಶ ಚರಿತೆಯನ್ನು ಬರೆದ ಮಹಾಕವಿ ರಾಘವಾಂಕನು ಹರಿಹರನ ಶಿಷ್ಯನೆನಿಸಿ ಹಂಪೆಯ ವಿರೂಪಾಕ್ಷನ ಸಾನಿಧ್ಯವನ್ನು ಪಡೆದು ಗುರು ಪದ್ಮರಸನ ಅನುಗ್ರಹಕ್ಕೆ ಪಾತ್ರನಾದುದು ನಮಗೆ ತಿಳಿದುಬರುತ್ತದೆ.

ಈ ವೀರೇಶ ಚರಿತ್ರೆಯನ್ನು ರಾಘವಾಂಕನು ಓರಂಗಲ್ಲಿಗೆ ಹೋಗಿ ಅಲ್ಲಿ ವೀರೇಶನ ಮುಂದೆ ನಿಂತು ರಚಿಸಿದ್ದಾನೆಂದು ಎಂಟನೆಯ ಸಂದಿಯಲ್ಲಿ ''ಕಖತಿನಾಮಂ ವೀರೇಶ್ವರ ಚರಿತಂ, ಬಗಗಿ ಕೃತಿಪತಿಯೆ ಓರಂಗಲ್ಲಿನ ವೀರೇಶವರನೀ ಕೃತಿಗೆ ಸಹಗುರು ಸದ್ಭಕ್ತ ಸಮೂಹಂ ಕಬಿಲೆಯಂ ಮುದದಿಂ ಪೇಳುವನು ಯತಿಪತಿ ಹಂಪೆಯ ಹರಿದೇವರ ಕಾರುಣ್ಯದ ಸುತ ಶಿವ ಕವಿ ಭೃತ್ಯಂ ಹಂಪೆಯ ರಾಘವಾಂಕ ಪಂಡಿತನೆನಲೀ ಕೃತಿಯುಂ ವೆಚ್ಚದ ಸಜ್ಜನರಾರೀವಸುಧಾ ಚಕ್ರದೊಳು''. ಈ ಕಾವ್ಯದ ಅಧಿಪತಿ ಓರಂಗಲ್ಲಿನ ವೀರಭದ್ರಸ್ವಾಮಿ. ಈ ವಿಚಾರವನ್ನು ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರದಲ್ಲಿಯು, ಚನ್ನಬಸವ ಪುರಾಣದಲ್ಲಿ ಪ್ರಸ್ತಾಪಿಸಲಾಗಿದೆ. ಆದ್ದರಿಂದ ರಾಘವಾಂಕನು

ಓರಂಗಲ್ಲಿಗೆ ಹೋಗಿ, ಅಲ್ಲಿ ಈ ವೀರೇಶಚರಿತೆಯನ್ನು ರಚಿಸಿರುವುದಾಗಿ ತಿಳಿದುಬರುತ್ತದೆ. ಆಗಿನ ಸಮಯದಲ್ಲಿ ಓರಂಗಲ್ಲಿನಲ್ಲಿ ಆಳುತ್ತಿದ್ದ ರಾಜ ಪ್ರತಾಪರುದ್ರನು ವೀರಶೈವ ಧರ್ಮದ ಅಭಿಮಾನಿಯಾಗಿದ್ದನು. ಇವನು ಓರಂಗಲ್ಲಿನಲ್ಲಿ ವಿದ್ಯಾಮಂದರಿವೆಂಬ ಸಂಸ್ಥೆಯನ್ನು ಸ್ಥಾಪಿಸಿ ಅದಕ್ಕೆ 'ಶಿವದೇವನು' ಅಧ್ಯಕ್ಷನಾಗಿದ್ದನು. ರಾಘವಾಂಕನು ಅಲ್ಲಿಗೆ ಹೋಗಿ ವೀರೇಶ ಚರಿತೆಯನ್ನು ರಚಿಸಿ ವೀರೇಶನನ್ನು ಸಾಕ್ಷಾತ್ಕಾರ ಮಾಡಿಕೊಂಡು ಪ್ರತಾಪರುದ್ರನ ಮೆಚ್ಚುಗೆಯನ್ನು ಪಡೆದಿರುವುದು ತಿಳಿದುಬರುತ್ತದೆ.

''ವೀರೇಶ ಚರಿತ್ರೆಯು'' ಒಂದು ಚಿಕ್ಕ ಖಂಡ ಕಾವ್ಯ. ರಾಘವಾಂಕ ಕವಿಯ ಪಾಂಡಿತ್ಯದ ಮೀಸಲು ಗವಿತೆಯಿದು. ಇದರಲ್ಲಿ ನಾವಿನ್ಯತೆಯನ್ನು, ಹೊಸ ಪ್ರಯೋಗಗಳನ್ನೂ ಕಾಣಬಹುದು. ವಾರ್ಧಕ ಷಟ್ಪದಿಯ ಚರಗಳಲ್ಲಿ ಬರುವ ಐದೈದು ಮಾತ್ರೆಯ ೪ ಗಣಗಳಿಗೆ ಪ್ರತಿಯಾಗಿ ನಾಲ್ಕು ನಾಲ್ಕು ಮಾತ್ರೆಯ ೫ ಗಣಗಳನ್ನು ಪ್ರಯೋಗಿಸುವನು. ವೀರೇಶ ಚರಿತ್ರೆ ಉದ್ದಂಡ ಷಟ್ಪದಿಯಾಗಿ ಹೆಸರು ಪಡೆದಿದೆ. ಒಟ್ಟಿನಲ್ಲಿ ಶ್ರೇಷ್ಠ ಕಥನ ಕಾವ್ಯ, ಭವ್ಯ ಕಾವ್ಯ ಇದಾಗಿದೆ. ಶ್ರೀ ರಾಘವಾಂಕ ಕವಿ ತನ್ನ ಮನೆ ದೇವರಾದ ಹಂಪೆಯ ಉದ್ದಾನ ವೀರಭದ್ರ ಸ್ವಾಮಿಯ ನೆನಹಿನಲ್ಲಿ ಕೃತಿ ರಚಿಸಿದ್ದಾರೆ.

ಈ ಭೂಮಿಯಲ್ಲಿ ಶಿವನಿಗೆ, ಶಿವಭಕ್ತರಿಗೆ ನಾಲಿಗೆಯನ್ನು ಮತಿಯನ್ನೂ ಮಾರಿಕೊಳ್ಳಬೇಕೆಂದು ಹರಿಹರ ರಾಘವಾಂಕರ ಇಚ್ಛೆಯಾಗಿತ್ತು. ಇದನ್ನು ಮರೆತು ಬ್ರಹ್ಮ, ಹರಿ, ಇಂದ್ರ ಎಂಬ ಉಡುಕಳಿ ದೇವರುಗಳನ್ನು ಸ್ತುತಿಸಿದರೆ ಶಿವ ದೂಷಕನಿಗೆ ದೋಷ ತಗಲುತ್ತದೆಯಂತೆ. ಅಂತೆಯೇ ರಾಘವಾಂಕನಾಶ ರಹಿತನೂ, ಭಕ್ತ ರಕ್ಷಕನೂ, ಮೋಕ್ಷ ಪ್ರದನೂ, ಹೊಟ್ಟೆಯೊಳಗೇ ಬ್ರಂಹ್ಮಾಂಡವುಳ್ಳವನೂ, ಮರುವಿನ ಮರುಳಾಟದ ಲೋಕಗಳನ್ನು ಹುಡಿಗೈದ ನರಸಿಂಹನ ಹಣೆಯ ಲಿಪಿಯನ್ನು ಅಳಿಸಿದವನೂ ಆದ ಆ ವೀರಭದ್ರನ ಲೀಲಾ ಕಥೆಯನ್ನು ಹೇಳಿ ಪುಣ್ಯ ಪಡೆದನೆಂದು ತಿಳಿದುಬರುತ್ತದೆ.

ದಕ್ಷಯಜ್ಞ : ವೀರೇಶನ ಅವತಾರಕ್ಕೆ ಆತನ ಅಜ್ಜ ದಕ್ಷಬ್ರಹ್ಮನೇ ಕಾರಣ. ದಕ್ಷಬ್ರಹ್ಮ ಪ್ರಸೂತಿಯ ಗಂಡ ಮತ್ತು ಪ್ರಸೂತಿಯು ಶತ ರೂಪೆಯ ಮಗಳು. ಇವನು ಋಷಿ ಶ್ರೇಷ್ಠನೆಂದು ಕರೆಯಲ್ಪಟ್ಟಿದ್ದಾನೆ. ದಕ್ಷ ಬ್ರಹ್ಮನಿಗೆ ಅರವತ್ತು ಮೂರು ಜನ ಹೆಣ್ಣು ಮಕ್ಕಳು ಹುಟ್ಟಿದರು. ಇವರಲ್ಲಿ ಕೊನೆಯ ಮಗಳೇ ದಾಕ್ಷಾಯಣಿ. ಇವಳು ಮಹಾ ವ್ಯಕ್ತಿಯಾಗುವ ಚಿನ್ಹೆ ಚಿಕ್ಕವಳಿದ್ದಾಗಲೇ ಕಂಡು ಬಂದವು. ಸದಾಶಿವ ಲಿಂಗಪೂಜೆ ಶಿವಮಂತ್ರ ಪಠಣೆ. ಅವಳ ವೈಶಿಷ್ಟ್ಯವಾಗಿತ್ತು. ಅವಳ ಮನೋಗತದಂತೆ ದಾಕ್ಷಾಯಣಿಯನ್ನು ದಕ್ಷಬ್ರಹ್ಮ ಶಂಕರನಿಗೆ ಕೊಟ್ಟು ವಿವಾಹ ಮಾಡಿದ. ಉಳಿದ ೬೨ ಮಂದಿ ಹೆಣ್ಣು ಮಕ್ಕಳನ್ನು ಅನೇಕ ದೇವತೆಗಳಿಗೆ ಲಗ್ನ ಮಾಡಿಕೊಟ್ಟ. ಹೀಗೆ ದಕ್ಷಬ್ರಹ್ಮ ದೇವಾನು ದೇವತೆಗಳ ಮಾವನೆನಿಸಿದ.

ಒಂದು ಸಲ ದಕ್ಷಬ್ರಹ್ಮ ಸಕಲ ಅಳಿಯಂದಿರನ್ನು ಸಂದರ್ಶಿಸುವ ಸಲುವಾಗಿ ಪಯಣಿಸಿದ. ಎಲ್ಲಾ ಹೆಣ್ಣು ಮಕ್ಕಳು ತಮ್ಮ ತಂದೆ ಬಂದಿರುವನೆಂಬ ಆನಂದದಿಂದ ವಿವಿಧ ಭಕ್ಷಭೋಜ್ಯಗಳನ್ನು ತಯಾರಿಸಿ ತೃಪ್ತಿಪಡಿಸುತ್ತಿದ್ದರು. ದಕ್ಷನ ಆನಂದಕ್ಕೆ ಮೇರೆಯಿಲ್ಲದಾಯಿತು. ಸಂತಸದ ಹಿಗ್ಗಿನಲ್ಲಿ ಮೈಮರೆತ ಸಚ್ಚಿದಾನಂದತ್ವವನ್ನು ಮರೆತು 'ಅಹಂಬ್ರಹ್ಮಸ್ಮಿ' ಎಂಬಂತಾದ. ಒಬ್ಬೊಬ್ಬರ ಗೃಹದಲ್ಲಿ ೨,೩ ದಿವಸಗಳಿದ್ದು, ಮಾರನೇದಿನ ಮತ್ತೊಬ್ಬ ಮಗಳ ಮನೆಗೆ ಹೋಗುತ್ತಿದ್ದ. ಕೊನೆಯದಾಗಿ ಕೊನೆಯ ಪುತ್ರಿಯ ಮನೆಗೆ ಹೋಗುವ ಸಂದರ್ಭ ಬಂತು.

ಸರಸಿಜಭವ (ಬ್ರಹ್ಮ), ಸರಸಿಜಲೋಚನ (ವಿಷ್ಣು), ಸರಸಿಜಿಪ (ಚಂದ್ರ), ಸರಸಿಜ ಮಿತ್ರ (ಸೂರ್ಯ) ಮೊದಲಾದ ದೇವತೆಗಳಿಂದ ದಕ್ಷ 'ಸನುಮಾನದ' ವಂದನೆಯನ್ನು ಉಪಚಾರವನ್ನು, ಹರಕೆಯನ್ನು, ಅಭಿಷೇಕವನ್ನು, ಅಕ್ಷತೆಯನ್ನು, ಉಡುಗೊರೆಯನ್ನು ಅತ್ಯುತ್ಸಾಹದಿಂದ ಸ್ವೀಕರಿಸಿದ. ದೇವಾನುದೇವತೆಗಳಿಂದ ಮೃತನಾದ ಪರಮನನ್ನು (ಶಿವ) ಕೊಂಬಾಸಕ್ತಿಯಿಂದ ಎರಗಿಸಿ ದಕ್ಷ ಸರಸರನೇ ಸಭೆಗೆ ಬಂದ.

ಕೈಲಾಸದಲ್ಲಿ ಶಿವನು ಮಹಾಭಕ್ತರ ಸಮೂಹದಲ್ಲಿ ಕಂಗೊಳಿಸುತ್ತಿದ್ದನು. ಕೈಲಾಸವಾದರೂ ಬೆಳದಿಂಗಳ ರಾಶಿಯಂತೆ ವಿಷಯಗೊರಳಿನ ಕೀರ್ತಿಲತೆಯಂತೆ, ಭಾಗ್ಯದ ಹೆಬ್ಬೆಳೆಯಂತೆ, ವಸುಧೆಯ ಸಂತೆಯಂತೆ ಶೋಭಿಸುತ್ತಿತ್ತು. ನವಮಣಿಯ ಸಿಂಹಾಸನದಲ್ಲಿ ಕಲ್ಪವೃಕ್ಷದಂತಹ ಶಿವನು ಭಕ್ತರ ಸನ್ಮಾನವನ್ನು ಸ್ವೀಕರಿಸುತ್ತಿದ್ದನು.

ಭಾರತ (ಸರಸ್ವತಿ) ವೀಣಾವಾದನ ಮಾಡುವಳು ತುಂಬರ, ನಾರದ, ನಂದಿ ಮುಂತಾದವರು ಒಳ್ಳೆ ಬೆಡಗಿನ ನೃತ್ಯ ಮಾಡುವರು. ರಂಭೆಯ ಲಾವಣ್ಯದ ಸೊಗಸು, ಭೃಂಗೀಶನ ನೃತ್ಯ, ಬ್ರಹ್ಮನ ವೇದ ಬೋಧನೆ, ಚಂಡೇಶನ ಭಕ್ತಿ ಮೊದಲಾದ ಮಹಿಮರ ಭಕ್ತಿಯ ಸಾಗರದ ನಡುವೆ ಸುಖಸಾಗರವನ್ನೂ ಭವದೂರನೂ, ಮಹಿಮಾಗಾರನೂ ಮೆರೆಯುತ್ತಿದ್ದ.

ಆನೆಯ ಬಾಲದ ಹೊಡೆತದಿಂದ ಶರಧಿಯ ತೆರೆಗಳಲ್ಲಿ ಚೆಲ್ಲುವ ಮಣಿಗಳು, ಶ್ವೇತ ದ್ವೀಪವನ್ನು ಅಣಕಿಸುತ್ತಿವೆ. ಶೋಭಾಯಮಾನವಾದ ದ್ವೀಪಕಲ್ಪದ ಉತ್ತರಭಾಗ ರಮಣೀಯವಾಗಿತ್ತು. ಆ ಭಾಗದ ಅಂತ್ಯದಲ್ಲಿ ಶಶಿಬಿಂಬದ ತೊಟ್ಟಿಲಂತೆ ಬೆಳದಿಂಗಳ ಘಟ್ಟಿಯಂತೆ ವಿಷಕಂಠನ ಕೀರ್ತಿಲತೆಯಂತೆ, ಭಕ್ತರ ಭಾಗ್ಯದ ಹೆಬ್ಬೆಳೆಯಂತೆ ವಸುಧೆಯ ಸಂತೆಯಂತೆ ಶಿವನ ಕೈಲಾಸ ಶೋಭಿಸುತ್ತಿತ್ತು.

ಇಂಥ ಸಮಯದಲ್ಲಿ ಕೆಂಡದ ತೊಡಿಗೆಗೆ ಮನವಿಟ್ಟರಗಿನ ಪುತ್ಥಳಿಯಂತೆ ಶಿವನನ್ನು 'ಎರಗಿಸಿ' ಕೊಳ್ಳುವ ಭರವಸೆಯಲ್ಲಿ ದಕ್ಷ ಬರುತ್ತಾನೆ. ಇವನ ಗರ್ವವನ್ನು ಕಂಡ 'ಶಿವ' ನೋಡಿಯೂ ನೋಡದಂತೆ ಇದ್ದ.

ದಕ್ಷನಿಗೋ ಹೇಗಾದರೂ ಶಿವನನ್ನು ಪಾದದೆಡೆಗೆ ಕೆಡವಿಸಿಕೊಳ್ಳಬೇಕೆಂಬ ಹೆಬ್ಬಯಕೆ ಈ ಮನೋಸ್ಥಿತಿಯನ್ನು ವರ್ಣಿಸುವಾಗ ಕವಿ ಕೊಡುವ ಸಾದೃಶ್ಯ 'ಅರಗಿನ ಪುತ್ಥಳಿ ಕೆಂಡದ ತೊಡಿಗೆಗೆ ಮನವಿಟ್ಟಂತಾಯ್ತು' ಎಂದು.

ದೇವಾನುದೇವತೆಗಳಿಂದ ಆದರಿಸಲ್ಪಟ್ಟ ದಕ್ಷ ಮದವೇರಿ ಹೋಗಿದ್ದ. ಶಿವ ಸಭೆಯಲ್ಲಿ ಅಂಥ ಆದರ ಸಿಗಲಿಲ್ಲ. ಮರುಳ ಶಂಕರ ಆದರಿಸದಿದ್ದರೆ, ಮಗಳು ಆದರಿಸಲೆಂಬ ಬಿಂಕದಿಂದ ಮಗಳ ಕಡೆ ನೋಡಿದ. 'ಪತಿ ಆದರಿಸದವರನ್ನು ಆದರಿಸುವುದು ಸತಿಗೆ ಅಷ್ಟು ಹಿತವಲ್ಲವೆಂದು' ದಾಕ್ಷಾಯಣಿಯೂ ಸುಮ್ಮನಿದ್ದಳು. ತನ್ನನ್ನು ಅವಮಾನಗೊಳಿಸಿದ ಶಿವ ಶಿವೆಗೆ ತಕ್ಕ ಪ್ರತಿಕಾರ ಮಾಡದಿದ್ದರೆ, ತಾನು ದಕ್ಷನೇ ಅಲ್ಲವೆಂದು ಘುಡಿಘುಡಿಸಿ ಕೋಪಾವೇಶದಲ್ಲಿ ಮುಂದೇನಾಗುವದೆಂಬುದನ್ನು ಅರಿಯದೆ ಇದ್ದ ದಕ್ಷನ ರೀತಿಯೇ ''ಚೇತರಿಸಿದ ಚಿಂತಾ ಚಿತ್ರದಂತೆ ಸೈವೆರಗಿನ ಸಾಕಾರದಂತೆ ಕೋಪದ ಕರುವಿನ ಕಂದೆರವೆಯಂತೆ'' ಇದ್ದ ದಕ್ಷ ಕೆಡುಕನ್ನೇ ಚಿಂತಿಸುತ್ತಿದ್ದ.

ತಾನೊಂದು ಯಜ್ಞ ಮಾಡಿ ಶಿವನ ದೇವತ್ವವನ್ನು ಸುಡುವುದಾಗಿಯೂ, ಓಲಗದಲ್ಲಿ ತನ್ನನ್ನು ಮನ್ನಿಸದಿದ್ದ ಅಮರರ ತಲೆ ಕಡಿಯುವುದಾಗಿಯೂ, ನಿರ್ಧರಿಸಿದ ಕೂಡಲೇ ಮಂತ್ರಿ ವಿದಗ್ಧನನ್ನು ಕರೆಯಿಸಿ ರುದ್ರನ ಸರ್ವೇಸ್ವರತ್ವವನ್ನು ಪಡೆಯಲು ಮಹಾಯಾಗವನ್ನು ನಡೆಸಬೇಕು. ಅದಕ್ಕಾಗಿ ತಕ್ಕ ಸಿದ್ಧತೆಗಳನ್ನು ಮಾಡಲು ಹೇಳಿದ. ಆದಕ್ಕೆ ವಿದಗ್ಧನ ಸೂಚನೆಯಿಂತಿದೆ.

'' ಎಲ್ಲಾ ವಸ್ತುಗಳನ್ನು ಧರೆ ಪಡೆಯಬಲ್ಲುದು. ಆದರೆ ಧರೆಯನ್ನೇ ಪಡೆಯಬಲ್ಲ ಸುವಸ್ತುಗಳೇ ಇಲ್ಲ. ಹೀಗಿರುವಾಗ ಶಿವನೊಲಿದರೆ ಯಾಗ, ಸಹಸ್ರ ಫಲವನ್ನು ಕೊಡಬಲ್ಲದು. ಅದನ್ನು ಬಿಟ್ಟು ಶಿವನಿಲ್ಲದೆ ಯಾಗವು ಶಿವ ಪದವಿಯನ್ನು ಕೊಡಲಾರದು. ಆದ್ದರಿಂದ 'ಹೊಲಸದ ಕಾರ್ಯವನ್ನು ಮಾಡುವುದು ಸರಿಯಲ್ಲ' ಎಂಬ ಸೂಚನೆಯನ್ನು ಕೇಳಿದ ದಕ್ಷ ಕಿಡಿಕಿಡಿಯಾದ.

''ಹೇಳಿದಷ್ಟೆ ಮಾಡು, ಕೇಳಿದಷ್ಟೆ ನುಡಿ, ಇಲ್ಲವಾದರೆ ಕೆಡುಹುತ್ತೇನೆಂದು'' ಗರ್ಜಿಸಿದ, ಇದರಿಂದ ಉಪಾಯವಿಲ್ಲದೆ ವಿದಗ್ಧ ಯಾಗ ಸಿದ್ಧತೆಗೆ ಅಣಿಯಾದ. ಕಾಶಿಗೆ ಪಶ್ಚಿಮದಲ್ಲಿ 'ಕನಖಳ' ಪುರದಲ್ಲಿ ಯಾಗಶಾಲೆ ನಿರ್ಮಿತವಾಯ್ತು. ಯಜ್ಞ ವೇದಿಕೆಯನ್ನು ಡಮರುಗಾಕಾರದಲ್ಲಿ ಸಿದ್ಧಪಡಿಸಿದರು. ಯಜ್ಞಕ್ಕೆ ಬೇಕಾದ 'ಹೊಸಮರ' ಸುರಭಿ, ಕಪಾಲ, ಉಲೂಖ, ಮೃಗಾಜಿನ, ಸರ್ಪಿ, ಸೋಮ, ಕುಶ, ಮಹಾವಿರಣಿ, ವಿಶಾಣ, ಶಂಖ, ಶಶಕ, ಬಾಧಿರ, ಉಪಶಮಿ, ಪಶು, ಶಸ್ತ್ರ, ರಜ್ಜು ಮೊದಲಾದ ಸಾಮಗ್ರಿಗಳನ್ನು ಶೇಖರಿಸಿದರು. ಯಜ್ಞ ಮುಖ್ಯಸ್ಥರಾದ ಹೋತೃ, ಸದಸ್ಯ, ಬ್ರಹ್ಮ ಅಧ್ವರ್ಯು ಮೊದಲಾದವರನ್ನು ಕರೆ ತಂದರು.

ಈ ಯಜ್ಞಕ್ಕೆ ಶಿವನನ್ನು ಬಿಟ್ಟು ಎಲ್ಲಾ ದೇವಾನು ದೇವತೆಗಳಿಗೆ ಆಮಂತ್ರಣ ಕಳಿಸಿದರು. ಕರೆದರೆ ಬಾರದಿರುವವರನ್ನು ಕೊಂದಿಕ್ಕುವುದಾಗಿ ದಕ್ಷ ಸಾರಿದ, ಈ ಯಜ್ಞಕ್ಕೆ ಹರಿವಾಣೇಶ್ವರ, ದಿಗಧೀಶ್ವರರು, ದೇವತೆಗಳು, ವಿದ್ಯಾಧರರು, ಕಿನ್ನರರು, ಖೇಚರರು, ಗರುಡರು, ಉರಗರು, ಗುಹ್ಯಕರು, ಗಂಧರ್ವರು, ಮರುದ್ಗಣರು ತುರುಗಾನನರು ಮುಂತಾದವರೆಲ್ಲರೂ ಆಗಮಿಸಿದರು.

ಯಜ್ಞದ ಗದ್ದುಗೆಯ ಮೇಲೆ ಹರಿಯೇ ಕುಳಿತರಲೆಂದು ತೀರ್ಮಾನ ಮಾಡಿದರು. ಮಹಾ ಶಿವಭಕ್ತನೂ ಎರಡನೇ ಶಂಕರನಂತಿರುವವನೂ ಆದ ದಧೀಚಿಗೆ ಯಜ್ಞಕ್ಕೆ ಶಿವಬಂದಿದ್ದಾನೆಂದು ಸುಳ್ಳು ಹೇಳಿ ಕರೆತಂದರು. ಯಜ್ಞ ಸಭೆಯಲ್ಲಿ ಶಿವ ಕಾಣಬಹುದೆಂದು ಆತುರದಿಂದ ಅತ್ತಿತ್ತ ಕಣ್ಣಾಡಿಸಿದ 'ಯಜ್ಞದ ವಡೆಯನೂ, ಜಗತ್ಪತಿಯೂ ಆದ ಶಂಕರನೆಲ್ಲಿ? ಎಂದು ಅಬ್ಬರಿಸಿದ. ಆದಕ್ಕೆ ದಕ್ಷ ಪ್ರತ್ಯುತ್ತರವಾಗಿ 'ಶಿವನು ಅಪವಿತ್ರ ಮೂಳೆಗಳನ್ನು, ಚರ್ಮಗಳನ್ನೂ ಅಲಂಕರಿಸಿಕೊಂಡು ಸುಡುಗಾಡಿನಲ್ಲಿ ವಾಸಿಸುವನೆಂದು' ಕಟು ನುಡಿದ.

ಶಿವ ನಿಂದೆಯನ್ನು ಕೇಳಿದ ದಧೀಚಿಗೆ ಕಣ್ಣಿನಲ್ಲಿ ಕಿಡಿಗೆದರಿ ಉರಿವ್ಯಾಪಿಸಿತು. ನುಡಿ ಸಿಡಿಲಾಗಿ ಮೊಳಗಿತು. ಹುಬ್ಬು ಗಂಟಿಕ್ಕಿ ತುಟಿ ಅಳ್ಳಾಡಿತು. ಪೂಸಿದ ವಿಭೂತಿ ಕರಗಿತು. ಕೈಯೊಳಗಿನ ಕಮಂಡಲದ ನೀರು ಕುದಿಯಿತು. ಮೈ ಕೈ ಕೂದಲು ನಿಮಿರಿದವು. ಯೋಗ ದಂಡವು ಜಾರಿತು. ಸಿಟ್ಟಿನಿಂದ ''ದಕ್ಷ ನಿನ್ನ ಯಾಗ ನಡೆಯದಿರಲಿ, ನಿನ್ನ ತಲೆ ಹುಡಿಯಾಗಲಿ' ಎಂದು ಶಪಿಸಿದ.

ಅಲ್ಲಿಗೆ ಬಂದ ಅಗಸ್ತ್ಯ, ವಸಿಷ್ಠ, ಭೃಗು, ಗೌತಮ, ಉಪಮನ್ಯು ಮೊದಲಾದವರು '' ಇದು ನಿಂದೆಯ ಯಜ್ಞವೆಂಬುದು ನಮಗೆ ತಿಳಿಯಲಿಲ್ಲ. ಶಿವಬಂದನೆಂದು ತಿಳಿದೇ ನಾವು ಬಂದೆವು. ನಾವು ಈ ಶಾಪಕ್ಕೆ ತುತ್ತಾಗಲಾರೆವು ಎಂದು ದಧೀಚಿ ಋಷಿಯೊಂದಿಗೇ ನಡೆದು ಹೋದರು. ಈ ವೇಳೆಯಲ್ಲಿ ಸುಮಾರು ೩೨ ಸಾವಿರ ಜನ ಶಾಪಕ್ಕೊಳಗಾದರು. ಈ ವಿಚಾರವನ್ನು ನಾರದರು, ಶಿವನಿಗೆ ಹೇಳಲು ಸರ್ರನೆ ಬಂದರು. ದಕ್ಷನ ದಾಕ್ಷಿಣ್ಯಕ್ಕೆ ಕಟ್ಟು ಬಿದ್ದವರೆಲ್ಲರೂ ಯಜ್ಞ ಮಾಡಲು ಸಿದ್ಧರಾದರು. ದಕ್ಷನ ಯಜ್ಞಾಚರಣೆ ಹೊಲಗೇರಿಯ ಗದ್ದಲದಂತಿತ್ತು. ಹೇಗೆಂದರೆ ''ಯಜ್ಞಶ್ರೇಷ್ಠರೆಲ್ಲರೂ ಹೋದರೆ ಹೋಗಲಿ. ವಿಘ್ನ ಪ್ರಾಯಶ್ಚಿತ್ತವಂ ಮಾಡು ಭಯೋರಣಿಯೊಳ್ಮೆ ಥನಿಯ ಪೊಸೆ, ಘೃತವನ್ನು ಅರ್ಪಿಸು. ಯೂಪಸ್ಥಂಭವನ್ನು(ಪಶು ಕಟ್ಟಿ ಹಾಕುವ ಕಂಬ) ಪೂಜಿಸು, ಸೋಮದ್ರವವನ್ನು ಕುಡಿಯಲು ಅಣಿಮಾಡು, ಗಾಯತ್ರಿ ಅನುಷ್ಟಪ್, ಜಗತೀ ಶಕ್ವರಿ, ಯತಿಶಕ್ತರಿ, ಯುಷ್ಣಿಕ್ಕುಪದೀಕ್ಷನ ಮೊದಲಾದ ಮಂತ್ರಗಳಿಂದ ಇಂಧನವನ್ನು ಸುಡಿರಿ'' ಎಂದು ದಕ್ಷ ಧೈರ್ಯದಿಂದಲೇ ಘರ್ಜಿಸಿದ.

ಯಜ್ಞಪಶುವನ್ನು ಬಲಿಕೊಡಲು ಹಲವರು ''ಶಸ್ತ್ರವನ್ನು ಮಸೆ, ಯೂಪಸ್ತಂಭವನ್ನು ಪೂಜಿಸು, ಪಶು ಅರಚದಂತೆ ಗಂಟಲನ್ನು ಮುರಿಯಿರಿ'' ಅದರ 'ಪಲಲವನ್ನು' ತೆಗೆ, ಅದರ ರಕ್ತವನ್ನು ಬಸಿ, ವಡೆಯನ್ನು ಸುಲಿ, ಬೆಂಕಿಯಲ್ಲಿ ಕಾಯಿಸು, ಆಹುತಿಯನ್ನು ಕೊಡು ಮೊದಲಾದ ಗಡಿಬಿಡಿ ಗದ್ದಲವಾಗಿ ಆ ಯಜ್ಞ ಸಭೆ ಹೊಲೆಗೇರಿಯಂತಿತ್ತು. (ಟಿಪ್ಪಣಿ:ಪಲ(ಸಂ) ಮಾಂಸ ಲವ(ಸಂ) ಕತ್ತರಿಸು, ಚೂರು ತುಣುಕು, ಕೂದಲು ಉಣ್ಣೆ).

ನಾರದರ ಮುಖಾಂತರ ಶಿವೆ ತನ್ನ ತಂದೆಯ ಯಾಗದ ವಿಚಾರವನ್ನು ತಿಳಿದುಕೊಂಡಳು. ಕುಪಿತಳಾದ ಶಿವೆ ದಕ್ಷನಿಗೆ ಬುದ್ಧಿ ಹೇಳುವುದಾಗಿ ಶಿವನಿಗೆ ತಿಳಿಸಿದಳು. ಕೇಳದಿದ್ದರೆ ಯಜ್ಞವನ್ನು ನಾಶ ಮಾಡುವುದಾಗಿ ಸೂಚಿಸಿದಳು. ಅದಕ್ಕೆ ಶಿವ ''ಬೇಡ ಅವನು ಮನ್ನಿಸುವಂತವನಲ್ಲ'' ಎಂದರೆ ಶಿವೆ ''ಶಿವನಿಗಲ್ಲದ ಖಳನ ಮನ್ನಣೆಯನ್ನು ತಾನೂ ಬಯಸುವಳಲ್ಲ'' ಅವನ ಅವಿಚಾರವನ್ನು ಬಯಲಿಗೆಳೆದು ಬರುವೆ. ತನ್ನನ್ನು ಕಳಿಸಿ ಕೊಡಲೇಬೇಕೆಂದು ಆಗ್ರಹ ಮಾಡಿದ್ದಕ್ಕಾಗಿ, ಶಿವನು ಅವಳನ್ನು ರುದ್ರಕನ್ನಿಕೆಯರೊಡನೆ ಪುಷ್ಪಕ ವಿಮಾನದಲ್ಲಿ ಕಳುಹಿಸಿಕೊಟ್ಟನು.

ಆ ಸಮಯದಲ್ಲಿ ದಕ್ಷನಮುಖ ಶಿವಕಳೆಯಿಲ್ಲದೆ ಶವಕಳೆಯಂತಿತ್ತು. ಚಂದ್ರನಿಲ್ಲದ ರಾತ್ರಿಯಂತಿತ್ತು. ಭಾಸ್ಕರನಿಲ್ಲದ ಬಾನಿನಂತಿತ್ತು. ಕರೆಯದಲೇ ಬಂದ ಮಗಳನ್ನು ದಕ್ಷ ಮನ್ನಿಸಲಿಲ್ಲ, ಆದರಿಸಲಿಲ್ಲ. ತನ್ನ ವೈರಿಯ ಹೆಂಡತಿ ತನ್ನ ಮಗಳೇ ಆಗಿದ್ದರೂ, ವೈರತ್ವದಿಂದಲೇ ದಾಕ್ಷಾಯಣಿಯನ್ನು ಉಪೇಕ್ಷಿಸಿದ. ಅವಳು ತಂದೆಯೆಂಬ ಅಭಿಮಾನದಿಂದ ಎದುರಿಗೆ ಬಂದು ನಿಂತರೆ, ಬೇರೆಡೆಗೆ ಮುಖತಿರುಗಿಸುತ್ತಿದ್ದ.

ಶಿವನ ಸಹ ಧರ್ಮಿಣಿಯಾದ ದಾಕ್ಷಾಯಣಿ ಗಂಡನ ನಿಂದೆಯನ್ನು ಕೇಳಿ ತಂದೆಯಿಂದ ಅವಮಾನಿತಳಾಗಿ, ಅಪಮಾನ ಜ್ವಾಲೆಯಿಂದ ಪರಿತಪಿಸಿ ಹೋದಳು. ಯಜ್ಞಶಾಲೆಯಲ್ಲಿದ್ದ ವಿಷ್ಣು, ಇಂದ್ರ, ಅಗ್ನಿ, ವರುಣ, ಕುಬೇರ ಮೊದಲಾದ ದೇವತೆಗಳ ಸಾಕ್ಷಿಯಾಗಿ ದಕ್ಷನ ಸಂಬಂಧವಾದ ಶರೀರವನ್ನು ಧರಿಸಲಾರದೆ ತಂದೆಯನ್ನು ಶಪಿಸಿ ಯೋಗ ಮಾರ್ಗದಿಂದ ಪ್ರಾಣವನ್ನು ನಿಲ್ಲಿಸಿ, ಅಗ್ನಿಕುಂಡವನ್ನು ದಿಟ್ಟಿಸಿ ನೋಡಿದರು. ಉರಿಯು ಗಗನವನ್ನು ವ್ಯಾಪಿಸಿತು. ಆಗ ದಾಕ್ಷಾಯಣಿ ಅಗ್ನಿಮುಖದಿಂದ ಆಕಾಶಕ್ಕೆ ಹಾರಿದಳು.

ಈಗ ಜಗನ್ಮಾತೆ ಪುಟವಿಟ್ಟ ಚಿನ್ನದಂತಾಗಿ ಮಹಾ ಸತಿಯಾಗಿದ್ದಾಳೆ. ಶಿವನಡೆಗೈತಂದು ಯಾಗ ಶಾಲೆಯಲ್ಲಿ ನಡೆದ ವೃತ್ತಾಂತವನ್ನು ತಿಳಿಸಿದಳು. ಆ ವಿಷಯವನ್ನು ಕೇಳಿ ಶಿವ ಪ್ರಳಯ ಭೈರವನಂತಾದನು. ಪ್ರಳಯ ಕಾಲದ ಜ್ವಾಲೆಯ ಮುಚ್ಚಳ ತೆಗೆಯುವಂತೆ ಶಿವನ ನಡುಗಣ್ಣೆವೆಯು ಒಡೆಯಿತು. ಅದರಿಂದ ಪ್ರಚಂಡವಾದ ಕಿಡಿಗಳು ಕೆದರಿ ಉರಿ ಆಕಾಶವನ್ನು ವ್ಯಾಪಿಸಿತು. ಅದರ ಮಹಾಕಾಶದಿಂದ ಶಿವನ ಜಡೆಯಲ್ಲಿ ಗಂಗೆ ಚುಯ್ಯೆಂದು ಕಾಯ್ದು ಉಕ್ಕಿತು, ಇದರಿಂದ ತಲೆಯಲ್ಲಿದ್ದ ಚಂದ್ರ, ಕರಗಿ ಹೋದನು, ಆ ಭೀಕರ ವಾತಾವರಣದ ಹಿನ್ನೆಲೆಯಲ್ಲಿ ಶಿವನ ಹಣೆಗಣ್ಣಿನಿಂದ ವೀರ ಕುಲಾಧೀಶ್ವರ ವೀರಭದ್ರನು ಕಾಣಿಸಿಕೊಂಡ.

ಆತನ ಮೈ ಬಣ್ಣ ಬೆಂಕಿಯಂತಿತ್ತು. ತಲೆಯಲ್ಲಿ ನಿಡು ಜಡೆಯ ಮುಡಿ ನಡುನೆತ್ತಿಯಲ್ಲಿ ಲಿಂಗ ಮಕುಟ ಮಣಿ ಕುಂಡಲಾದಿ ಆಭರಣಗಳಿಂದ ಭವ್ಯವಾಗಿ ತೋರುತ್ತಿದ್ದಾನೆ. ಆತನಿಗೆ ಪಂಚಮುಖ ಸಹಸ್ರಭುಜ, ಉಡುಗೆಯ ಚಲ್ಲಣ ಕೈಗಳಲ್ಲಿ ಅನಂತ ದಿವ್ಯಾಯುಧಗಳನ್ನು ಹಿಡಿದಿದ್ದಾನೆ. ಆತನ

ಕಣ್ಣುಗಳು ಉರಿ ಕಾರುತ್ತಿವೆ. ಕಣ್ಣಲ್ಲಿ ಕೆಂಡದ ನೋಟವಿದೆ. ಆತ ಹಿಡಿದಿರುವ ದಿವ್ಯಾಯುಧ ಪ್ರಳಯ ಕಾಲದ ಬೆಂಕಿಯಿಂದ ಕಾಯಿಸಿ, ರಾಹು ಕೇತುಗಳೆಂಬ ಇಕ್ಕಳಿನ ಸಹಾಯದಿಂದ ಹಿಡಿದು, ಅಂಧಕಾಸುರನ ಎದೆಗಲ್ಲಿನ ಮೇಲೆ ವಜ್ರದ ಚಮ್ಮಟಿಗೆಯಿಂದ ಹೊಡೆದು, ಕ್ರೂರ ಸರ್ಪದ ವಿಷದ ನೀರನ್ನುಣಿಸಿ, ಸೂರ್ಯ ಮಂಡಲದಲ್ಲಿ ಮಸೆದು ಎಳೆ ಮಿಂಚಿನಲ್ಲಿ ಪುಗೊಟ್ಟು ಮಾಡಿದ ಉಗ್ರ ರೂಪದಂತಿದೆ. ತಂದೆ ಪರಶಿವನನ್ನು ಕುರಿತು 'ಭೂಮಿಯನ್ನು ಬೆಯಲೋ? ಆದಿಶೇಷನನ್ನು ಕೊಲ್ಲಲೋ? ಗಗನವನ್ನೊಡೆಯಲೋ? ಕುಲಗಿರಿಗಳನ್ನು ಹುಡಿಗೈಯಲೋ? ಜಲಧಿಯನ್ನು ಕುರಿಯಲೋ?'' ಎಂದು ಘುಡುಘುಡಿಸಿ ಅಬ್ಬರಿಸಿನಿಂದ, ಆಗ ಶಂಕರ ''ವೇದ ವಿರೋಧಿಯಾದ ದಕ್ಷನನ್ನು ಸದೆಬಡಿ'' ಎಂದು ಆಜ್ಞಾಪಿಸಿದ. ''ಮಲೆ ತೊಡೆ ಕೊಲ್ಲು ಶರಣೆನೆ ಕಾಪಾಡು'' ಎಂದು ವಿವೇಕವನ್ನು ತಿಳಿಸಿದ.

ಮಹಾ ಕುತಂತ್ರಿಯಾದ ದಕ್ಷನ ಯಜ್ಞ ವಿನಾಶ ಕಾಲದಲ್ಲಿ ವಿವೇಕದಿಂದಲೇ ವರ್ತಿಸಬೇಕೆಂದು ಶಿವ-ವೀರನಿಗೆ ಸೂಚಿಸಿದ. ಇಂಥ ವೀರನ ಅದ್ಭುತ ಪ್ರತಾಪದ ತಮಣೆಗೆ ವೀರೋಚಿತ ಹೆಂಡತಿ ಅವಶ್ಯವೆಂದು ಶಿವ ಯೋಚಿಸಿದ. ವೀರಭದ್ರ ಆರ್ಭಟದಲ್ಲಿರುವಾಗ ಶಿವ ಸನ್ನಿಧಿಯಲ್ಲೊಬ್ಬ ಸತಿ ಆಕಸ್ಮಿಕವಾಗಿ ಅವತರಿಸಿದಳು. ಅವಳೇ ಭದ್ರಾಣಿ. ಉರಿಕಾರುವ ಮೂರು ಕಣ್ಣುಗಳಿಂದಲೂ ನಂಜನ್ನು ಹೊರ ಸೂಸುವ ಉರಿ ಮೊಗದಿಂದಲೂ, ಧೀರ ಪ್ರತಾಪದಿಂದ ಶೋಭಿಸಿದಳು. ಇಂಥ ವೀರ ರಮಣಿಯನ್ನು ವೀರೇಶನಿಗೆ ಶಿವ ಲಗ್ನ ಮಾಡಿದ. ಅಲ್ಲಿದ್ದ ಶಿವಗಣ ವೀರದಂಪತಿಗಳಿಗೆ ಸದಮಳ ಸೇನೆಯನ್ನಿಕ್ಕ ಹರಸಿತು.

ವೀರಭದ್ರ ಅಂಥ ವೀರ, ಭಯಾನಕ ಹೆಂಡತಿಯ ಕೈಹಿಡಿದು, ಅಸಂಖ್ಯಾತ ಭೂತಗಣದೊಂದಿಗೆ ಪುಂಖಾನು ಪುಂಖ ಸೈನ್ಯ ಬಲದೊಂದಿಗೆ ಯಜ್ಞ ವಿನಾಶಕ್ಕೆ ಹೊರಟ. ಈತನ ಬಾರೀ ಸೈನ್ಯದ ಅಬ್ಬರಕ್ಕೆ ಆದಿಶೇಷನ ಹೆಡೆ ಮಣಿಯಿತು. ಸೈನ್ಯದ ಉರವಣಿಗೆಗೆ ದಿಗ್ಗಜಗಳು ದಿಕ್ಕು ಪಾಲಾದವು. ವೀರಭದ್ರನ ಸೈನ್ಯದ ಪಾದ ಘಾತಕ್ಕೆ ಬೆಟ್ಟಗಳು ಹಿಟ್ಟಾದವು. ಆ ಸೈನ್ಯ ಕುಲಗಿರಿಗಳನ್ನೇ ಕೈ ಗುಂಡುಗಳನ್ನಾಗಿಯೂ, ಬ್ರಹ್ಮಾಂಡಗಳನ್ನೆ ಹೊಡೆದಾಡಲಿಕ್ಕೆ ಕೈ ಚಂಡುಗಳನ್ನಾಗಿಯೂ ದಿಗ್ಗಜಗಳ ದಂತಗಳನ್ನೇ ಪಿಲ್ಲಣಿಗೆಗಳನ್ನಾಗಿಯೂ, ಮಾಡಿಕೊಂಡು ಸೂರ್ಯಚಂದ್ರರನ್ನು ಬಡಿವ ತಾಳಗಳನ್ನಾಗಿ ಮಾಡಿಕೊಂಡು ವೀರಭದ್ರನ ಕೆಲ ಬಲದಲ್ಲಿ ನಡೆದುಬಂತು.

ವೀರಭದ್ರನ ಸೈನ್ಯ ನೋಡಿ ದೇವಾನುದೇವತೆಗಳ ಎದೆ ಹೊಡೆಯಿತು, ಈತನ ಆರ್ಭಟಕ್ಕೆ ಸೊಕ್ಕಡಗಿ ದೇವತೆಗಳು ಕಂಗಾಲಾಗಿ ತಮ್ಮ ತಮ್ಮಲ್ಲಿಯೇ ಕಿತ್ತಾಡಿಕೊಂಡರು. ವಿಷ್ಣುವು ಗಾಬರಿಯಾಗಿ ತನ್ನ ಚಕ್ರವನ್ನು ಬ್ರಹ್ಮನ ತಲೆಗಿಟ್ಟನು. ಇಂದ್ರನು ವರುಣನನ್ನು ಹೊಡೆದ ವರುಣ ಕುಬೇರನನ್ನು ಹೊಡೆದ. ಇದೆಲ್ಲಾ ಶಿವಮಾಯೆ, ಭೂತಗಣ ವಿಷ್ಣುವಿನ ಚಕ್ರವನ್ನು ದೀಪಕ್ಕೆ ಮುತ್ತಿಕ್ಕಿ ಬೀಳುವ ಪತಂಗದಂತೆ ಕೆಳಕ್ಕೆ ಬೀಳಿಸಿದವು. ದೇವಾನುದೇವತೆಗಳು ದಿಕ್ಕುಪಾಲಾಗಿ ಓಡಿ ಹೋದರು. ವಿಷ್ಣು

ಜಿಂಕೆ ರೂಪ ತೊಟ್ಟು ಓಡಿ ಹೋದ. ವೀರೇಶನ ಸೈನಿಕರು ಯಜ್ಞಶಾಲೆಯಲ್ಲಿ ಲಗ್ಗೆ ಮಾಡಿದರು. ವೀರೇಶ ಘುಡುಘುಡಿಸಿ ಯಜ್ಞ ದೀಕ್ಷಿತನಾದ, ದಕ್ಷನ ತಲೆಯನ್ನು ಕತ್ತರಿಸಿ ಅಗ್ನಿ ಕುಂಡದಲ್ಲಿ ಹಾಕಿ ಸುಟ್ಟುಬಿಟ್ಟ. ವೀರಭದ್ರನ ಕಿಂಕರರು ವಾಣಿಯ ಕಿವಿಯನ್ನು ಕೊಯ್ದರು. ಮುನಿಗಳ ಮೀಸೆಗೆ ಬೆಂಕಿ ಹಚ್ಚಿದರು. ದೇವ ಸ್ತ್ರೀಯರನ್ನು ಸೆರೆ ಹಿಡಿದರು.

ದಕ್ಷನ ಪತ್ನಿ ಪರಿಪರಿಯಿಂದ ಬೇಡಿದುದರಿಂದ, ಆಜಪಶುವಿನ ತಲೆಯನ್ನು ಕತ್ತರಿಸಿ, ದಕ್ಷನ ಮುಂಡಕ್ಕೆ ಕೂಡಿಸಿ ಜೀವದಾನ ಮಾಡಿದ, ಅಂದಿನಿಂದ ದಕ್ಷನ ಮುಖ ಯಜ್ಞ ಕುರಿಯ ಮುಖವಾಯ್ತು. ವೀರಭದ್ರ ಮತ್ತು ಅವನ ಕಿಂಕರರು ಕೈಲಾಸಕ್ಕೆ ಬಂದು ಇದು ದಕ್ಷನ ಕಿರೀಟ, ಇದು ಕಾಲನ ತೋಳು, ಇದು ಇಂದ್ರನ ಕಣ್ಣು, ಇದು ಆದಿತ್ಯನ ಹಲ್ಲು. ಇದು ವಾಣಿಯ ಮೂಗು, ಇದು ಗದೆ, ಇದು ಚಕ್ರ, ಇವು ಇಂದ್ರಾದಿಗಳ ಶಸ್ತ್ರಾಸ್ತ್ರಗಳು ಎಂದು ಶ್ರೀ ಶಂಕರನ ಪಾದಕ್ಕೆ ದಿಗ್ವಿಜಯ ಕಾಣಿಕೆಯಾಗಿ ನಿಲ್ಲಿಸಿದರು. ದಕ್ಷ ಬಾಗಿದ ತಲೆಯಿಂದ 'ಶಂಕರಾ ನನ್ನನ್ನು ಕ್ಷಮಿಸು. ನಾನು ಅಜ್ಞಾನಿ ತಿಳಿಯದೆ ಮಾಡಿದ ತಪ್ಪನ್ನು ಕ್ಷಮಿಸು. ನಾನು ಪಶು ನೀನು ಪಶುಪತಿ' ಎಂದಾಗ ಶಿವ ಅವನನ್ನು ಕ್ಷಮಿಸಿ ಶತಯಜ್ಞದ ಫಲವನ್ನು ಕರುಣಿಸಿದ.

೭.೪. ಪುರಾಣಗಳು :

ವೀರಭದ್ರನ ವಿಚಾರ, ಅವನ ಅವತಾರ ಹಾಗೂ ದಕ್ಷ ಯಾಗವನ್ನು ಹಾಳು ಮಾಡಿದ್ದುದರ ಬಗ್ಗೆ ಪುರಾಣಗಳಾದ ಕೂರ್ಮ ಪುರಾಣ, ಮತ್ತು ಭಾಗವತ ಪುರಾಣಗಳಲ್ಲಿ ವಿವರಿಸಲಾಗಿದೆ.

ಭಾಗವತ ಪುರಾಣದಲ್ಲಿ ವೀರಭದ್ರನ ಬಗ್ಗೆ ಈ ರೀತಿ ವಿವರವಿದೆ. 'ದಕ್ಷನು, ಋಷಿಗಳು ಮತ್ತು ದೇವತೆಗಳು ಸೇರಿ ಯಜ್ಞ ಮಾಡುವಲ್ಲಿಗೆ ಬಂದ ಶಿವನನ್ನು ನಿಂದಿಸುತ್ತಾರೆ. ನಂತರ ತಾನು ಬ್ರಹ್ಮಸ್ಪತಿ ಶಿವ ಎಂಬ ಯಜ್ಞವನ್ನು ಮಾಡಲು ಸಿದ್ಧತೆ ಮಾಡುತ್ತಾನೆ. ದಕ್ಷನ ಈ ಯಜ್ಞಕ್ಕೆ ಸತಿ ಹೋಗಲು ಶಿವನು ಸಮ್ಮತಿಸುವುದಿಲ್ಲವಾದರೂ ಆಕೆ ಹಟಹಿಡಿದು ಅಲ್ಲಿಗೆ ಹೋಗುತ್ತಾಳೆ. ಹೀಗೆ ಬಂದ ಸತಿಯನ್ನು ದಕ್ಷನು ಅವಮಾನಗೊಳಿಸುತ್ತಾನೆ. ಅವಮಾನ ಸಹಿಸಿಕೊಳ್ಳದೆ ಆಕೆ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಇದನ್ನು ತಿಳಿದ ಶಿವ ಕೋಪತಪ್ತನಾಗಿ ಉಗ್ರರೂಪ ಧರಿಸಿ ಯಜ್ಞವನ್ನು ಧ್ವಂಸ ಮಾಡುತ್ತಾನೆ. ದಕ್ಷನು ಶಿವನಿಗೆ ಶರಣಾಗತನಾದಾಗ ಶಿವನು ದಕ್ಷನಿಗೆ ಗಣನಾಯಕನ ಪದವಿಯನ್ನು ದಯಪಾಲಿಸುತ್ತಾನೆ''. ಕೂರ್ಮ ಪುರಾಣದಲ್ಲಿ ವೀರಭದ್ರನ ಬಗ್ಗೆ ಈ ರೀತಿ ವಿವರಣೆಯಿದೆ. ''ದಕ್ಷನು ತನ್ನ ಮಡದಿಯೊಂದಿಗೆ ಅಳಿಯ ನಾದ ಶಂಕರನೊಂದಿಗೆ ಹೋದಾಗ, ಶಂಕರನಿಂದ ತನಗೆ ಗೌರವ ಸಿಗಲಿಲ್ಲ ಎಂಬ ಕಾರಣಕ್ಕಾಗಿ ಅಸಮಧಾನಗೊಳಿಸುತ್ತಾನೆ. ಹೆತ್ತವರಿಂದಲೇ ತನಗೆ ಈ ರೀತಿಯ ಅವಮಾನವಾಗಲು ಸತಿ ಅಗ್ನಿಗೆ ಆಹುತಿಯಾಗಿ ಮರುಜನ್ಮದಲ್ಲಿ ಹಿಮವಾನನ ಮಗಳಾಗಿ ಜನಿಸುತ್ತಾಳೆ. ಶಂಕರನ ಶಾಪದಿಂದ ದಕ್ಷನು ಕ್ಷತ್ರಿಯ ಕುಲದಲ್ಲಿ ಪ್ರಜೇತನೆಂದು ಜನಿಸುತ್ತಾನೆ. ಮುಂದೆ ಪ್ರಜೇತನು ಯಜ್ಞವನ್ನು ಮಾಡುವಾಗ ಶಿವನಿಗೆ ಸಲ್ಲತಕ್ಕ ಯಜ್ಞಾಹುತಿಯನ್ನು ನೀಡಲು

ನಿರಾಕರಿಸುತ್ತಾನೆ. ಇದರಿಂದ ಶಂಕರನ ಕೋಪಕ್ಕೆ ಗುರಿಯಾಗಬೇಕಾಗುತ್ತದೆಂದು ದಧೀಚಿ ಋಷಿಯ ಎಚ್ಚರಿಕೆಗೆ ಪ್ರಚೇತನು ಕಿವಿಗೊಡುವುದಿಲ್ಲ. ಆಗ ಪಾರ್ವತಿ ಯಜ್ಞವನ್ನು ನಾಶ ಮಾಡಲು ಶಂಕರನನ್ನು ಪ್ರಾರ್ಥಿಸಲು, ಆತುರ ಪರಾಕ್ರಮಿಯಾದ ವೀರಭದ್ರನು ಜನಿಸುತ್ತಾನೆ. ಪಾರ್ವತಿ ತನ್ನ ಶಕ್ತಿ ಸ್ವರೂಪಿಣಿಯಾದ ಕಾಳಿಯನ್ನು ವೀರಭದ್ರನಿಗೆ ಯಜ್ಞ ಸಂಹಾರದ ಕಾರ್ಯದಲ್ಲಿದ ಸಹಾಯ ಮಾಡಲು ಕಳುಹಿಸುತ್ತಾಳೆ. ವೀರಭದ್ರನು ಯಜ್ಞವನ್ನು ಧ್ವಂಸ ಮಾಡಲು ದಕ್ಷನಿಗೆ ತನ್ನ ಅವಿವೇಕದ ಅರಿವಾಗಿ ಶಂಕರನನ್ನು ಶರಣಾಗತ ಭಾವದಿಂದ ಪ್ರಾರ್ಥಿಸುತ್ತಾನೆ. ಶಂಕರನು ಕ್ಷಮಿಸಿ ಅವನಿಗೆ ಗಣನಾಯಕನ ಪದವಿಯನ್ನು ದಯಪಾಲಿಸುತ್ತಾನೆ''.

೭.೫. ಐತಿಹ್ಯ :

ವೀರಭದ್ರ ಮಹಿಮೆ

ಭಳಿರೇ, ಅಹಹಹಾ ರುದ್ರಾ ಶ್ರೀಮತ್ಪರಮ ಪಾವನ ಚರಿತ್ರ ಚಾರುತರ ಸಮ್ಮೋಹನಾಂಗ ಮದನಮೋಹನ ಮಾಯಾಕೋಲಾಹಲ, ನಿತ್ಯ ನಿರಂಜನ ನಿಗಮ ಗೋಚರ ಶ್ರೀ ಸಚ್ಚಿದಾನಂದ ನಿತ್ಯ ಪರಿಪೂರ್ಣ ಹೃದಯ, 'ಜಗದ್ವಿಸ್ತಾರವನು ಸಂಭಾವಿಪ, ಪರಶಿವ ಸ್ವರೂಪ, ಶ್ರೀಶ್ರೀ ಚಿತ್ತರಕಲ್ ದುರ್ಗದ ಇಮ್ಮಡಿ ಮುರುಘರಾಜೇಂದ್ರ ಮಹಾಸ್ವಾಮಿ ಬಹುಪರಾಕ್.

ಅಹಹಹಾ ರುದ್ರಾ,ಗಂಡುಗಲಿಯಾದ ನಮ್ಮ ಶ್ರೀ ವೀರಭದ್ರ ದೇವರು ಹುಟ್ಟಿದ ರೀತಿ ಅದೆಂತೆಂದೊಡೆ,ಹುಟ್ಟಿದಾಗಲೇ ಹೂವಿನ ಕಾಸಿ, ಮಂಜುಳ ಕಾಸಿ, ಬ್ರಹ್ಮ ಕಾಸಿ, ವಿಷ್ಣು ಕಾಸಿ, ರುದ್ರಕಾಸಿ, ಮೆಟ್ಟಿನ ಹೊನ್ನಾವಿಗೆ, ಎರಡು ಸಾವಿರ ಭುಜ, ಕೆಕ್ಕರಿಸಿದ ಕಣ್ಣು, ಜುಂಜು ಚಂಡೆ, ಇಂತಪ್ಪ ನಮ್ಮ ಶ್ರೀ ವೀರಭದ್ರ ದೇವರು ಹೋಮ ಕುಂಡದ ಬಳಿಗೆ ಹೇಗೆ ಹೋಗುತ್ತಾರೆಂದರೆ,

ಅಹಹಹಾ ರುದ್ರಾ, ಭಳಿರೇ,ಬ್ರಹ್ಮ ಕವಾಟದಲ್ಲಿ ತ್ರಿಪುಂಡ್ರ ಭಸ್ಮ, ಕೈಯಲ್ಲಿ ಬಿಲ್ಲು ಬಾಣ, ಸಣ್ಣಗತ್ತಿ, ಆದುರುಗತ್ತಿ, ಬಿದುರುಗತ್ತಿ, ಕರಗಸಗತ್ತಿ, ಕಿರುಚೂರಿ, ಬೆನಕಿನಹಗ್ಗ, ವಜ್ರಮುಷ್ಠಿ, ಶಂಕ ಕೊಡಲಿ, ಶೂಲಬಾಣ, ಉರಿ ಬಾಣ, ಇಂತಿಷ್ಟು ಆಯುಧ ಹಿಡಿದು ಚಂದ್ರನನ್ನು ಕೆಡಹಿ,ಬಪ್ಪು ಭಲೇ ಎಂದು ಕೂಗುತ್ತ ಬಂದು ವಿಘ್ನೇಶ್ವರನ ಹೊಟ್ಟೆಗೆ ಹೊಡೆದು, ಎಡಪಾದದಲ್ಲಿ ತಿಕ್ಕಿ, ಸೂರ್ಯ ದೇವನ ಹಲ್ಲುಗಳನ್ನು ಮುರಿದು, ಸರಸ್ವತಿಯ ಮೂಗನ್ನೇ ಕೊಯ್ದು, ಅನಂತಕೋಟಿ ಗುಡುಗು ಮಿಂಚು ಸಿಡಿಲು ಭೋರ್ಗರೆದಂತೆ ಆಗ ಒಡೆದು ಮೂಡಿದರು,ನಮ್ಮ ವೀರಭದ್ರ ದೇವರು, ಕೈಲಾಸ ದ್ವಾರಮಂ ಪೊಕ್ಕು ಪೋಗುವಾಗ ಶಿವ ದೇವರು ಕಂಡು, ನಸುನಕ್ಕು 'ಭಲೇ ಬಾಪುರೇ' ಎಂದು ರತ್ನ ಸಿಂಹಾಸನದ ಗದ್ದಿಗೆಯ ಮೇಲೆ, ಕುಳ್ಳಿರಿಸಿಕೊಂಡು ಪುಷ್ಪದ ಮಳೆ ಕರೆದರು 'ವಿಪರೀತನಾಯಕ, ನಿನ್ನ ಮಹಾ ಮಹಿಮೆಯ ಪವಾಡವನ್ನು ಅವತ್ತಿಗೆ ಉಂಟು ಇವತ್ತಿಗಿಲ್ಲವೆಂದು ಹೇಳುವ ಶಿವದ್ರೋಹಿಗಳಿಗೆ ನೀನೇ ಗಂಡಾ ಖಡೇ ಖಡೇ ಎಂದರು (ಕಮಲಾ ಹೆಮ್ಮಿಗೆ, ೨೦೦೦, ೨೭).

ಏಣಾದಿನಾಥನಿಗೆ ಕನಸಿನೊಳಗೆ ಶ್ರೀ ವೀರಭದ್ರನು ಖಡ್ಗ ಫಳಕವನ್ನು ಕೊಟ್ಟದ್ದು:

ಅಹಹಾ ವೀರ। ಅಹಹಾ ರುದ್ರ। ಶ್ರೀ ವೀರಭದ್ರನು ಏಣಾದಿನಾಥನಿಗೆ ಕನಸಿನೊಳಗೆ ಖಡ್ಗ ಫಳಕವನ್ನು ಕೊಟ್ಟಿದ್ದನ್ನು ಹೇಳುವೆನು ಕೇಳಿರಿ ಭಕ್ತಾದಿಗಳೆ। ಭಾರತದಲ್ಲಿ ಚೋಳಪಪ್ಪಣವಿತ್ತು। ಅದು ಬಹಳ ಪ್ರಸಿದ್ಧವಾಗಿತ್ತು। ಈ ಪಟ್ಟಣದೊಳಗೆ ಕರವೂರೆಂಬ ಗ್ರಾಮ ಇತ್ತು। ಈ ಗ್ರಾಮದೊಳಗೆ ಪಗಲೋಳನೆಂಬ ರಾಜನು ಇದ್ದನು। ಅವನು ಬಹಳವಾಗಿ ಜನರಿಗೆ ಬೇಕಾಗಿದ್ದನು। ಅವನ ರಾಜ್ಯದಲ್ಲಿ ಎಲ್ಲಾ ಪ್ರಜೆಗಳು ಸುಖದಿಂದ ಇದ್ದರು। ರಾಜ್ಯದಲ್ಲಿಯ ಎಲ್ಲಾ ಪ್ರಜೆಗಳು ತನ್ನ ಮಕ್ಕಳೆಂದು ಅವರ ಹಿತವನ್ನು ಸಾಧಿಸುತ್ತಿದ್ದನು।

ಒಮ್ಮೆ ಆ ಪಟ್ಟಣಕ್ಕೆ ಏಣಾಧಿನಾಥನೆಂಬ ಶಿವಭಕ್ತನು ಬಂದನು। ಎರಡನೆಯವರನ್ನು ಓಲೈಸಿಗಳಿಸಿ ತಂದರ್ಥವು ಕಷ್ಟವೆಂದು ತಿಳಿದು ಶಿವಧ್ಯಾನದಲ್ಲಿ ಚಿಂತಿಸುತ್ತಿದ್ದನು। ಹೀಗೆ ಚಿಂತಿಸುತ್ತಿರಲು ಒಂದು ದಿನ ಅವನ ಕನಸಿನಲ್ಲಿ ಶ್ರೀ ವೀರಭದ್ರ ದೇವರು ಬಂದು ಒಂದು ಖಡ್ಗವನ್ನು ಕೊಟ್ಟನು। ಅದರಿಂದ ಅವನಿಗೆ ವೀರಶ್ರೀ ಸಂಚಾರವಾಯಿತು। ಹರ್ಷ ಪುಳಕಿತನಾಗಿ ಎಚ್ಚತ್ತನು।

ಶಿವಲಾಂಛನವೆನಿಸಿದ ಭಸ್ಮವಿಲ್ಲದ ಶಸ್ತ್ರ ಜೀವಿಗಳ ಗಂಡನೆಂದು ಸಾರುತ್ತಾ ಇದಿರಾದವರನ್ನು ಗೆದ್ದ। ಹಣವನ್ನು ತಂದು ಜಂಗಮಕ್ಕೆ ನೀಡುತ್ತಿದ್ದನು। ಓರ್ವನು ಹಗಲು ದೀವಿಗೆಯನ್ನು ಹಿಡಿದುಕೊಂಡಿರುವ ಬಿರುದಾಂಕ ಸುಭಟರಿಗೆ ಶರಭ ಬೇರುಂಢನೆಂಬ ಬಿರುದು ಹೊಗಳಿಸಿಕೊಳ್ಳುತ್ತಿದ್ದನು। ಒಂದು ಬಡಿಗೆಯ ತುದಿಗೆ ಏಳು ನೂರು ಗಂಟನ್ನು ಕಟ್ಟಿಸಿ ತನ್ನೊಡನೆ ಕಾದಿ ಗೆದ್ದವರಿಗೆ ಅದನ್ನು ಕೊಡುವೆನು ಎಂದು ಸಾರುತ್ತ ನಡೆದಿದ್ದನು। ಏಣಾಧಿನಾಥನು ಅವನನ್ನು ಕಂಡು ಅವನಿಗೆ ಎದುರಾದನು। ಹೊನ್ನ ಗಂಟನ್ನು ಅವನಿಂದ ಕಿತ್ತುಕೊಂಡು ಬಂದು ಜಂಗಮ ದಾಸೋಹವನ್ನು ಮಾಡಿದನು।

ಪಗಲ್ಚೋಳರಾಯನ ಮುಂದೊಬ್ಬ ಭಟನ ಕಾಳಗದಲ್ಲಿ ಖಡ್ಗ ಫಳಕದಿಂದ ತಲೆಯನ್ನು ಕಡಿದೊಗೆದನು। ಅವನ ಜೀವವನ್ನು ಕೈಲಾಸಕ್ಕೆ ಕಳಿಸಿದನು। ಈ ರೀತಿಯಲ್ಲಿ ಕೆಲವು ದಿನಗಳು ಕಳೆಯಲು। ಒಂದು ದಿನ ಏಣಾಧಿನಾಥನೊಡನೆ ಕಾದಿಗೆಲ್ಲಬೇಕೆಂದು ಅಸೂಹೆಯಿಂದ ರಾಜಗುರು ಎಂಬವನು ಸಾವಿರ ಹೊನ್ನ ಗಂಟ ಕಟ್ಟಿ। ಅದನ್ನು ಬಿದುರಿನ ಗಳಕ್ಕೆ ತುದಿಯಲ್ಲಿ ಕಟ್ಟಿ। ತನ್ನನ್ನು ಕಾದಿಗೆದ್ದವರಿಗೆ ಕೊಡುವೆನೆಂದು ಬರುತ್ತಿದ್ದನು। ಏಣಾದಿನಾಥನು ಖಡ್ಗ ಫಳಕವನ್ನು ವೈರಿಯ ತಲೆಯ ಮೇಲೆ ಹೊಡೆದು ಕೊಂದನು। ಇದರಿಂದ ಪಗಲ್ಚೋಳನು ಮೆಚ್ಚಿದನು। ಅವನು ಅವನನ್ನು ಆನೆಯ ಮೇಲೆ ಕೂಡ್ರಿಸಿ ಮೆರೆಸಿದನು। ಮತ್ತು ಸಾವಿರ ಹೊನ್ನುಕೊಟ್ಟನು। ಅಲ್ಲದೆ ಅವನಿಗೆ ತಿಂಗಳೊಂದಕ್ಕೆ ಸಾವಿರ ಹೊನ್ನು ಕೊಡಹತ್ತಿದನು।

ಏಣಾದಿನಾಥನು ಚೋಳನಿಂದ ಧನವನ್ನು ತೆಗೆದುಕೊಂಡು। ಜಂಗಮಭಕ್ತಿಯನ್ನು ಮಾಡುತ್ತಾ ನಾಲ್ವತ್ತು ವರ್ಷ ಸುಖದಲ್ಲಿದ್ದನು। ಅಹಹಾ ವೀರ। ಅಹಹಾ ರುದ್ರ। ದ್ರೋಹಿಗಳ ಗಂಡ ಶ್ರೀಶೈಲದ ನಾಗಲೂಟಿ ವೀರಭದ್ರ । ಕಡೆ । ಕಡೆ॥

ಶಿವನೆನ್ನುತ್ತಾ ಪ್ರಾಣಬಿಟ್ಟ ವಿದಳನೆಂಬ ಅರಸನಿಗೆ ಶ್ರೀವೀರಭದ್ರನು ಗಣ ಪದವಿಯನ್ನು ಕೊಟ್ಟದ್ದು :

ಅಹಹಾ ವೀರ। ಅಹಹಾ ರುದ್ರ। ಶಿವನೆನ್ನುತ್ತಾ ಪ್ರಾಣಬಿಟ್ಟ ವಿದಳನೆಂಬ ಅರಸನಿಗೆ ಶ್ರೀ ವೀರಭದ್ರನು ಗಣಪದವಿಯನ್ನು ಕೊಟ್ಟದ್ದು ಹೇಗೆಂಬುದನ್ನು ಹೇಳುವೆನು ಮನ್ನಣೆವಿತ್ತು ಕೇಳಿರಿ। ಲಿಂಗ ಪುರಾಣದಲ್ಲಿ ಶಿವರಹಸ್ಯದಲ್ಲಿಯ ಶಿವನು ಷಣ್ಮುಖನಿಗೆ ನಿರೂಪಿಸಿದ್ದು ಏನೆಂದರೆ; ಒಂದಾನೊಂದು ಕಾಲದಲ್ಲಿ ವಿದಳನೆಂಬ ಅರಸನು ಇದ್ದನು। ಅವನು ಬುದ್ಧಿವಂತರಾದ ತನ್ನ ಎಲ್ಲಾ ಮಂತ್ರಿಗಳನ್ನು ಬಿಟ್ಟು। ಯೌವ್ವನದ ಕೊಬ್ಬಿನಿಂದ ಜೂಜು। ಪಗಡೆ, ಪರಿಹಾಸ್ಯ, ಕಾಮ ಕಲಹಗೋಷ್ಠಿ ಮುಂತಾದವುಗಳಿಂದ ಕಾಲಕಳೆಯುತ್ತಿದ್ದನು। ಎರಡನೆಯ ಅರಸರು ಅವನ ರಾಜ್ಯವನ್ನು ಅಪಹರಿಸಿಕೊಂಡಿದ್ದರು। ಅದರಿಂದ ವಿದಳನು ಅಡವಿಯಲ್ಲಿ ಇರಹತ್ತಿದ್ದನು। ಕಳ್ಳತನ ಮಾಡಿ ಹೊಟ್ಟೆ ಹೊರೆದುಕೊಳ್ಳುತ್ತಿದ್ದನು। ಆ ನಂತರ ಕೋಟಿಕೋಟಿ ಪ್ರಾಣಿಗಳನ್ನು ಕೊಲ್ಲುತ್ತಾ ತನ್ನ ಬಾಳನ್ನು ಮುಂದುವರೆಸಿದ್ದನು।

ಹೀಗಿರಲು ಒಂದು ದಿನ ವಿದಳನೆಂಬ ಅರಸನಿಗೆ ಮರಣ ಬಂದಿತು। ಮೊದಲಿನ ನಿಯೋಗದವರು ಮತ್ತು ಮಂತ್ರಿಗಳು ಅವನ ಮರಣ ಕಾಲಕ್ಕೆ ಅವನ ಹತ್ತಿರ ಬಂದು 'ನಮಗೇನು ಬುದ್ಧಿ' ಎಂದು ಹೇಳಿದರು। ಅಷ್ಟರಲ್ಲಿಯೇ :'ಅಹರ ಪಹರ'ವೆಂದು ಅನ್ನುತ್ತಾ ಪ್ರಾಣಬಿಟ್ಟನು।

ಅಹಹಾ ವೀರ। ಅಹಹಾ ರುದ್ರ। ಇತ್ತ ಅವನನ್ನು ಯಮದೂತರು ಒಯ್ಯಲು ಬಂದರು। ಆದರೆ 'ಹರಿ' ಎಂದು ಜೀವ ಬಿಟ್ಟಿದ್ದರಿಂದ ಯಮದೂತರು ಆತನನ್ನು ಒಯ್ಯಲು ಅಸಮರ್ಥರಾದರು। ಶ್ರೀ ವೀರಭದ್ರನ ನಿರೂಪದಿಂದ ಜ್ವಾಲಮುಖದ ಗಣೇಶ್ವರರು ಬಂದರು। ಅವರು ತಮ್ಮ ಶೂಲದಿಂದ ಇರಿದು ಯಮದೂತರನ್ನು ಸಂಹರಿಸಿದರು। ಮತ್ತು ಶಿವನೆನ್ನುತ್ತಾ ಪ್ರಾಣಬಿಟ್ಟ ವಿದಳನೆಂಬ ಅರಸನನ್ನು ಸತ್ಕರಿಸಿ ಅವನಿಗೆ ಗಣಪದವಿಯನ್ನು ಕೊಟ್ಟರು। ಬೆಂಗಳೂರಿನ ಪ್ರಳಯ ಕಾಲ ವೀರಭದ್ರ। ಕಡೆ। ಕಡೆ॥

ಶ್ರೀ ವೀರಭದ್ರನಿಂದ ಶಿವನಿಗೆ ಕಾಣಿಕೆ:

ಅಹಹಾ ವೀರ। ಅಹಹಾ ರುದ್ರ। ಶಿವಭಕ್ತ ಸಜ್ಜನರೆ ವೀರಭದ್ರನು। ಶಿವನಿಗೆ ಕಾಣಿಕೆ ಅರ್ಪಿಸಿದ್ದನ್ನು ತಿಳಿಸುವೆನು ಕೇಳಿರಿ। ಶಿವನು ವೀರಭದ್ರನಿಗೆ ದಕ್ಷನ ಯಜ್ಞವನ್ನು ಧ್ವಂಸ ಮಾಡಲು ಅಪ್ಪಣೆ ಮಾಡಿದನು। ದಕ್ಷನ ಯಜ್ಞಕ್ಕೆ ಬಂದವರೆಲ್ಲರನ್ನು ದಮನಗೊಳಿಸಲು ತಿಳಿಸಿದ್ದನು। ಅದರಂತೆ ಶಿವನ ಆಶೀರ್ವಾದದಿಂದ, ಶಿವನ ಮಹಿಮೆಯಿಂದ ದಕ್ಷನ ಯಜ್ಞವನ್ನು ಧ್ವಂಸಗೊಳಿಸಿ, ಅದಕ್ಕೆ ಬಂದವರೆಲ್ಲರನ್ನೂ ದಮನಗೊಳಿಸಿ ಶ್ರೀ ವೀರಭದ್ರನು ಜಯಶೀಲನಾಗಿ ಶಿವನಿಗೆ ಕಾಣಿಕೆಗಳನ್ನು ತಂದನು। ಇದು ದಕ್ಷನ ಮುಕಟ। ಇದನ್ನು ಕಾಣಿಕೆಯಾಗಿ ತಂದಿದ್ದೇನೆ ತೆಗೆದುಕೊಳ್ಳು। ಇದನ್ನು ವಿಷ್ಣುವಿನ ಚಕ್ರ। ಇದನ್ನು ನಿನಗೆ ಕಾಣಿಕೆಯಾಗಿ ತಂದಿದ್ದೇನೆ। ತೆಗೆದುಕೊಳ್ಳು। ಇದು ಬ್ರಹ್ಮನ ಕಿವಿ।

ಇದನ್ನು ನಿನಗೆ ಕಾಣಿಕೆಯಾಗಿ ತಂದಿದ್ದೇನೆ। ತೆಗೆದುಕೊಳ್ಳು। ಇದು ಸರಸ್ವತಿಯ ಮೂಗು। ಇದನ್ನು ನಿನಗೆ ಕಾಣಿಕೆಯಾಗಿ ತಂದಿದ್ದೇನೆ। ತೆಗೆದುಕೊಳ್ಳು। ಇದು ಲಕ್ಷ್ಮಿಯ ತುರುಬು। ಇದನ್ನು ನಿನಗೆ ಕಾಣಿಕೆಯಾಗಿ ತಂದಿದ್ದೇನೆ। ತೆಗೆದುಕೊಳ್ಳು। ಇದು ಇಂದ್ರನ ಕಣ್ಣು । ಇದನ್ನು ನಿನಗೆ ಕಾಣಿಕೆಯಾಗಿ ತಂದಿದ್ದೇನೆ। ತೆಗೆದುಕೊಳ್ಳು। ಇದು ಯಮನ ತೋಳು। ಇದನ್ನು ನಿನಗೆ ಕಾಣಿಕೆಯಾಗಿ ತಂದಿದ್ದೇನೆ। ತೆಗೆದುಕೊಳ್ಳು। ಇದು ಸೂರ್ಯ ದೇವನ ಹಲ್ಲು। ಇದನ್ನು ನಿನಗೆ ಕಾಣಿಕೆಯಾಗಿ ತಂದಿದ್ದೇನೆ। ತೆಗೆದುಕೊಳ್ಳು। ಎಂದು ವೀರಭದ್ರನು ತಾನು ಜಯಹೊಂದಿದ ಕುರುಹಾಗಿ ಜಯದ ವಿವಿಧ ಕಾಣಿಕೆಗಳನ್ನು ತಂದಿದ್ದನು। ಆ ಎಲ್ಲ ಕಾಣಿಕೆಗಳನ್ನು ಒಡಪಿನಂತೆ ಒಡೆ ಒಡೆದು ಒಂದೊಂದನ್ನೇ ಶಿವನ ಪಾದಕ್ಕೆ ಕಾಣಿಕೆಯಾಗಿ ಅರ್ಪಿಸಿದನು। ಹುಬ್ಬಳ್ಳಿಯ ಬಮ್ಮಾಪುರ ಗಲ್ಲಿಯ ವೀರಭದ್ರ ಕಡೆ। ಕಡೆ॥

ವೀರೇಶನು ಶಿವನ ಮುಂದೆ ನಿಂತು ಆರ್ಭಟಿಸಹತ್ತಿದನು। ಶ್ರೀ ವೀರಭದ್ರನು ಬೆಂಕಿಯಂತೆ ಉಜ್ವಲ ದೇಹಧರಿಸಿದ್ದನು। ನಿಡಿದಾದ ಜಡೆಯನ್ನು ಬಿಟ್ಟಿದ್ದನು। ಕೆಂಜೆಡೆಯನ್ನು ಬಿಟ್ಟಿದ್ದನು। ಲಿಂಗಧರಿಸಿದ್ದನು। ಲಿಂಗಾಂಗಿಯಾಗಿದ್ದನು।ಬಂಗಾರದ ಮುಕುಟ ಧರಿಸಿದ್ದನು। ಮಣಿಕುಂಡಲಗಳನ್ನು ಧರಿಸಿದ್ದನು। ಪಂಚ ತೇಜಮುಖವುಳ್ಳವನಾಗಿದ್ದನು। ಸಾವಿರಾರು ಭುಜಗಳುಳ್ಳವನಾಗಿದ್ದನು। ಅನಂತ ಶಸ್ತ್ರಾಸ್ತ್ರಗಳನ್ನು ಧರಿಸಿದ್ಧನು। ಕೆಂಡಕಾರುವ ಕಣ್ಣುವುಳ್ಳವನಾಗಿದ್ದನು। ವಿಭಾಷಣಗಳನ್ನು ಹಿಡಿದಿದ್ದನು। ಮೃತ್ಯುರೂಪವಾದ ಶ್ರೀ ವೀರಭದ್ರನು ಶಿವನು ಮುಂದೆ ಬಂದು ನಿಂತನು। ಶ್ರೀ ವೀರಭದ್ರನು ಕಾಲನಾಗಿದ್ದನು। ಪ್ರಳಯಕಾಲದ ಬೆಂಕಿಯಂತಿದ್ದನು। ಉಗ್ರ ರೂಪದ ವಿರಕ ಹೊಯ್ದ ವಿಗ್ರಹದಂತಿದ್ದನು। ಎಲೈ ಶಿವನೇ, ನಿನ್ನ ಅಪ್ಪಣೆ ಏನು ತಿಳಿಸುವಂತವನಾಗು। ಬ್ರಹ್ಮ, ವಿಷ್ಣು, ಅಗ್ನಿ, ಯಮ, ವರುಣ, ಕುಬೇರ ಮೊದಲಾದ ದೇವಾನುದೇವತೆಗಳ ರುಂಡಗಳನ್ನು ಚಂಡಾಡಲೋ? ಭೂಮಿಯನ್ನು ಬಿರಿಯುವಂತೆ ಒದೆಯಲೋ? ಆದಿ ಶೇಷನನ್ನು ಬುಡಮೇಲು ಮಾಡಲೋ? ಸಮುದ್ರದ ನೀರನ್ನೆಲ್ಲಾ ಕುಡಿದು ಬರಿದು ಮಾಡಲೋ? ಗಿರಿ ಪರ್ವತಗಳನ್ನು ಪುಡಿ ಪುಡಿ ಮಾಡಲೋ? ಬ್ರಹ್ಮಾಂಡವನ್ನು ಚಂಡಿನಂತೆ ಹಾರಿಸಲೋ? ನಕ್ಷತ್ರಗಳನ್ನು ಉದುರಿಸಲೋ? ಎಂದು ವೀರಭದ್ರನು ಶಿವನ ಆಜ್ಞೆಯನ್ನು ಕೇಳಿದನು। ಆಗ ಶಿವನು ಶಿವದ್ರೋಹಿಯಾದ ದಕ್ಷನ ಯಜ್ಞವನ್ನು ಹಾರಿಸು। ಬ್ರಹ್ಮ ವಿಷ್ಣು ಮೊದಲಾದವರನ್ನು ಕೊಲ್ಲು। ಶರಣೆಂದು ಬಂದವರನ್ನು ರಕ್ಷಿಸು। ಅಹಂಕಾರಗಳನ್ನು ಕೊಲ್ಲು। ಎಂದು ಹರಸಿದನು।

ಶ್ರೀ ವೀರಭದ್ರನು ತನ್ನ ಸತಿಯಾದ ಭದ್ರಕಾಳಿಯೊಡನೆ ದಕ್ಷಯಾಗಕ್ಕೆ ಹೊರಟನು। ವೀರಭದ್ರನ ಸೈನ್ಯವು ಹೊರಟಿತು। ವೀರಭದ್ರನು ದಕ್ಷನ ಯಜ್ಞವನ್ನು ಧ್ವಂಸ ಮಾಡಿದನು। ಯಜ್ಞಜಕ್ಕೆ ಬಂದವರನ್ನು ಕೊಂದನು। ಶರಣು ಬಂದವರನ್ನು ರಕ್ಷಿಸಿದನು। ಶಿವನ ಆಜ್ಞೆಯಂತೆ ಮಾಡಿದನು। ಶ್ರೀ ಗೊಡಚಿ ವೀರಭದ್ರ। ಕಡೆ। ಕಡೆ॥

ಶ್ರೀ ವೀರಭದ್ರನಿಂದ ಶಿವನಿಗೆ ಕಾಣಿಕೆ:

ಅಹಹಾ ವೀರ। ಅಹಹಾ ರುದ್ರ। ಶಿವಭಕ್ತ ಸಜ್ಜನರೆ ವೀರಭದ್ರನು। ಶಿವನಿಗೆ ಕಾಣಿಕೆ ಅರ್ಪಿಸಿದ್ದನ್ನು ತಿಳಿಸುವೆನು ಕೇಳಿರಿ। ಶಿವನು ವೀರಭದ್ರನಿಗೆ ದಕ್ಷನ ಯಜ್ಞವನ್ನು ಧ್ವಂಸ ಮಾಡಲು ಅಪ್ಪಣೆ ಮಾಡಿದನು। ದಕ್ಷನ ಯಜ್ಞಕ್ಕೆ ಬಂದವರೆಲ್ಲರನ್ನು ದಮನಗೊಳಿಸಲು ತಿಳಿಸಿದ್ದನು। ಅದರಂತೆ ಶಿವನ ಆಶೀರ್ವಾದದಿಂದ, ಶಿವನ ಮಹಿಮೆಯಿಂದ ದಕ್ಷನ ಯಜ್ಞವನ್ನು ಧ್ವಂಸಗೊಳಿಸಿ, ಅದಕ್ಕೆ ಬಂದವರೆಲ್ಲರನ್ನೂ ದಮನಗೊಳಿಸಿ ಶ್ರೀ ವೀರಭದ್ರನು ಜಯಶೀಲನಾಗಿ ಶಿವನಿಗೆ ಕಾಣಿಕೆಗಳನ್ನು ತಂದನು। ಇದು ದಕ್ಷನ ಮುಕಟ। ಇದನ್ನು ಕಾಣಿಕೆಯಾಗಿ ತಂದಿದ್ದೇನೆ ತೆಗೆದುಕೊಳ್ಳು। ಇದನ್ನು ವಿಷ್ಣುವಿನ ಚಕ್ರ। ಇದನ್ನು ನಿನಗೆ ಕಾಣಿಕೆಯಾಗಿ ತಂದಿದ್ದೇನೆ। ತೆಗೆದುಕೊಳ್ಳು। ಇದು ಬ್ರಹ್ಮನ ಕಿವಿ। ಇದನ್ನು ನಿನಗೆ ಕಾಣಿಕೆಯಾಗಿ ತಂದಿದ್ದೇನೆ। ತೆಗೆದುಕೊಲ್ಲು। ಇದು ಸರಸ್ವತಿಯ ಮೂಗು। ಇದನ್ನು ನಿನಗೆ ಕಾಣಿಕೆಯಾಗಿ ತೆಗೆದುಕೊಳ್ಳು। ಇದು ಸರಸ್ವತಿಯ ಮೂಗು। ಇದನ್ನು ನಿನಗೆ ಕಾಣಿಕೆಯಾಗಿ ತಂದಿದ್ದೇನೆ। ತೆಗೆದುಕೊಳ್ಳು। ಇದು ಲಕ್ಷ್ಮಿಯ ತುರುಬು। ಇದನ್ನು ನಿನಗೆ ಕಾಣಿಕೆಯಾಗಿ ತಂದಿದ್ದೇನೆ। ತೆಗೆದುಕೊಳ್ಳು। ಇದು ಇಂದ್ರನ ಕಣ್ಣು । ಇದನ್ನು ನಿನಗೆ ಕಾಣಿಕೆಯಾಗಿ ತಂದಿದ್ದೇನೆ। ತೆಗೆದುಕೊಳ್ಳು। ಇದು ಯಮನ ತೋಳು। ಇದನ್ನು ನಿನಗೆ ಕಾಣಿಕೆಯಾಗಿ ತಂದಿದ್ದೇನೆ। ತೆಗೆದುಕೊಳ್ಳು। ಇದು ಸೂರ್ಯ ದೇವನ ಹಲ್ಲು। ಇದನ್ನು ನಿನಗೆ ಕಾಣಿಕೆಯಾಗಿ ತಂದಿದ್ದೇನೆ। ತೆಗೆದುಕೊಳ್ಳು। ಎಂದು ವೀರಭದ್ರನು ತಾನು ಜಯಹೊಂದಿದ ಕುರುಹಾಗಿ ಜಯದ ವಿವಿಧ ಕಾಣಿಕೆಗಳನ್ನು ತಂದಿದ್ದನು। ಆ ಎಲ್ಲ ಕಾಣಿಕಗಳನ್ನು ಒಡಪಿನಂತೆ ಒಡೆ ಒಡೆದು ಒಂದೊಂದನ್ನೇ ಶಿವನ ಪಾದಕ್ಕೆ ಕಾಣಿಕೆಯಾಗಿ ಅರ್ಪಿಸಿದನು। ಹುಬ್ಬಳ್ಳಿಯ ಬಮ್ಮಾಪುರ ಗಲ್ಲಿಯ ವೀರಭದ್ರ ಕಡೆ। ಕಡೆ॥

ಮೊರಬದಾವಾಸ ಶ್ರೀ ವೀರೇಶ್ವರ ನಾಮಾವಳಿಯೊಂದಿಗೆ ಸಾಮೂಹಿಕ ಪ್ರಾರ್ಥನೆ :

ವೀರೇಶ ನಿನ್ನ ನಾಮಸ್ಮರಣೆ । ನೇಮದಿಂದ ಮಾಡುವೆನು ।
ಘೋರ ಪಾಪವನ್ನು ದೂರ ಮಾಡು । ಮಹಾಶೂರನೇ ।
ಶರಣು ಬಂದೆನಯ್ಯ ನಾನು। ಹರಣ ಸಮಯದಲ್ಲಿ ನೀನು।
ಚರಣ ಪಿಡಿದು ಬೇಡುವೆನು । ದಯೆ ಕರುಣಿಸಯ್ಯ ರೌದ್ರವತಾರನೇ ।
ಹಿಂದೆ ನಾನು ನಾನಾ ಯೋನಿಗಳಲಿ। ನಾನಾ ರೀತಿಯಿಂದ ಬೆಂದು ಬಂದೆ ।
ಇಂದು ಈ ಭವಭಾಧ ಬಿಡಿಸು । ಇಂಧುದರ ಸುತನೇ ।
    ಭ್ರಷ್ಟನೆನಿಸಬೇಡ ನನ್ನ। ಇಷ್ಟು ಮಾತ್ರ ಬೇಡಿಕೊಂಬೆ
    ಇಷ್ಟು ಕಷ್ಟ ಬಿಡಿಸಿ ನೀನು। ಶಿಷ್ಟರೊಡನೆ ಬೆರಸು ನನ್ನ ವೀರೇಶನೇ।
ಮದನ ಸುಟ್ಟ ಸುತನೇ। ಹೃದಯದಲ್ಲಿ ಹುದುಗಿಸಯ್ಯ
ವದನದಿಂದ ನುಡಿಯುವಂತೆ। ಮಾಡು ಸದಮಲ ಹೃದಯನೇ।

ಕವಿದು ಯಿರುವ ಪಾಪ। ಸವೆದು ಪೋಗುವಂತೆ ಮಾಡಿ ।
ಜವನ ಬಾಧೆ ಬಿಡಿಸು । ಭವಭಯ ಹರ ವೀರೇಶನೇ ।
ಮೊದಲು ನಿನ್ನ ಪಾದ ಪೂಜೆ। ವದಗುವಂತೆ ಮಾಡು ಎನ್ನ।
ಹೃದಯದೊಳಗೆ ಸದನ ಮಾಡು। ಮುದದಿ ಶ್ಯಾಮಾಂಗನೇ ।
ಹುಸಿಯ ನಾಡಿ ಹೊಟ್ಟೆ ಹೊರೆವ। ವಿಷಯದಲ್ಲಿ ರಸಿಕನೆಂದು।
ಹುಸಿಯ ನಾಡದಂತೆ ಮಾಡು। ಶಾಂತ ಭದ್ರನೇ।
ಬಿದ್ದು ಭವದನೇಕ ಜನುಮ। ಬದ್ಧನಾಗಿ ಕಲುಷದಿಂದ।
ಗೆದ್ದು ಪೋಪ ಬುದ್ಧಿ ತೋರೋ। ಸಿದ್ಧಿ ಪ್ರದಾಯನೇ।
ಕಾಮಕ್ರೋಧ ಬಿಡಿಸಿ ನಿನ್ನ। ನಾಮಜಿಹ್ವೆಯೊಳಗೆ ನುಡಿಸೋ।
ಓಂ ಶ್ರೀ ವೀರಭದ್ರಾಯನೆಂಬ। ನಾಮ ನುಡಿಸು ವೀರೇಶನೆ।
ಮಂಕುಬುದ್ಧಿ ಕವಿದ ನನ್ನ। ಕಿಂಕರನನ್ನ ಮಾಡಿಕೊಳ್ಳೋ।
ಶಂಕರನ ಸುತನಾದ। ಶ್ರೀ ಸರ್ವೇಶ್ವರನೇ।
ಮಂದ ಮತಿಯಾ ನಾನು। ಚಂದದಿಂದ ಜ್ಞಾನವಿತ್ತು ನೀನು
ಸಂದೇಹ ಮಾಡದಲೆ ಸಲಹು। ತ್ರಿಜಗ ವಂದಿತನೇ।
ಏಸು ಜನ್ಮ ಬಂದರೇನು। ದಾಸನಲ್ಲವೇನು ನಾನು।
ಘಾಸಿ ಮಾಡದಿರು ನೀನು। ಲೋಕ ನೇತ್ರನೇ।
ಬದ್ಧಕಾಯೆ ಕುಹಕ ಮನದಿ। ಬುದ್ಧಿ ಶೂನ್ಯನಾದ ನನ್ನ।
ತಿದ್ದಿ ಮನ ಹೃದಯ। ಶುದ್ಧ ಮಾಡೋ (ಅಮೃತೇಶನೇ) ರುದ್ರೇಶನೆ।
ಜನನಿ ಜನಕ ನೀನೆ ಎಂದು। ನೆನೆವೆನಯ್ಯ ಅನುದಿನದಿ ನಾನು।
ಮುಕ್ತಿ ಪಾಲಿಸೆಂದು। ಶ್ರೀ ಮೃತ್ಯುಂಜಯನೇ।
ಹರುಷದಿಂದ ನಿನ್ನ ನಾಮ। ಸ್ಮರಣೆ ಸ್ಮರಿಸುವಂತೆ ಮಾಡಿ
ನಿನ್ನ ಚರಣದಲ್ಲಿ ಪ್ರೇಮ। ಸಲ್ಲಿಸುವ ಪ್ರಣಾಮ ಸ್ಥಿರಾಯನೆ।
ಸಂಚಿತದಿಂದ ಬಂದ ಪಾಪ। ಕಿಂಚಿತ್ತಾದ ಕರ್ಮ ಪೀಡೆ।
ವಂಚನೆಲ್ಲದೆ। ಕಳೆಯೋ ನೀನು। ಶುದ್ಧಾತ್ಮನೆ।
ಜ್ಞಾನ ಭಕ್ತಿ ಕೊಟ್ಟು ನೀನು। ನಿನ್ನ ಧ್ಯಾನದಲ್ಲಿಟ್ಟು ನಾನು।
ಬೇಡಿಕೊಂಬೆ ಹೀನ ಬುದ್ಧಿ। ಬಿಡಿಸು ಜ್ಞಾನ ಮೂರ್ತಿಯೇ।
ಜಪಾತಪಾನುಷ್ಠಾನವಿಲ್ಲ। ಕುಪಥಗಾಮಿಯಾದ ಎನ್ನ
ಕೃಪೆಯ ಮಾಡಿ ಕ್ಷಮಿಸಬೇಕು। ಹೇ ಕೃಪಾಶಿಂಧುವೇ।
ಮೊರೆಯಯಿಡುವೆನಯ್ಯಾ ನಾನು ನಿನಗೆ। ವರವ ನೀಡು ನೀನು ನನಗೆ।
ಶುಭಮತಿಯನಿತ್ತು ಸಲಹು ನೀನು ಅಭಯ ಹಸ್ತನೇ।

ಸತ್ಯವಾದ ನಿನ್ನ ನಾಮಗಳನು ನಿತ್ಯಾದಲ್ಲಿ ಪಠಿಸುವಂತೆ
ಸತ್‌ಕೀರ್ತಿಯಿಂದ ಸಲಹು। ಜ್ಞಾನಗಮ್ಯ ಶ್ರೀ ವೀರೇಶನೇ
ಮರೆಯದಲೆ ವೀರೇಶನಾಮ, ಬರೆದು ಓದಿ ಅರಿದು ಕೇಳ್ವರಿಗೆ
ಕರೆದು ವರವಿತ್ತು ಮುಕ್ತಿಯ। ಕೊಡು ಮೊರಬದಾ ವೀರೇಶನೇ।

ಎಂ. ಎಂ. ಮರುಳಸಿದ್ಧಯ್ಯ

೧. ಮೊರಬದ ವಾಸ ಶ್ರೀ ವೀರಭದ್ರೇಶ್ವರ :

ಕಂಡೆನು ನಾನಿಂದಿಗೇ ಮೊರಬದಲಿ ನೆಲಸಿದ; ಶ್ರೀ ವೀರಭದ್ರೇಶ್ವರನಾ ಕಂಡು ಧನ್ಯನಾದೇ. ಮೃಡಕುಮಾರ ನಡಿಗಳನು ಬಿಡದೇ ಭಜಿಸುವೆನು ಶ್ರೀ ಶಿವಕುಮಾರನಾಂದ ಕಡು ಕೋಪದಿಂದಲಿರುವ ಶಿವನಾ ॥ ನಡುಗಣ್ಣಿನಿಂದಲಿ ಹುಟ್ಟಿದವನಾ ತಡಮಾಡದಲೆ ಬಂದು ತೋರೋ ವೈರಿಗಳನೆಂದು ಕೋಲಾಹಲ ಗೈದ ವೀರಭದ್ರೇಶ್ವರನಾ ಖಡುಗ ಹಲಗೆ ಧನು ಶರಗಳನು ಕರದಿ ಹಿಡದವನಾ, ತೋರಿದವರ ತಲೆಗಡಿದು ಇಂದವನಾ ಖಡು ಕೋಪದಿಂಬಂದು ಕಿಡಿಗಳ ನುಗುಳುತಲಿ, ಘುಡು ಘುಡಿಸುತ ದಕ್ಷ ಯಾಗವ ಧ್ವಂಸ ಗೈದವನಾ ರನ್ನದ ಹಾವುಗೆ ಚಿನ್ನದ ಸರಗೆಜ್ಜೆ ಧರಿಸಿದ; ಚಿನ್ನಾದ ಉನ್ನತ್ತಾದ ಪಾದಗಳ ಕಂಡೆನು. ನಾ ಉನ್ನತದಲಪ್ಪುವ ಉರಗಾಭರಣವ ಧರಿಸಿ, ಕಾಶಿಯ ಕಟ್ಟಿದ ಮೀಸೆಯ ತಿರುವಿದಾ ವೀರೇಶನಾ ॥ ಉತ್ತಮದ ಎದೆಬಾಹು ಒತ್ತಾರದ ಮಡಿಗಳನು; ಹೊದ್ದ ಮುದ್ದು ಮಹದೇವನಾ ಮಗನಾ. ಮೆರೆವ ಭುಜ ಕೀರ್ತಿ ತೋಳ ನಾಗಬಂಧಿಗಳ, ಕಡಗ ಕಂಕಣ ಸುರಿಗೆ ಕಿರುಗತ್ತಿಗಳ ಹಿಡಿದಮಾರ್ಗ ಮೆರೆವ ಕುದುರೆಯ ಮೇಲೆ ಹೃದಯ ಕಮಲತಾ, ಮುದದಿ ಕುಳಿತಿರುವ ಮುಕ್ಕಣ್ಣ ತಾಸುತನಾ ಕನಕ ಕರ್ಣ ಕುಂಡಲಗಳ ಮೇಲೊಪ್ಪುವ, ಮುತ್ತಿನೋಲೆಗಳ ಧರಿಸಿದ ಶ್ರೀ ವೀರಭದ್ರೇಶ್ವರನಾ ಮುತ್ತು ಮಾಣಿಕ, ನವರತ್ನ, ವತ್ತಿ ಸೇರಿಸಿದ ಕಂಠ ಮಾಲೆಗಳ ಧರಿಸಿದ ನೀಲಕಂಠನ ಸುತ. ವರಿದು ತಿರುವಿದ ಮೀಸೆ ಕಿಡಿಯನುಗುಳುವ ಕಣ್ಣು ಮುಡಿಯ ಮೇಲೆ ನಾಗರೆಡೆ ಕಿರೀಟವ ಧರಿಸಿದಾತನಾ.

ದೊಂಬರ ಶ್ರೀ ಶಾಂತ ಮಲ್ಲೇಶ್ವರ :

ಶಾಂತ ಮಲ್ಲೇಶಾ ಶ್ರೀ ಶಾಂತ ಮಲ್ಲೇಶಾ, ಹಳೇಪಠೆಯ ವಾಸ ಶ್ರೀ ಶಾಂತ ಮಲ್ಲೇಶಾ, ಕಟ್ಟೆಯ ದಡದಲ್ಲಿ ಮರಡಿಯ ಅಡಿಯಲ್ಲಿ ಹೊಡೆದು ಕುಳಿತಿರುವ ಶ್ರೀಕಾಂತ ಮಲ್ಲೇಶಾ ॥ ಪ ॥.

ಎದ್ದು ಬಾ। ಬೇಗನೆದ್ದು ಬಾ । ಉದ್ಧರಿಸಲು ಈ ನಮ್ಮ ಊರನು ನೀನೆದ್ದು ಬಾ...॥
ಅರಿಯದಾ ಬಾಲಗೋವಳರು ಬಂದು ; ಹೊಡೆದು ನಿಂದರೋ ಬಿಡದೆ ಲಿಂಗವನಂದು
ಅರಿತು ನೀ ಕುಳಿತೇ ನವಲಿಂಗಗಳಾಗಿ; ಬೆದರಿ ಬಂದರೋ ಬಾಲಗೋವಳರು ಮನೆಮನೆಗಾಗಿ
ಕರೆಕರೆದು ತರುತಿದ್ದರೋ ತುರುಗಳ; ನೊರೆಹಾಲ ಮರೆಯದೇ ಮಲ್ಲೇಶ ನಿನಗೆ ॥ಪ॥
ಕರೆಯದೇ ಬರುತಿಹರು ಗೋವಳರು; ಬೆಳಗಿನಲಿ ಬಳಗದಿಂದೊಡಗೂಡಿ ನಿನ್ನಯ ಗುಡಿಗೇ

ಬೆರೆಸಿದಾ ಅನ್ನ ಕಲಸೋಗರ ಬಿರುಸಿನಲಿ; ನಾದಿದಾ ಬುತ್ತಿ ಯನು ತರುತಿಹರು ನಿತ್ಯದೀ
ತುರುಕರೆಯದಿರಲು ಕೇಳಿದರು ಬಾಲರನು; ಪಾಲಕರು ವಿನಯದಲಿ ಏನಾಯ್ತೆಂದೂ.
ತುಂಡು ಮಾಡಿದೆವು ಒಂದು ಲಿಂಗವನು; ಒಂಭತ್ತು ಭಾಗವಾಯ್ತೆಂದು ಭಯದೀ.
ತುಂಡು ಮಾಡಿದಾ ತಪ್ಪಿಗೇ - ತಂದೊಪ್ಪಿಸುವೆವು ಒಂಭತ್ತು ಮುಚ್ಚೋಳಿಗೆಗಳ ನಿನಗೇ
ಮಳೆಯು ಬಾರದಾ ದಿನಗಳಲೀ; ಇಳೆಯ ಜನರೊಡಗೂಡಿ ಬರುತಿಹರು ಬಳಿಗೇ
ಮಳೆಯ ಮಲ್ಲೇಶನೇ ಮಳೆಯ ತರಿಸ್ಯೆಂದು ಗೆಳೆಯರೆಲ್ಲರು ಸೇರಿ ಬಳಲಿ ನಿಂದಿಹರು ಇಲ್ಲಿ.
ಮನಳೆಯ ತರಿಸಲು ನೀ ಘುಡುಗಿನಾರ್ಭಟದೀ ಬಿಡದೇನೆದ್ದು ಬಾ ಶಾಂತ ಮಲ್ಲೇಶಾ.

ನಿನ್ನ ಹೊರತಾಗಿ ಅನ್ಯರೆನಗಿಲ್ಲ ಶ್ರೀ ವೀರಭದ್ರೇಶರನೇ

ದೇವಾಧಿದೇವನೇ ಭವತಾಪ ಹರನೇ; ಶ್ರೀ ವೀರಭದ್ರೇಶ್ವರನೇ ರಕ್ಷಿಸೋ ನಮ್ಮ ನೀ
॥ಪ॥ ನಿನ್ನ ಹೊರತಾಗಿ ಅನ್ಯರೆನಗಿಲ್ಲ; ಭಿನ್ನವಿಸಿಕೊಳ್ಳುವೆ ಶ್ರೀ ವೀರೇಶ್ವರನೇ
ಜೋಡಿಸಿಕರಗಳನು, ನಾ ಬೇಡಿಕೊಳ್ಳುವೆನು; ಬಿಡದೆ ನೀ ಸಲಹಯ್ಯ ಕಡುಭಾದೆ ಪಡುತಿರುವೆನು
ಭಿನ್ನವೇಕೆನ್ನ ಮೇಲೆ ಅನ್ಯಾಯವ ಮಾಡಲಾರೆ; ಮನ್ನಿಸಿ ಪೊರೆಯಯ್ಯ ಚನ್ನವೀರೇಶ್ವರನೇ.
ಕಾಯಪೋಷಣೆಗಾಗಿ, ಹೇಯಕರ್ಮಂಗಳ ಕಾಲಕಾಲದಿ ಮಾಡ್ದೆನೋ ನನಗರಿಯದಂತೆ

।೧॥ ಪ್ರಾರಬ್ಧ ದಿ ಪಡೆದು ಆಗಾಮಿಲಂಟಕೊಂಡು ಸಂಚಯದಿ ತುಂಬಿ ಬಂದಾ ಕರ್ಮ
ಏನು ಹೇಳದಿ ದೇವ ನಾನು ಮಾಡಿದಾ ಕರ್ಮವ ನಾನಾ ವಿಚಿತ್ರವ್ವೆ ಶ್ರೀ ವೀರಭದ್ರೇಶ್ವರನೇ
ಹೀನ ಜನರೊಳಗಾಟ ಶ್ವಾನಾದಿಗಳ ಕೂಟವ ಬಿಡಿಸಿ ಜ್ಞಾನವಂತನ ಮಾಡೋ ನೀ
ದುಷ್ಟ ಜನರೊಡಗೂಡಿ ನಾಸತಿ ಭ್ರಷ್ಟನಾದೆನು ಜಾಣತನದಲಿ ಬಾಳಿ ಬದುಕುವಂತೆ ಮಾಡೋ

।೨॥ ಜೇನಿನೊಳಗೆ ಬಿದ್ದ ನೊಣದಂತೆ ಸತಿಸುತ ಜನಪಾಶದಾಶೆಗೆ ಬಿದ್ದು ಬಳಲಿ ಬೆಂಡಾಗಿಹೆನು
ಕಾಯವುಸ್ಥಿರವಲ್ಲ ಎನ್ನೊಳುಮಾಯೆಯು ತುಂಬಿಹುದಲ್ಲ ಪ್ರಾಯಮದದಿ ಅನ್ಯಂ ಕೂಡಿದೆನಲ್ಲ
ಎಷ್ಟು ಹೇಳಲಿ ನನ್ನ ಕಷ್ಟ ಕೋಟಲೆಗಳನ ಸುಟ್ಟೀಗಬೇಯುತಿಹೆನಾ
ಕಷ್ಟಪಟ್ಟ ಮಗನೆಂದು ದೃಷ್ಟಿ ನೀ ಬಿಟ್ಟು ಶಿಷ್ಯನೆನಿಸೋ ಸೃಷ್ಟಿಗೀಶನ ಸುತನೇ.

।೩॥ ಕ್ರೋಧಕುಹಕರನ್ನು ಭೇಧಿಸಿ ಪೊರೆದಂತೆ ಮೋದದಿಂದಲಿ ಪೊರೆಯಯ್ಯ ಶ್ರೀ ವೀರಭದ್ರೇಶ್ವರನೇ ತಿರುತಿರುಗಿ ಹುಟ್ಟದಂತೆ ಪರರ ಬಾಯ್ ಬಿಡಿಸದಂತೆ ಪರಿಪರಿಯ ಪಾಪಗಳ ಮಾಡದಂತೆ ಜನನ ಮರಣಗಳೆರಡು ಪರಿಹರವಾ ಮಾಡಯ್ಯ ಭವ ಭಯ ಹರನೇ ಶ್ರೀ ವೀರಭದ್ರೇಶ್ವರನೇ ಅರಿವು ಮರೆವು, ಪುಣ್ಯ ಪಾಪ ಸಹಿತ ನಿಮ್ಮ ಕರುಣಾ ಚರಣಕ್ಕೆ ಇಡುವೆನು. ನಾನು ಅಭಯವ ಕರುಣಿಸು ಶುಭವನು ತೋರಿಸು ಕೃಪಾಕರ, ಕರುಣಾಕರ ಶ್ರೀ ವೀರಭದ್ರೇಶ್ವರಾ.

ಜೋಗುಳ ಹಾಡು ಶ್ರೀ ವೀರಭದ್ರೇಶ್ವರ :

ಲಾಲಿ ಶ್ರೀ ವೀರಭದ್ರೇಶ್ವರನೇ, ಲಾಲೀ ಶ್ರೀ ಶಿವಕುಮಾರ ಸುತನೇ ಲಾಲಿ ಜೋ ಜೋ.

॥ಪ॥ ಪನ್ಮುನಿ ವಂದಿತನೇ ಲಾಲೀ, ಶ್ರೀ ಮಾತಿ ಗಿರಿಜೆಯ ಹರಣವ ಕಾಯ್ದವನೇ ಲಾಲೀ, ಕನಕ ರತ್ನಗಳ ಕಾಲ್ಗಳನೇ ಹೂಡೀ. ನಾಲ್ಕು ವೇದಗಳನ್ನು ಸರಪಳಿಯ ಮಾಡೀ. ಆನೇಕ ಭೂ ಮಂಡಲದ ಹಲಗೆಯನೇ ಮಾಡಿ, ದುಯ್ಯಾಲೆಯನು ಮಾಡಿ. ಆಶ್ಚರ್ಯ ಜನಕವಾಗಿ ನಿರ್ಮಿಸಿದ, ಪಚ್ಚೆಯ ತೊಟ್ಟಿಲಲ್ಲಿ ಶ್ರೀ ವೀರಭದ್ರೇಶ್ವರನಾ ತೂಗಿದರು ಲಾಲೀ...

।೧॥ ನಿರ್ಮಲ ಚರಿತ್ರನೆಂದು, ವೀರಧರ್ಮ ಸಂಸ್ಥಾಪಕನೆಂದು। ಮರ್ಮಧರ್ಮಗಳ ಹಾಡಿ ತೂಗಿದರೂ ಗೌರೀ ಶಾರದೆ। ಲಕುಮಿಯರು ಸೋಮಶೇಖರ ಸುತನೆಂದು ನೇಮದಿಂದಲಿ ಹಾಡುತ ತೂಗಿದರೂ, ಸೃಷ್ಠಿಕರ್ತನ ಸುತನೆಂದು ಜಗದೊಳಗೆ ದುಷ್ಟ ಶಿಕ್ಷಣ, ಶಿಷ್ಟ ರಕ್ಷನೆಂದು ದೃಷ್ಟಿ ತೆಗೆದು ತೂಗಿದರೂ ವೃದ್ಧನಾರಿಯರೆಲ್ಲರೂ ಜಗದೊಳಗೆ ಪ್ರಸಿದ್ಧಗಿವನೆಂದು ಶುದ್ಧಾನುರಾಗದಿಂದ ಹಾಡಿ ತೂಗಿದರು ಲಾಲೀ.

।೨॥ ದೇವಾದಿ ದೇವನೆಂದು ಈ ಶಿಶುವು ಭಾವನಾತೀತನೆಂದು ದೇವಗಂಧರ್ವರಾಡಿ ತೂಗಿದರು ಲಾಲೀ. ಲೀಲಾ ಮೂಲ ಕಾರಣ ಜೋ ಜೋ.. ಬಾಲ ಲೀಲೆಯಲಿ ಕೋಲಾಹಲ ಗೈದವನೇ ಜೋ ಜೋ. ಭಕ್ತರ ಚಿಂತಾಮಣಿಯೇ ಜೋ.. ಜೋ... ಶುಭ ಗುಣಂಗಳ ಮಹಾಖಣಿಯೇ, ವೀರಭದ್ರೇಶ್ವರನೇ... ಸರ್ವ ದೇವೋತ್ತಮ ನಾದವನೇ ಜೋ...ಜೋ..... ಭಕ್ತರ ಪೊರೆವ ವೀರಭದ್ರೇಶ್ವರನೇ ಜೋ...ಜೋ... ಕಾಮಿತ ಜನರಿಗೆ ಕಾಮಿತಾರ್ಥವ, ಪ್ರೇಮದಿಂದಲಿ ಕೊಡುವ ಸ್ವಾಮಿ ವೀರಣ್ಣನೇ ಜೋ..ಜೋ...ಬನ್ನಿರಿ ಬನ್ನೀರಿ ಬನ್ನೀರಿ ಭಕ್ತರೇ ಮೊರಬಕೇ ಶ್ರೀ ವೀರಭದ್ರೇಶ್ವರನಾ ದರ್ಶನಕೇ.

॥ಪ॥ ಮೊರಬಕೇ ಬಂದರೇ ಮಹಿಮೆಯು ತಿಳಿತೈತಿ । ಇಲ್ಲೇ ಆಲಿಸಿದರೇನು ಫಲಸಿಗತೈತಿ ॥ಪ॥
ಮಡಿಯಿಂದಲೀ ಗುಡಿಗೇ ನೀ ನಡೆದು ಬಾರಾ ।
ರಂಗುರಂಗಿನಾ ಗುಡಿಯಾ ನೀನೋಡು ಬಾರಾ। ಕಣ್ಣಾರ ನೋಡೊಮ್ಮೆ ಶ್ರೀ ವೀರಭದ್ರೇಶ್ವರ ದೇವರಾ। ಗುಡಿಯ ಶಿಖರ ಇರುವುದು ಬಹು ಸುಂದರಾ। ಬಸವೇಶ ಭರ್ಮಪ್ಪ ಹಿಂದೂ ಮುಂದಿದ್ದಾರಾ।
।೧॥ ಹದಿನಾರು ಕಂಬದ ದ್ವಾರ ಮಂಟಪ ಕಟ್ಟಿಸುತಾರಾ । ಸತ್ಯದಲಿ ನಡೆವ ಭಕ್ತರು ನಿತ್ಯ ಬರುತಿರುತಾರ। ರಥಸಪ್ತಿಮಿಯ ದಿನ ಚೀಟಿಗೆ ಕಳುಹಿಸುತಾರಾ। ಭಾರತ ಹುಣ್ಣಿಮೆಯ ಸಡಗರ ನೀ ನೋಡುಬಾರಾ । ಪಲ್ಲಕ್ಕಿ ಉತ್ಸವದ ವೈಭವದಿ ಮಾಡುತಾರಾ। ಊರನಾರಿಯರೆಲ್ಲಾ ಬೆಲ್ಲ ಅನ್ನದಾರತಿ ತರುತಾರಾ। ತಾಳಮೇಳ ನಂದಿಧ್ವಜ ಹೊತ್ತವರು ಕುಣಿಯುತಾರಾ। ದಿನದಿನವು ಮಾಡುವ ಪೂಜೆಯಲಂಕಾರಾ। ಆಚಾರ ಸುವಿಚಾರ ಜಂಗಮರಿರುತಾರಾ । ನಿತ್ತವೂ ಬರುವ ಭಕ್ತರಿಗೆ ಸಂಕಲ್ಪ ಮೊದಲು ಮಾಡ್ತಾರಾ। ಭಕ್ತಿ ಭಾವದಲಿ ತರತರದ ಅಡಿಗೆ ಮಾಡಿಸುತ್ತಾರ। ಮುಕ್ತಿ ಹೊಂದಲು ಪಂಚ

ಜಂಗಮರಿಗೆ ನೀಡುತಾರಾ। ಮಂಗಳವಾರವೆಂದು ಈತನ ವಾರವೆಂದು ಆಚರಿಸುತಾರಾ। ಕಡುಬು ಕುಂಬಳಾಯಿ ತೊಗೆ ಎಡೆ ಮಾಡುತ್ತಾರ। ಒಂದಲ್ಲ ಎರಡಲ್ಲ ಒಂಭತ್ತು ದೇವರಿದ್ದಾರಾ। ಬಂದವರು ತಪ್ಪದಲೆ ಒಂಭತ್ತು ಎಡೆ ಮಾಡಿಸುತ್ತಾರೆ ಬಾದ್ರಪದ ಪಾಡ್ಯಮಿಯು ಶತಕುಂಭಾಭಷೇಕ ಮಾಡಿಸುತಾರಾ। ಅಂದೆ ತಪ್ಪದಲೇ ಸಹಸ್ರ ಬಿಲ್ವಾರ್ಚನೆ ಮಾಡುತ್ತಾರೆ ಅಶ್ವೀಜ ಮಾಸದಲಿ ನವಮಿ ಪೂಜೆ ಆಚರಿಸುತಾರಾ। ಬನ್ನಿ ಬಂಗಾರವನು ಸರ್ವರೂ ತೆಗೆದುಕೊಳ್ಳುತ್ತಾರೆ.

।೫।। ಬನ್ನಿ ಮುಡಿದ ವಾರವೇ ರಥೋತ್ಸವವೆಂದು ಹೇಳುತಾರಾ। ಅಂದೇ ಗೌರಿ ಮಣ್ಣನು ಹಾಕುತ್ತಾರೆ. ಕಾರ್ತೀಕ ಮಾಸದ ಅಮವಾಸೆಯ ಮೊದಲ ಮಂಗಳವಾರ। ಶ್ರೀ ವೀರಭದ್ರೇಶ್ವರ ಕಾರ್ತಿಕ ಮಾಡುತ್ತಾರೆ. ಊರಗೌಡರು ಶಾನುಭೋಗರು ಬಣಕಾರರು ಆಚರಿಸುತಾರಾ। ಭಾರಿ ಜನರೊಡಗೂಡಿಸ ಬನ್ನಿ ಮುಡಿಯು ತಾರಾ ಕಾರ್ತೀಕ ಮಾಸದ ಮೊದಲ ಮಂಗಳವಾರ ಕಾರ್ತೀಕ ಮಾಡುತಾರ। ಅಂದೇ ಗೌರಿ ಮಣ್ಣನು ಹಾಕುತಾರ ಕಾರ್ತೀಕ ಮಾಸದ ಅಮವಾಸೆಯ ಮೊದಲ ಮಂಗಳವಾರ। ಶ್ರೀ ವೀರಭದ್ರೇಶ್ವರ ಕಾರ್ತೀಕ ಮಾಡುತ್ತಾರ ಊರ ಗೌಡರು ಶಾನುಭೋಗರು ಬಣಕಾರರು ಆಚರಿಸುತಾರಾ । ಕಾರ್ತೀಕ ಉಳಿದ ಭಕ್ತರಾಚದರಿಸುತಾರಾ। ಪ್ರತಿ ಮಂಗಳವಾರ ಭಕ್ತರು ದೀಪಾರಾಧನೆ ಮಾಡಿಸುತಾರಾ। ಕಲ್ಲುಕಂಬದ ಮೇಲಿನ ದೀಪಾರಾಧನೆ ನೋಡುಬಾರಾ। ಪುಷ್ಯ ಶುದ್ಧ ಪ್ರತಿಪದೆಯ ದಿನ ಪ್ರತಿ ಮನೆ ಆರತಿ ತರುತಾರಾ। ಮಠದ ಜಂಗಮರು ಹಾಸಿಗೆ ಬರಿಯುತಾರಾ। ತುಂಡುಲವಿಕ್ಕಿ ಒರೆದು ಚಾಕವನು ಬರಿಯುತಾರಾ। ಕಂಕಣ ಕಟ್ಟಿ ಬಾಸಿಂಗ ಧರಿಸಿ ಸ್ವಾಮಿ ಕೂಡ್ರಿಸುತಾರಾ।

।।೬।। ಕಾಳಿಕಾಂಬೆ ಶ್ರೀ ವೀರಭದ್ರೇಶ್ವರರ ಉತ್ಸವದಲಿರುತಾರಾ। ಕಾಶಿ ಕುದುರೆ ಪೂಜೆ ಕಟ್ಟಿ ಸ್ವಾಮಿ ಕರೆತರುತಾರಾ। ಕ್ರಮದಿ ಸಂಭ್ರಮದಿಂದಲಿ ಮದುವೆ ಮಾಡಿಸುತಾರಾ। ರಾಣ್ಯದ ನಾರಿಯರು ಶೋಬಾನ ಹಾಡುತ್ತಾರ। ಪುಶ್ಯಶುದ್ಧ ಜಾತಿಯ ದಿನ ಪ್ರತಿ ಮನೆ ಹಲಗೆ ಹೊರಡಿಸುತ್ತಾರ। ಪುರವಂತದವರ ಆರ್ಭಟ ನೋಡಬಾರಾ। ಪಂಚಮಿಯ ದಿನ ವೈಭದಿ ತೇರನ ಎಳೆಯುತಾರಾ। ಭಾರಿ ಜನರೊಡಗೂಡಿ ಇರತ್ತೈತಿ ಪೂರಾ।

।೭।। ಮರುಪರಿಶಯದಿನದಲ್ಲಿ ಕೂಡ್ಲಿಗಿ ಭಕ್ತರಿರುತಾರಾ ಪೂರಾ। ಜವಳ ದೀರ್ಘದಂಡ ನಮಸ್ಕಾರ ಮಾಡುತಾರ। ಕುಪ್ಪಿನಕೇರಿ ಭಕ್ತರು ಬರುತಾರ। ರಾತ್ರಿ ಗುಡಿಯಲಿರುತಾರಾ। ಕೊಬ್ಬರಿ ಸುಡುವುದು ಮದಾಲ್ಸಿ ಮಾಡುತಾರ। ನವಮಿಯ ದಿನದಂದು ಊರವರೆಲ್ಲ ಗುಡಿಯ ತೊಳೆಯುತಾರಾ। ಕ್ರಿಯಾ ಕೊಟ್ಟು। ಪೂಜೆ ಮಾಡಿಸುತಾರಾ(ರಾತ್ರಿಯಲಿ ಹಣ್ಣು ಕಾಯಿ ಕರ್ಪೂರ ಮಾಡಿಸುತಾರಾ। ಎಡೆ ಮಾಡಿ ಹೋಗುತಾರಾ। ಸತ್ಯ ಸಂಗತಿ ಎಷ್ಟೊಂದು ಹೇಳಿದರೂ ಕಡಿಮೆ ಅಂತಾರ। ಬಂದೊಮ್ಮೆ ನೋಡು ವೈಭವ ಪೂರಾ। ಸತ್ಯದಲಿ ಸ್ಮರಿಸು ನೀ ವೀರಭದ್ರೇಶ್ವರ ದೇವರ। ಹೊಂದುವೇ ಮುಕ್ಕು ಭವದೀ। ದರ್ಣ.

ಅಧ್ಯಾಯ - ಎಂಟು

ಸಮಾರೋಪ

ಅಧ್ಯಾಯ - ಎಂಟು

ಸಮಾರೋಪ

ಗ್ರಾಮ ದೈವಗಳ ಅಧ್ಯಯನದಿಂದ ಇಂದಿನ ಸಂಕೀರ್ಣ, ಸಂಕ್ರಮಣ, ಸಂಸ್ಕೃತಿಯ ಸ್ಥಿತಿಗತಿಯನ್ನು ಅರಿತುಕೊಳ್ಳಬಹುದಾಗಿದೆ. ಅದೇರೀತಿ ಗತ ಸಂಸ್ಕೃತಿಯ ಕುರುಹುಗಳನ್ನು ಕೆಲವು ಮಟ್ಟಿಗೆ ತಿಳಿದುಕೊಳ್ಳಬಹುದಾಗಿದೆ.

ದೈವಕ್ಕೆ ಸಂಬಂಧಿಸಿದಂತಹ ಆಚರಣೆಗಳು ಬಹಳ ಹಿಂದಿನ ಕಾಲದಿಂದಲೂ ನಡೆಯುತ್ತಾ ಬಂದಿದೆ. ಅದರಲ್ಲೂ ಶ್ರೀ ವೀರಭದ್ರೇಶ್ವರನಿಗೆ ಸಂಬಂಧಿಸಿದಂತೆ ಅನೇಕ ಆಚರಣೆಗಳು ಇಂದಿಗೂ ನಡೆಯುತ್ತವೆ. ಕರ್ನಾಟಕದಲ್ಲಿ ಶ್ರೀ ವೀರಭದ್ರೇಶ್ವರನಿಗೆ ವಿಶಿಷ್ಟವಾದ ಮಹತ್ವವಿದೆ. ಏಕೆಂದರೆ ಆತ ಇಲ್ಲಿನ ಜನಪ್ರಿಯವಾದ ದೇವರುಗಳಲ್ಲಿ ಒಬ್ಬ. ಜಾತಿ ಜನಾಂಗಗಳ ಬೇಧವಿಲ್ಲದೆ, ಎಲ್ಲರಿಗೂ ಬೇಕಾದ ದೇವರಾಗಿ ಜನಪ್ರಿಯಗೊಂಡಿದ್ದಾನೆ. ಶ್ರೀ ಸ್ವಾಮಿಗೆ ಸಂಬಂಧಿಸಿದಂತೆ ಜೀವನಾವರ್ತನದಲ್ಲಿ ಮತ್ತು ವಾರ್ಷಿಕಾವರ್ತನದಲ್ಲಿ ಅನೇಕ ಆಚರಣೆಗಳು ನಡೆಯುತ್ತವೆ. ಗ್ರಾಮದ ಇತರೆ ದೈವಗಳಿಗಿಂತ ಶ್ರೀ ವೀರಭದ್ರಸ್ವಾಮಿಗೆ ನಮ್ಮ ಜನಪದರು ನಾಯಕನ ಸ್ಥಾನ ಕೊಟ್ಟಿದ್ದಾರೆ. ಆತನ ಜಾತ್ರೆಯನ್ನು ಸಹ ಬಹು ವಿಜೃಂಭಣೆಯಿಂದ ನೆರವೇರಿಸುತ್ತಾರೆ. ವೀರಶೈವ ವರ್ಗಗಳ ಎಷ್ಟೋ ಕುಟುಂಬಗಳಿಗೆ ಈತನು ಮನೆದೇವರಾಗಿದ್ದಾನೆ.

ಶ್ರೀ ವೀರಭದ್ರೇಶ್ವರನಿಗೆ ಸಂಬಂಧಿಸಿದಂತೆ ನಡೆಯುವ ಆಚರಣೆಗಳಲ್ಲಿ ಶಸ್ತ್ರ ಹಾಕಿಕೊಳ್ಳುವ ಪದ್ಧತಿಗೆ ವಿಶಿಷ್ಟ ಸ್ಥಾನವನ್ನು ಕಲ್ಪಿಸಲಾಗಿದೆ. ಕರ್ನಾಟಕದ ಅನೇಕ ಕಡೆ ಈ ಪದ್ಧತಿ ಇಂದಿಗೂ ರೂಢಿಯಲ್ಲಿದೆ. ಈ ಆಚರಣೆ ಶ್ರೀ ವೀರಭದ್ರನಿಗೆ ಮಾತ್ರ ಸಂಬಂಧಿಸಿದ್ದು ಎಂದು ನಂಬಲಾಗಿದೆ.

ಶಸ್ತ್ರ ಹಾಕಿಸಿಕೊಳ್ಳುವ ಆಚರಣೆ ನಡೆಯುವ ಪ್ರತಿ ಊರುಗಳಲ್ಲಿಯೂ ಸಾಮಾನ್ಯವಾಗಿ ವೀರಭದ್ರೇಶ್ವರನ ದೇವಾಲಯಗಳು ಕಂಡುಬರುತ್ತವೆ. ಬಹಳ ಹಿಂದಿನ ಕಾಲದಿಂದಲೂ ಶಸ್ತ್ರ ಹಾಕುವ ಪದ್ಧತಿ ಇತ್ತೆಂದು ತಿಳಿದುಬರುತ್ತದೆ. ಇಂತಹ ಆಚರಣೆಗಳು ನಮ್ಮ ಜನಪದರ ನಂಬಿಕೆಯಾಗಿರುವುದರಿಂದ ಅವು ಇಂದಿಗೂ ಅಳಿಯದೇ ಉಳಿದುಕೊಂಡು ಬಂದಿವೆ.

ಪ್ರಸ್ತುತ ಸಂದರ್ಭದಲ್ಲಿ ಇಂತಹ ಅನೇಕ ಆಚರಣೆಗಳು ತಮ್ಮ ಮಹತ್ವವನ್ನು ಕಳೆದು ಕೊಳ್ಳುತ್ತಿವೆ. ದೇವರು ಹಾಗೂ ದೈವಗಳ ಬಗ್ಗೆ ನಂಬಿಕೆಗಳು ಕಡಿಮೆಗೊಳ್ಳುತ್ತಿವೆ. ವೈಜ್ಞಾನಿಕ ಪ್ರಗತಿಯಾದಂತೆಲ್ಲಾ ವಾಸ್ತವತೆಗೆ ಒತ್ತು ಕೊಡಲಾಗುತ್ತಿದೆ.

ಸಾಮಾಜಿಕವಾಗಿ ಅನೇಕ ಸ್ಥಿತ್ಯಂತರಗಳು ಏರ್ಪಟ್ಟಂತೆಲ್ಲಾ ಬದುಕಿನ ಮೌಲ್ಯಕ್ಕೆ ಮಹತ್ವ ಕೊಡಲಾಗುತ್ತಿದೆ. ಕೆಲವು ನಂಬಿಕೆಗಳಲ್ಲಿ ದೋಷಗಳನ್ನು ಗುರುತಿಸಲಾಗುತ್ತಿದೆ. ಉದಾಹರಣೆಗೆ: ಗುಗ್ಗಳ ಆಚರಣೆಯಲ್ಲಿ ಶಸ್ತ್ರ ಹಾಕುವ ಪದ್ಧತಿಯನ್ನು ಅನೇಕರು ವಿರೋಧಿಸುವ ಸಂದರ್ಭಗಳು ಕಂಡುಬರುತ್ತಿವೆ. ಆದೂ ಸತ್ಯವೂ ಕೂಡ. ಏಕೆಂದರೆ ಇತ್ತೀಚಿನ ಭಯಾನಕ ರೋಗ ಹಾಗೂ ಔಷಧಿ ದೊರಕದೇ ಇರುವ ಏಡ್ಸ್‌ನಂತಹ ಭಯಾನಕ ರೋಗ ಎಲ್ಲೆಡೆ ಆವರಿಸಿದೆ. ಇಂತಹ ಸಂದರ್ಭದಲ್ಲಿ ಶಸ್ತ್ರ ಹಾಕುವ ಪದ್ಧತಿಯ ಮೂಲಕ ಒಬ್ಬರ ರಕ್ತದ ಕಣಗಳು ಮತ್ತೊಬ್ಬರಿಗೆ ಪಸರಿಸಿ ರೋಗ ಉಲ್ಬಣಗೊಳ್ಳುವ ಅಪಾಯವಿದೆ. ಆದರೆ ಯಾವುದೋ ಪೂರ್ವಗಾಮಿ ಒತ್ತಡಕ್ಕೆ ಒಳಗಾಗಿ ಅನೇಕ ಪ್ರದೇಶಗಳಲ್ಲಿ ಇಂದಿಗೂ ದೈವಗಳಿಗೆ ಸಂಬಂಧಿಸಿದ ಆಚರಣೆಗಳನ್ನು ವ್ಯತ್ಯಾಸಗೊಳಿಸಿದೇ ಹಾಗೆಯೇ ಮುಂದುವರಿಸಿಕೊಂಡು ಬಂದಿದ್ದಾರೆ.

ಪ್ರಸ್ತುತ ಸನ್ನಿವೇಶಗಳಲ್ಲಿ ಹೊಟ್ಟೆಪಾಡಿಗಾಗಿ ದೊಡ್ಡ ದೊಡ್ಡ ಪಟ್ಟಣಗಳಿಗೆ ಹೋಗುವವರು; ಅಲ್ಲಿ ವೀರಭದ್ರನ ಆಚರಣೆಗಳನ್ನು ಆಚರಿಸಲು ಸಾಧ್ಯವಿಲ್ಲ. ಈಗಿನ ವಿದ್ಯಾಭ್ಯಾಸದ ಸಂದರ್ಭದಲ್ಲಿ ಕಲಿತಂತಹ ವಿದ್ಯಾವಂತರು, ಅವರಿಗೆ ಎಷ್ಟೇ ಸಮಾಳ ಸೋನಾಯಿ ಇಂತಹ ಕೆಲವು ವಾದ್ಯಗಳನ್ನು ಬಾರಿಸಲು ಬಂದರೂ ತುಂಬಾ ಸಂಕೋಚಿತರಾಗಿರುತ್ತಾರೆ. ಈ ಎಲ್ಲಾ ಕಾರಣದಿಂದ ಈ ವೀರಭದ್ರೇಶ್ವರನ ಆಚರಣೆಯು ಆಧುನಿಕ ಜಗತ್ತಿನಲ್ಲಿ ಕುಂಠಿತವಾಗುತ್ತಾ ಬಂದಿದೆ ಎಂದು ಹೇಳಬಹುದು. ನಾಗರೀಕತೆಯತ್ತ ನಾಗಾಲೋಟದ ಕಡೆಗೆ ಓಡುತ್ತಿರುವ ಈ ಜಗತ್ತಿಗೆ ಕಾಲಕ್ಕೆತಕ್ಕಂತೆ ಬದಲಾವಣೆ ಸಹಜ. ಆಧುನೀಕರಣ, ನಗರೀಕರಣದಂತಹ ಪರಿಸ್ಥಿತಿಯಲ್ಲಿ ಹುಟ್ಟು, ಮದುವೆ ಎಲ್ಲವೂ ಈಗಿನ ಮಾನವನಿಗೆ ಸಾಮಾನ್ಯ. ಕಾರಣ ವೈಜ್ಞಾನಿಕ ಯುಗದ ಮಾನವ ಎಲ್ಲಾ ವಿಷಯದಲ್ಲಿಯು ಹಿಂದೆ ಮುಂದೆ ನೋಡಿ ನಡೆಯಬೇಕು. ಆದರೆ ಹಿಂದಿನ ಜನಪದರು ಅಥವಾ ಕೆಲವು ಹಳ್ಳಿಗಾಡಿನ ಜನರು ಈಗಲೂ ಅವರ ಪದ್ಧತಿಯನ್ನು ಮುಂದುವರಿಸಿಕೊಂಡು ಹೊರಟಿದ್ದಾರೆ. ಆದರೆ ಕಾಲಕ್ರಮೇಣ ಅವುಗಳು ನಶಿಸುತ್ತವೇನೋ ಎಂಬಂತಹ ವಾತಾವರಣ ನಿರ್ಮಾಣವಾಗುತ್ತಿದೆ.

ಇಂತಹ ಪರಿಸ್ಥಿತಿಯಲ್ಲಿ ಆಚರಣೆಗಳು ಹಿಂದೆ ಇದ್ದಂತೆ ಈಗ ಇಲ್ಲ ಹಾಗೂ ಈಗ ಇರುವ ಆಚರಣೆ ಮುಂದೆ ಇರಲಿಕ್ಕಿಲ್ಲ. ಅವುಗಳಲ್ಲೂ ಚಿಕ್ಕಪುಟ್ಟ ಮಾರ್ಪಾಟುಗಳಾಗುತ್ತಾ ಹೋಗುತ್ತವೆ. ಅದೇನೇ ಇದ್ದರೂ ನಮ್ಮ ಆಚರಣೆಗಳು ನಶಿಸಬಾರದು. ಈ ಹಿನ್ನೆಲೆಯಲ್ಲಿ ಅವುಗಳನ್ನು ಪೋಷಿಸಿಕೊಂಡು ಹೋಗುವಲ್ಲಿ ಇಂದಿನ ನಮ್ಮ ಜವಾಬ್ದಾರಿ ಹೆಚ್ಚಾಗಿದೆ.

ಶ್ರೀ ವೀರಭದ್ರ ದೇವರಿಗೆ ಸಂಬಂಧಿಸಿದಂತೆ ಪವಾಡದ ಹೆಸರಿನಲ್ಲಿ ಶಸ್ತ್ರ ಹಾಕಿಸಿಕೊಳ್ಳುವ ಆಚರಣೆಗಳು ಇತ್ತೀಚಿಗೆ ಅರ್ಥ ಕಳೆದುಕೊಳ್ಳುತ್ತಿವೆ. ಅಂದರೆ ಅವುಗಳಿಗೆ ಸಂಬಂಧಿಸಿದ ಕಥೆಗಳು ದಂತ ಕಥೆಯಂತಾಗುತ್ತಿವೆ. ಪ್ರಶ್ನಿಸುವ ಪ್ರವೃತ್ತಿಯುಳ್ಳವರಿಗೆ ಸರಿಯಾದ ಉತ್ತರವನ್ನೇ ನೀಡದ ಪರಿಸ್ಥಿತಿ ಉಂಟಾಗಿದೆ. ಯಾವುದಕ್ಕಾಗಿ ಆಚರಿಸಬೇಕು?, ಯಾವ ಉದ್ದೇಶಕ್ಕಾಗಿ ಆಚರಿಸಬೇಕು? ಎಂಬಂತಹ ತಿಳುವಳಿಕೆ ಕಡಿಮೆಗೊಳ್ಳುತ್ತಿದೆ. ಆಚರಣೆಗಳನ್ನು ಆಚರಿಸುವವರಲ್ಲಿ ಸರಳತೆಗಳು ಏರ್ಪಟ್ಟು, ಹಿಂದಿನ ಉದ್ದೇಶಗಳನ್ನು ಮರೆಯಲಾಗುತ್ತಿದೆ. ಈ ಹಿನ್ನೆಲೆಯಲ್ಲಿಯೂ ಈ ಪದ್ಧತಿಗಳು ತಮ್ಮ ಮಹತ್ವವನ್ನು ಕಳೆದುಕೊಳ್ಳುತ್ತಿವೆ. ಪ್ರಸ್ತುತ ಸಂದರ್ಭದಲ್ಲಿ ಕೆಲವು ಊರುಗಳಲ್ಲಿ ಮಾತ್ರ ಇಂತಹ ಆಚರಣೆಗಳು ಕಂಡುಬರುತ್ತವೆ. ನಾವು ಇಂತಹ ಆಚರಣೆಗಳನ್ನು ಕಳೆದುಕೊಳ್ಳುತ್ತೇವೆ ಎಂಬಂತಹ ಆತಂಕಕ್ಕಿಂತ ಸಮಾಜಕ್ಕೆ ಅವುಗಳ ಉಳಿವಿನಿಂದಾಗಬಹುದಾದ ಲಾಭವೇನು ಎಂಬುದನ್ನು ಸಹ ಅರ್ಥ ಮಾಡಿಕೊಳ್ಳಬೇಕಾಗಿದೆ. ಆಚರಣೆಗಳು ಕೇವಲ ಡಾಂಭಿಕತೆಯಿಂದ ಕೂಡಿದ್ದರೆ, ಅವು ಸಾಮಾಜಿಕ ಪ್ರಗತಿಗೆ ಕುಂಠಿತವನ್ನುಂಟು ಮಾಡುತ್ತದೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ.

ಮೊರಬದ ಈರಣ್ಣನ ದೈವಗಳು ಸಾಂಸ್ಕೃತಿಕ ಅಧ್ಯಯನದಿಂದ ಹಲವಾರು ವಿಶೇಷತೆಗಳು ತಿಳಿದುಬರುತ್ತವೆ. ಸಂಶೋಧನಾ ಕಾರ್ಯದಲ್ಲಿ ಇಂತಹ ವಿಶೇಷಗಳನ್ನು ಗುರುತಿಸಲಾಗಿದೆ. ಈ ಅಧ್ಯಯನದಿಂದ ಜನಪದ ಜೀವನದ ಸಾಂಸ್ಕೃತಿಕ ಸ್ಥಿತ್ಯಂತರಗಳನ್ನು ಕಂಡುಕೊಳ್ಳಬಹುದಾಗಿದೆ. ದೈವಗಳ ಆಚರಣೆಯ ವಿಷಯದಲ್ಲಿ ಜನಪದರು ತಮ್ಮನ್ನು ತಾವು ತೊಡಗಿಸಿಕೊಳ್ಳುವುದರ ಮೂಲಕ ಸಮಾಜದಲ್ಲಿ ಭಯದ ಮೂಲಕವೋ ಅಥವಾ ಭಕ್ತಿಯ ಮೂಲಕವೋ ಒಂದು ನಿಬಂಧನೆಯನ್ನು ಹೇರಿ, ಆ ಮೂಲಕ ಸಮಾಜದಲ್ಲಿ ಶಿಸ್ತನ್ನು ತರುವುದಾಗಿದೆ. ಅಂತಹ ಒಂದು ಶಿಸ್ತು ಹೇಗೆ ಪರಿವರ್ತಿತಗೊಳ್ಳುತ್ತಾ ಬಂದಿದೆ, ಆ ಮೂಲಕ ಸಮಾಜದಲ್ಲಾದ ಬದಲಾವಣೆಗಳೇನು ಎಂಬುದನ್ನು ವಿಶ್ಲೇಷಿಸುವುದೇ ಈ ಅಧ್ಯಯನದ ಒಟ್ಟಾರೆ ಆಶಯವಾಗಿದೆ.

ಒಟ್ಟಿನಲ್ಲಿ ಮೊರಬದ ಈರಣ್ಣನ ದೈವಗಳು ಒಂದು ಸಾಂಸ್ಕೃತಿಕ ಅಧ್ಯಯನ ಎಂಬ ಸಂಶೋಧನಾತ್ಮಕ ಪ್ರಬಂಧದ ವ್ಯಾಪ್ತಿಯು ಎಂಟು ಅಧ್ಯಾಯವನ್ನೊಳಗೊಂಡಿದೆ. ಅಧ್ಯಯನದ ಉದ್ದೇಶ ಹಾಗೂ ವ್ಯಾಪ್ತಿಯನ್ನು ಒಂದನೇ ಅಧ್ಯಾಯದಲ್ಲಿ ವಿವರಿಸಲಾಗಿದೆ. ಅಧ್ಯಾಯ ಎರಡರಲ್ಲಿ ಮೊರಬ ಗ್ರಾಮದ ಪದನಿಷ್ಪತ್ತಿ ಹಾಗೂ ಊರಿನ ಜನರ ಜೀವನ, ಜಾತಿ, ಕೃಷಿ, ಉದ್ಯೋಗ ಇತ್ಯಾದಿಯಾಗಿ ಚರ್ಚಿಸಲಾಗಿದೆ. ಪ್ರಬಂಧದ ಮುಖ್ಯ ಭಾಗವಾದ ಮೂರನೆಯ ಅಧ್ಯಾಯದಲ್ಲಿ ಮೊರಬದ ಈರಣ್ಣನ ಐತಿಹ್ಯ, ದೇವಸ್ಥಾನ ಸ್ಥಾಪನೆ, ಚರಿತ್ರೆ, ಜಾತ್ರೆ, ಕಲೆ ಮತ್ತು ವಾಸ್ತುಶಿಲ್ಪವನ್ನು ಕುರಿತು ವಿಶ್ಲೇಷಿಸಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಮೊರಬದ ಈರಣ್ಣನ ಆಚರಣೆಗಳನ್ನು ವಿವರಿಸಲಾಗಿದೆ. ವೀರಭದ್ರೇಶ್ವರನ ದಿನನಿತ್ಯದ ಆಚರಣೆಗಳು, ವಾರ್ಷಿಕ ಆಚರಣೆಗಳು, ಹಬ್ಬಹರಿದಿನಗಳು, ಆ ದಿನದಲ್ಲಿ ಗ್ರಾಮದ ಸಮುದಾಯಗಳು ಆಚರಿಸುವ ರೂಢಿ ಅಥವಾ ಪದ್ಧತಿಗಳು, ಉತ್ಸವಗಳು ಹೀಗೆ ಅನೇಕ ವಿಧವಾಗಿ ಪ್ರಸ್ತುತ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ.

ಐದನೆಯ ಅಧ್ಯಾಯವು ಶ್ರೀ ವೀರಭದ್ರೇಶ್ವರ ಮತ್ತು ಇತರೆ ದೈವಗಳ ಸಂಬಂಧದ ಬಗ್ಗೆ ತುಲನೆಮಾಡಲಾಗಿದೆ. ಆರನೆ ಅಧ್ಯಾಯದಲ್ಲಿ ಮೊರಬದ ಈರಣ್ಣಗೆ ಹರಕೆ ಸಲ್ಲಿಸುವ ಪದ್ಧತಿ ಮತ್ತು ಆತನ ಬಗೆಗಿರುವ ನಂಬಿಕೆಗಳ ಕುರಿತು ಚರ್ಚಿಸಲಾಗಿದೆ. ಅಧ್ಯಾಯ ಏಳರಲ್ಲಿ ಶ್ರೀ ವೀರಭದ್ರೇಶ್ವರನ ಕುರಿತು ಇರುವ ಸಾಹಿತ್ಯ, ಒಗಟು, ಕಥೆ, ಐತಿಹ್ಯ ಮುಂತಾದವುಗಳ ಬಗ್ಗೆ ವಿವರಿಸಲಾಗಿದೆ. ಅಧ್ಯಾಯ ಎಂಟು ಸಮಾರೋಪವಾಗಿದೆ.

ಅಧ್ಯಯನದ ಕೊನೆಯ ಭಾಗವಾದ ಅನುಬಂಧದಲ್ಲಿ ಮೊರಬ ಗ್ರಾಮದ ಹಿರಿಯರ ಹಾಗೂ ಮಾಹಿತಿ ಸಂಗ್ರಹಿಸಲು ನೆರವಾದವರ 'ವಕ್ತೃಗಳ ವಿವರ'ವನ್ನು ಸೇರಿಸಲಾಗಿದೆ. ಶ್ರೀ ವೀರಭದ್ರೇಶ್ವರನ ದೇವಾಲಯಗಳು, ಮೂರ್ತಿಗಳು ಹಾಗೂ ಇತರೆ ದೇವಾಲಯ, ಮೂರ್ತಿಗಳ ಛಾಯಾಚಿತ್ರಗಳನ್ನು ಲಗತ್ತಿಸಲಾಗಿದೆ. ಗ್ರಂಥ ಸೂಚಿಯನ್ನು ನೀಡಲಾಗಿದೆ.

- - -

ವಕ್ತೃ ವಿವರ

ಕ್ರ. ಸಂ	ಹೆಸರು	ವಿದ್ಯಾಭ್ಯಾಸ	ವಯಸ್ಸು	ವೃತ್ತಿ	ಜಾತಿ	ವಾಸಸ್ಥಳ
1.	ಎಂ.ಎಂ. ಮರುಳುಸಿದ್ಧಯ್ಯ	೧೦ನೇ ತರಗತಿ	೫೫	ವ್ಯವಸಾಯ	ಜಂಗಮರು	ಮೊರಬ
2.	ಎಂ. ವೀರಭದ್ರಸ್ವಾಮಿ	ಪಿ.ಯು.ಸಿ.	೨೬	ವ್ಯವಸಾಯ	ಜಂಗಮರು	ಮೊರಬ
3.	ವೀರಭದ್ರಾಚಾರಿ	೪ನೇ ತರಗತಿ	೩೨	ಬಡಿಗತನ	ವಿಶ್ವಕರ್ಮ	ಮೊರಬ
4.	ಪ್ರಕಾಶ	೯ನೇ ತರಗತಿ	೧೫	ವಿದ್ಯಾಭ್ಯಾಸ	ವಿಶ್ವಕರ್ಮ	ಮೊರಬ
5.	ಶಂಕ್ರಮ್ಮ	೫ನೇ ತರಗತಿ	೨೮	ಗೃಹಿಣಿ	ವಿಶ್ವಕರ್ಮ	ಮೊರಬ
6.	ಪೂಜಾರ್ ಮುಪ್ಪಿನಪ್ಪ	೫ನೇ ತರಗತಿ	೬೫	ಅರ್ಚಕರು	ಪೂಜಾರ್	ಮೊರಬ
7.	ಎಂ. ವೀರಣ್ಣ	೪ನೇ ತರಗತಿ	೪೨	ವ್ಯಾಪಾರಿ	ವೀರಶೈವ	ಮೊರಬ
8.	ಕೆ. ಶರಣಪ್ಪ	೭ನೇ ತರಗತಿ	೭೦	ವ್ಯವಸಾಯ	ವೀರಶೈವ	ಮೊರಬ
9.	ಜಿ. ಲಿಂಗನಗೌಡ್ರು	೧೦ನೇ ತರಗತಿ	೭೨	ಗ್ರಾಮ ಪಟೇಲರು	ವೀರಶೈವ	ಮೊರಬ
10.	ಕರ್ಣಂ ಶಂಕರರಾಯರು	೧೦ನೇ ತರಗತಿ	೭೦	ಶಾನುಭೋಗರು	ಬ್ರಾಹ್ಮಣರು	ಮೊರಬ
11.	ಕೆ. ವೀರಪ್ಪ	೧೦ನೇ ತರಗತಿ	೬೮	ನಿವೃತ್ತ ಶಿಕ್ಷಕರು	ವಾಲ್ಮೀಕಿ	ಮೊರಬ
12.	ಕೆ. ಶರಣಪ್ಪ	೭ನೇ ತರಗತಿ	೭೦	ಬಣಕಾರ	ವೀರಶೈವ	ಮೊರಬ
13.	ಹೆಚ್. ಬುಡೇನ್‌ಸಾಬ್	೭ನೇ ತರಗತಿ	೬೮	ವ್ಯವಸಾಯ	ಮುಸ್ಲಿಂ	ಮೊರಬ
14.	ಪಿ. ಬಾಲಪ್ಪ	ಬಿ. ಎ.	೩೫	ಅನುದಾನ ಶಿಕ್ಷಕ	ಯಾದವರು	ಮೊರಬ
15.	ಹರಿಜನ ಈರಪ್ಪ	ಬಿ. ಎ.	೨೮	ಸಂಯೋಜಕರು	ಹರಿಜನ	ಮೊರಬ
16.	ವಿ. ಅಂಜೇನಪ್ಪ	ಇಲ್ಲ	೩೫	ವ್ಯವಸಾಯ	ಭೋವಿ	ಮೊರಬ
17.	ಪೂಜಾರ್ ಗುರುಸಿದ್ಧಪ್ಪ	೫ನೇ ತರಗತಿ	೬೯	ವ್ಯವಸಾಯ	ಪೂಜಾರ್	ಮೊರಬ
18.	ಕೆ. ಎಂ. ಶರಣಯ್ಯ	ಬಿ. ಎ.	೩೬	ವ್ಯವಸಾಯ	ಜಂಗಮರು	ಮೊರಬ
19.	ಎ. ಉಮಾಪತಿ	೧೦ನೇ ತರಗತಿ	೩೫	ವ್ಯವಸಾಯ	ವೀರಶೈವ	ಮೊರಬ
20.	ಬಿ. ಬಸಣ್ಣ ಆಚಾರ್	೫ನೇ ತರಗತಿ	೬೮	ಗ್ರಾಮ ದೇವರ ಪೂಜಾರರು	ವಿಶ್ವಕರ್ಮ	ಮೊರಬ

ಗ್ರಂಥ ಋಣ

1.	ಶ್ರೀರಾಮ ಇಟ್ಟಣವರ	→	೧೯೯೫ ಹಲಗಲಿ : ಗ್ರಾಮ ಜಾನಪದ, ವೀರಶೈವ ಅಧ್ಯಯನ ಅಕಾಡೆಮಿ, ಶ್ರೀ ನಾಗನೂರು ರುದ್ರಾಕ್ಷಿಮಠ, ಬೆಳಗಾವಿ
2.	ಸಿ. ಯಂ. ವೀರಭದ್ರಯ್ಯ	→	೧೯೯೦ ಶ್ರೀ ವೀರೇಶ ವಿಜಯ ಶ್ರೀ ಮದುಜ್ಜಯನೀ ಜಗದ್ಗುರು ಜ್ಞಾನಗುರು ವಿದ್ಯಾಪೀಠ ಪ್ರಕಾಶನ
3.	ರಾಘವಾಂಕ	→	ವೀರೇಶ ಚರಿತೆ
4.	ಗಣಪತಿ ಭಟ್. ಪಿ.	→	೧೯೮೯ ತುಳುನಾಡಿನ ಜಾನಪದ ನಂಬಿಕೆಗಳು (ಮಂಗಳೂರು ವಿಶ್ವವಿದ್ಯಾಲಯಕ್ಕೆ ಒಪ್ಪಿಸಿದ ಎಂ. ಫಿಲ್. ಪ್ರೌಢ ಪ್ರಬಂಧ).
5.	ದಾಸೇಗೌಡ. ಜಿ.ವಿ.	→	೧೯೭೩, ನಮ್ಮ ಜನಪದ ನಂಬಿಕೆಗಳು (ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ವಿಶ್ವವಿದ್ಯಾಲಯ, ಮೈಸೂರು).
6.	ನಾಗರಾಜಯ್ಯ ಹಂಪಾ	→	೧೯೮೫ ಕರ್ನಾಟಕದ ಜಾತ್ರೆಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
7.	ವೀರಣ್ಣ ದಂಡೆ	→	೧೯೯೩ ಕನ್ನಡ ಜಾನಪದ ಪ್ರಜ್ಞೆ ಕವಿಮಾರ್ಗ ಪ್ರಕಾಶನ, ಕಲುಬುರ್ಗಿ.
8.	ಸುಜಾತ ಅಕ್ಕಿ	→	೨೦೦೧, ತಂಬ್ರಹಳ್ಳಿಯ ಬಂಡೆ ರಂಗನಾಥೇಶ್ವರ ಜಾತ್ರೆ, ಜಾನಪದೀಯ ಅಧ್ಯಯನ. ಮೈಸೂರು ವಿಶ್ವವಿದ್ಯಾಲಯಕ್ಕೆ ಒಪ್ಪಿಸಿದ ಜಾನಪದ ಸ್ನಾತಕೋತ್ತರ ಪರೀಕ್ಷೆಗಾಗಿ ಸಾದರ ಪಡಿಸಿದ ಕಿರು ಪ್ರಬಂಧ.
9.	ಉಮಾಪತಿ. ಬಿ.	→	೨೦೦೨, ಕಡಲಬಾಳು ಆಂಜನೇಯಸ್ವಾಮಿ - ಸಾಂಸ್ಕೃತಿಕ ಅಧ್ಯಯನ (ಕನ್ನಡ ವಿಶ್ವವಿದ್ಯಾಲಯಕ್ಕೆ ಒಪ್ಪಿಸಿದ ಎಂ. ಫಿಲ್. ಸಂಪ್ರಬಂಧ).
10.	ಹಿರೇಮಠ. ಎಸ್. ಎಸ್.	→	೧೯೯೩, ಜಾತ್ರೆಗಳು, ಸಮತಾ ಪ್ರಕಾಶನ, ಹೊಸಪೇಟೆ

11.	ಲಕ್ಕಪ್ಪಗೌಡ. ಹೆಚ್.ಜೆ.	→	೧೯೯೭, ಜಾನಪದ ಕೈಪಿಡಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
12.	ಲಿಂಗಯ್ಯ. ಡಿ.	→	೧೯೮೪, ಕರ್ನಾಟಕದ ಗ್ರಾಮ ದೇವತೆಗಳು
13.	ಲಕ್ಷ್ಮಣ್ ತೆಲಗಾವಿ (ಸಂ)	→	೧೯೯೧, ಸಂಶೋಧನೆ, ಡಾ. ಎಂ.ಚಿದಾನಂದಮೂರ್ತಿ, ಅಭಿನಂದನ ಸಮಿತಿ, ಬೆಂಗಳೂರು.
14.	ರಮೇಶ್	→	ಉಜ್ಜಿನಿ ಗ್ರಾಮ ಅಧ್ಯಯನ (ಕನ್ನಡ ವಿಶ್ವವಿದ್ಯಾಲಯಕ್ಕೆ ಒಪ್ಪಿಸಿದ ಎಂ.ಫಿಲ್. ಸಂಪ್ರಬಂಧ).

ಭಾವಚಿತ್ರಗಳು



ಶ್ರೀ ಸಣ್ಣ ವೀರಭದ್ರೇಶ್ವರ ದೇವಾಲಯ



ಶ್ರೀ ಸಣ್ಣ ವೀರಭದ್ರೇಶ್ವರ ಸ್ವಾಮಿ



ಶ್ರೀ ದೊಡ್ಡ ವೀರಭದ್ರೇಶ್ವರ ದೇವಾಲಯ



ಶ್ರೀ ದೊಡ್ಡ ವೀರಭದ್ರೇಶ್ವರ ಸ್ವಾಮಿ



ಶ್ರೀ ವೀರಭದ್ರೇಶ್ವರ ಸ್ವಾಮಿಯ ರಥೋತ್ಸವ



ಶ್ರೀ ವೀರಭದ್ರೇಶ್ವರ ಸ್ವಾಮಿಯ ರಥ



ನಿಲುಗಂಬ



ಶ್ರೀ ಸ್ವಾಮಿಯ ಉತ್ಸವ ಮೂರ್ತಿ



ಶ್ರೀ ಸ್ವಾಮಿಗೆ ಕಂಕಣ ಕಟ್ಟುವುದು



ವೀರಗಾಸಿ ಕುಣಿತ



ಶ್ರೀ ಶಾಂತ ಮಲ್ಲೇಶ್ವರನ ಗುಡಿ



ಶ್ರೀ ಶಾಂತ ಮಲ್ಲೇಶ್ವರ



ಶ್ರೀ ಯಲ್ಲಮ್ಮ



ಗ್ರಾಮ ದೇವತೆ ಶ್ರೀ ದುರುಗಮ್ಮ



ಶ್ರೀ ಪಾದಗಟ್ಟಿ ಬಸವೇಶ್ವರ



ಶ್ರೀ ಉಡುಸಲಮ್ಮ




ಶ್ರೀ ರಂಗಪ್ಪ ಸ್ವಾಮಿ



ಶ್ರೀ ಹನುಮಪ್ಪ



ಮುಸ್ಲಿಂ ಜನಾಂಗದ ಮಸೀದಿ



ಶಾಸನಕಲ್ಲು



ಶ್ರೀ ಸ್ವಾಮಿಯ ಪಾಲಕಿ



ಶ್ರೀ ಪತ್ರಿ ಬಸವೇಶ್ವರ